ಆಗಸ್ಟ್ 17, 2025

41ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್


1998

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹20/-

## ಭಿನ್ನಮತ ಸ್ಫೋಟಕ್ಕೆ ವಿಜಯೇಂದ್ರ ಬಲಿ?

# ರಾಜ್ಯ ಬಿಜೆಪಿ ಅಧ್ಯಕ್ಷರಾಗ್ತಾರಾ ವಿ. ಸೋಮಣ್ಣ?!



## ಕನಕಪುರದಲ್ಲಿ ಲಾಂಗು-ಮಚ್ಚುಗಳ ಸದ್ದಿಗೆ ಜನ ತತ್ತರ!



## ಪ್ರೇಮಿಸಲು ಒಪ್ಪದ ವಿವಾಹಿತೆಯನ್ನು ಕೊಂದು ತಾನೂ ಸೂಸೈಡ್ ಮಾಡಿಕೊಂಡ ಪಾಗಲ್!

## ಜಾನಕಲ್ ಗ್ರಾ.ಪಂ. ಸದಸ್ಯೆ ಗಂಡನ ತೆಗೆದುಬಿಟ್ಲು!






# ವಿ.ಸೋಮಣ್ಣಗೆ ರಾಜ್ಯ ಬಿಜೆಪಿ ಅಧ್ಯಕ್ಷ ಪಟ್ಟ ಒಲಿಯುವುದೇ?!


**ರಾಜ್ಯ ಬಿಜೆಪಿಯಲ್ಲಿ ಭಿನ್ನಮತೀಯ ಚಟುವಟಿಕೆಗಳು ಮುಂದುವರೆದಿದ್ದು, ಅಧ್ಯಕ್ಷಗಾದಿ ಬದಲಾವಣೆಗೆ ಭಿನ್ನಮತೀಯರು ಪಟ್ಟು ಹಿಡಿದಿರುವುದು ಹಳೇ ವಿಚಾರ. ಶಿಸ್ತಿನ ಪಕ್ಷ ಬಿಜೆಪಿಯೊಳಗೆ ಭಿನ್ನಮತ ಬೇಡ, ಎಲ್ಲರೂ ಒಗ್ಗಟ್ಟಾಗಬೇಕು ಎಂಬ ಹಿನ್ನಲೆಯಲ್ಲಿ ಹಿರಿಯರು, ವರಿಷ್ಠರು ಮಾಡಿದ ಸಂಧಾನಗಳು ವಿಫಲವಾಗಿವೆ! ಯಾರು ಎಷ್ಟು ಪ್ರಯತ್ನ ಪಟ್ಟರೂ ರಾಜ್ಯ ಬಿಜೆಪಿಯಲ್ಲಿ ಭಿನ್ನಮತೀಯ ಚಟುವಟಿಕೆಗೆ ಇಂದಿನವರೆಗೂ ಬ್ರೇಕ್ ಬಿದ್ದಿಲ್ಲ! ರಾಜ್ಯಾಧ್ಯಕ್ಷ ಸ್ಥಾನ ಬದಲಾವಣೆ ಪಟ್ಟನ್ನು ಯತ್ನಾಳ್, ಸಿದ್ದೇಶ್ವರ್, ರಮೇಶ್ ಜಾರಕಿಹೊಳಿ, ಕುಮಾರ್ ಬಂಗಾರಪ್ಪ ಮುಂತಾದವರಿರೋ 'ರೆಬೆಲ್ ಟೀಮ್' ಸಡಿಲಿಸುತ್ತಿಲ್ಲ!! ಇದರ ಮಧ್ಯೆ ಮೊನ್ನೆ ವಿ. ಸೋಮಣ್ಣನವರ ಹೆಸರು ಕೇಳಿಬಂದಿದೆ!!!**

ರಾಜ್ಯ ಬಿಜೆಪಿಯಲ್ಲಿ ಭಿನ್ನಮತೀಯ ಚಟುವಟಿಕೆಗಳು ಯಾವುದೇ ಎಗ್ಗಿಲ್ಲದೇ ಮುಂದುವರೆದಿರುವುದು, ಅಧ್ಯಕ್ಷಗಾದಿ ಬದಲಾವಣೆ ಆಗಲೇಬೇಕು ಎಂದು ಭಿನ್ನಮತೀಯರು ಪಟ್ಟು ಹಿಡಿದಿರುವುದು ನಿಮಗೆಲ್ಲ ಗೊತ್ತೇ ಇದೆ. ಕೆಲವು ದಿನಗಳ ಹಿಂದೆ ಮಾಜಿ ಡಿಸಿಎಂ ಅಶ್ವತ್ಥ ನಾರಾಯಣಗೌಡರ ನಿವಾಸದಲ್ಲಿ ರೆಬೆಲ್ ನಾಯಕರು ಹಾಗೂ ಬಿ.ವೈ. ವಿಜಯೇಂದ್ರ ಬಣದ ನಡುವೆ ಸಂಧಾನ ಪ್ರಯತ್ನ ನಡೆದಿತ್ತು! ಆದರೆ ಅದು ಯಶಸ್ವಿ ಆಗಿಲ್ಲ ಎನ್ನಲಾಗಿದೆ. ಒಂದು ಸುತ್ತಿನ ಸಭೆಯಲ್ಲಿ ಸಕ್ಸಸ್ ಆಗದೆ ಇರಬಹುದು, ಹಾಗಂತ ಎರಡನೇ ಸುತ್ತಿನ ಪ್ರಯತ್ನ ನಿಲ್ಲಿಸಬಾರದು... ಎಂದು ಹಿರಿಯರಿಂದ ಸಲಹೆ ಬಂದ ಹಿನ್ನಲೆಯಲ್ಲಿ ಮತ್ತೊಂದು ಬಾರಿ ಪ್ರಯತ್ನ ನಡೆಸುವ ನಿಟ್ಟಿನಲ್ಲಿ ರಾಜ್ಯ ಬಿಜೆಪಿ ನಾಯಕರು ಪ್ರಯತ್ನ ಮುಂದುವರೆಸಿದ್ದಾರೆ!



ರೆಬೆಲ್ ಸ್ಟಾರ್ಸ್ ಪೈಕಿ ಮುಂಚೂಣಿಯಲ್ಲಿರುವ ಭಿನ್ನಮತೀಯ ಲೀಡರ್ ಯತ್ನಾಳ್ ಇತ್ತೀಚಿಗೆ ಬಿ.ವೈ ವಿಜಯೇಂದ್ರರ ಜೊತೆ ಕಾಣಿಸಿಕೊಂಡರು. ಓಹೋ ಎಲ್ಲಾ ಸರಿ ಹೋಯ್ತು... ಅಂದುಕೊಂಡರೆ ಏನೇನುಸರಿ ಹೋಗಲಿಲ್ಲ, ಬಸನಗೌಡ ಪಾಟೀಲ್ ಯತ್ನಾಳ್ ಸೇರಿದಂತೆ ಬಿಜೆಪಿ ಭಿನ್ನಮತೀಯರ ಪೈಕಿ ಯಾರೆಂದರೆ ಯಾರೂ 'ಅಧ್ಯಕ್ಷ' ಬದಲಾವಣೆಯ ಪಟ್ಟು ಸಡಿಲಿಸುತ್ತಿಲ್ಲ!

ಇತ್ತೀಚಿಗೆ ದಾವಣಗೆರೆಯಲ್ಲಿ ನಡೆದ ಜಿ.ಎಂ. ಸಿದ್ದೇಶ್ವರ ಜನ್ಮದಿನದ ಕಾರ್ಯಕ್ರಮದ ಸಂದರ್ಭದಲ್ಲಿ ಕೂಡ ರಹಸ್ಯ ಸಭೆ ನಡೆದಿತ್ತು! ಸದರಿ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆದು ಅರವಿಂದ ಲಿಂಬಾವಳಿ ಹೊಸ ಅಧ್ಯಕ್ಷರಾಗಲಿ ಎಂದು ತೀರ್ಮಾನಿಸಲಾಗಿತ್ತು! ಈ ಬಗ್ಗೆ ಬಹಿರಂಗವಾಗಿಯೇ ತಮ್ಮ ನಿಲುವನ್ನು ಸ್ಪಷ್ಟಪಡಿಸಿತ್ತು, ಬಿಜೆಪಿ ರೆಬೆಲ್ ಟೀಮ್! ಒಂದು ವೇಳೆ ಹೈ ಕಮಾಂಡ್ ಇದಕ್ಕೆ ಒಪ್ಪದೆ ವಿಜಯೇಂದ್ರ, ಅವರನ್ನೇ ಮುಂದುವರೆಸುವುದಾದರೆ, ವಿಜಯೇಂದ್ರಗೆ ಪೂರ್ಣ ಪ್ರಮಾಣದಲ್ಲಿ ಅಧಿಕಾರ ಕೊಡಬಾರದು. ರಾಜ್ಯ ಘಟಕದಲ್ಲಿ ನಮ್ಮ ತಂಡದಲ್ಲಿ ಗುರುತಿಸಿಕೊಂಡವರಿಗೆ ಹೆಚ್ಚಿನ ಅವಕಾಶ ಕೊಡಬೇಕು. ರಾಷ್ಟ್ರೀಯ ಕಾರ್ಯಕಾರಿ ಮಂಡಳಿಯಲ್ಲೂ ನಮಗೆ ಅವಕಾಶ ನೀಡಬೇಕು. ಬಸನಗೌಡ ಪಾಟೀಲ್ ಯತ್ನಾಳ್ ಹಾಗೂ ಕೆ.ಎಸ್.ಈಶ್ವರಪ್ಪ ಅವರ ಉಚ್ಚಾಟನೆಯನ್ನು ಕೂಡಲೇ ರದ್ದು ಮಾಡಬೇಕು... ಎಂಬಿತ್ಯಾದಿಯಾಗಿ ರೆಬೆಲ್ ಟೀಮ್ ಪಟ್ಟು ಹಿಡಿದಿತ್ತು! ಇಂತಿರ್ಪ ಬಿಜೆಪಿ ಭಿನ್ನಮತೀಯ ಟೀಮ್‌ನ ಪಟ್ಟುಗಳಿಗೆ ಬಿಜೆಪಿ ಹೈ ಕಮಾಂಡ್ ಯಾವ ನಿರ್ಧಾರ ಕೈಗೊಳ್ಳಲಿದೆಯೋ ಗೊತ್ತಿಲ್ಲ.








ಒಟ್ಟಿನಲ್ಲಿ, ಭಿನ್ನಮತಕ್ಕೆ ಬ್ರೇಕ್ ಹಾಕುವ ನಿಟ್ಟಿನಲ್ಲಿ ಹೈಕಮಾಂಡ್ ಅಂತೂ ಮಧ್ಯ ಪ್ರವೇಶ, ಅಶ್ವಥ್ ನಾರಾಯಣಗೌಡ, ಆರ್. ಅಶೋಕ್ ಮುಂತಾದವರ ಮೂಲಕ ಮಾಡಿ ಪ್ರಯತ್ನ ಪಡುತ್ತಲೇ ಇದೆ. ಲಭ್ಯ ಮಾಹಿತಿಗಳ ಪ್ರಕಾರ, ಹಿರಿಯ ಮುತ್ಸದ್ಧಿಯೊಬ್ಬರ ನಿವಾಸದಲ್ಲಿ ಶೀಘ್ರದಲ್ಲೇ ಮತ್ತೊಂದು ಸುತ್ತಿನ ಸಭೆ ನಡೆಯುವ ಸಾಧ್ಯತೆ ಇದೆ! ಈಗಾಗಲೇ ಪ್ರಹ್ಲಾದ್ ಜೋಶಿ ಅವರಿಗೆ ಭಿನ್ನಮತೀಯ ಚಟುವಟಿಕೆ ಶಮನ ಮಾಡುವ ಜವಾಬ್ದಾರಿಯನ್ನು ನೀಡಲಾಗಿದೆ. ಆದರೆ ಜೋಶಿ ಇದರಲ್ಲಿ ಎಷ್ಟರ ಮಟ್ಟಿಗೆ ಯಶಸ್ಸು ಕಾಣುತ್ತಾರೆ? ಎಂಬುದನ್ನು ಯಾರಿಂದಲೂ ಊಹೆ ಮಾಡಲಿಕ್ಕೆ ಆಗುತ್ತಿಲ್ಲ!



**ಸೋಮಣ್ಣ ಹೆಸರು ಮುನ್ನಲೆಗೆ...**

ವಿಜಯೇಂದ್ರ, ಕೆಳಗಿಳಿದರೆ ಇನ್ನಾರು? ಯಾರೋ ಹೇಳಿದರು ಅಂತಾ ಲಿಂಬಾವಳಿ ತಂದು ಕುರ್ಚಿ ಮೇಲೆ ಕೂರಿಸಿದರೆ ಜನ ಏನಂತಾರೆ? ಅವರೊಬ್ಬ ಕಳಂಕಿತ ನಾಯಕ! ಅವರೂ ಬೇಡ ಅಂತಾದರೆ ಇನ್ನಾರು?? ಎಂಬಿತ್ಯಾದಿಯಾಗಿ ವರಿಷ್ಠರು ಯೋಚನೆಯಲ್ಲಿ ಮಗ್ನರಾಗಿರುವಾಗಲೇ.... ಮೊನ್ನೆ ಮೊನ್ನೆ ಕೇಂದ್ರ ಸಚಿವ ವಿ. ಸೋಮಣ್ಣನವರ ಹೆಸರು ಮುನ್ನಲೆಗೆ ಬಂದಿದೆ! ಸೋಮಣ್ಣನವರನ್ನು ಬಿಜೆಪಿ ಅಧ್ಯಕ್ಷಗಾದಿ ಮೇಲೆ ಕೂರಿಸಿದರೆ ನಮ್ಮದೇನು ಅಭ್ಯಂತರವಿಲ್ಲ.... ಎಂಬುದಾಗಿ ಭಿನ್ನರ ಬಣ ತಿಳಿಸಿದೆ ಎಂಬ ಮಾಹಿತಿ ಕೂಡ ಕೇಳಿ ಬಂದಿದೆ! ಒಂದು ವೇಳೆ ವಿಜಯೇಂದ್ರರನ್ನು ಕೆಳಗಿಳಿಸಿದರೆ ಯಡಿಯೂರಪ್ಪ ಸುಮ್ಮನಿರುತ್ತಾರ? ಅವರ ಅಭಿಮಾನಿಗಳು ಸುಮ್ಮನಿರುತ್ತಾರ??





ನೆನಪಿರಲಿ, ವಿಜಯೇಂದ್ರ, ಅವರು ತಮ್ಮ ತಂದೆ ಬಿ.ಎಸ್. ಯಡಿಯೂರಪ್ಪ ನವರು ಮುಖ್ಯಮಂತ್ರಿಯಾಗಿದ್ದಾಗ ಅಂದರೆ, 2008-2011 ಮತ್ತು 2019-2021 ಅವಧಿಗಳಲ್ಲಿ ತೆರೆಮರೆಯಿಂದಲೇ ಪ್ರಮುಖ ಪಾತ್ರ ವಹಿಸಿದ್ದರು. 2018ರ ವಿಧಾನಸಭಾ ಚುನಾವಣೆಯಲ್ಲಿ ವರುಣಾ ಕ್ಷೇತ್ರದಿಂದ ಸ್ಪರ್ಧಿಸಲು ಟಿಕೆಟ್ ಆಕಾಂಕ್ಷಿಯಾಗಿದ್ದರು. ಈ ಕ್ಷೇತ್ರದಲ್ಲಿ ಯತೀಂದ್ರ ಸಿದ್ದರಾಮಯ್ಯ ಸ್ಪರ್ಧಿಸುತ್ತಿದ್ದರು. ಆದರೆ, ಕೊನೆ ಕ್ಷಣದಲ್ಲಿ ಬಿಜೆಪಿ ವರಿಷ್ಠರು ಅವರಿಗೆ ಟಿಕೆಟ್ ನಿರಾಕರಿಸಿದ್ದರು. ಟಿಕೆಟ್ ಸಿಗದೆ ಹೋದರೂ, ವರುಣಾ ಕ್ಷೇತ್ರದಲ್ಲಿ ಪಕ್ಷದ ಪ್ರಚಾರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ತಮ್ಮ ಸಂಘಟನಾ ಕೌಶಲ್ಯವನ್ನು ಪ್ರದರ್ಶಿಸಿದರು.

2019ರ ಉಪಚುನಾವಣೆಯಲ್ಲೂ ವಿಜಯೇಂದ್ರ ಸಂಘಟನಾ ಸಾಮರ್ಥ್ಯ ಪ್ರದರ್ಶಿಸಿದ್ದರು. ಯಡಿಯೂರಪ್ಪನವರು ಫಸ್ಟ್ ಟೈಂ ಫುಲ್ ಮತ್ತು ಫುಲ್ ಟೈಂ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಬಳಿಕ, ಅನರ್ಹ ಶಾಸಕರಿಗೆ ಟಿಕೆಟ್ ನೀಡಿ ಉಪ ಚುನಾವಣೆಗಳನ್ನು ಎದುರಿಸಬೇಕಿತ್ತು. ಆ ಸಂದರ್ಭದಲ್ಲಿ ಕೆ.ಆರ್. ಪೇಟೆ ಮತ್ತು ಶಿರಾ ವಿಧಾನ ಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸುವಲ್ಲಿ ವಿಜಯೇಂದ್ರ ಅವರ ಪಾತ್ರ ಮಹತ್ವದ್ದಾಗಿತ್ತು!

ಕಳೆದ 2023ರ ಅಸೆಂಬ್ಲಿ ಚುನಾವಣೆಯಲ್ಲಿ ಸಂಘ ಪರಿವಾರದ ನಿಷ್ಠರಿಗೆ ಮಣೆ ಹಾಕಿದ್ದ ಬಿಜೆಪಿ ವರಿಷ್ಠರು ಮುಂದೆ ಅನುಭವಿಸಿದ್ದೇನು? ರಾಜ್ಯದಲ್ಲಿ ಬಿಜೆಪಿಗೆ ಹೀನಾಯ ಸೋಲು! ಹೀಗಾಗಿ, ಬಿ.ಎಸ್.ವೈ ಕುಟುಂಬಕ್ಕೆ ಮತ್ತೆ ಆದ್ಯತೆ ನೀಡಿ, ವಿಜಯೇಂದ್ರ ರನ್ನು ಅಧ್ಯಕ್ಷ ಗಾದಿ ಮೇಲೆ ಕೂರಿಸಿತ್ತು ಹೈ ಕಮಾಂಡ್! ಇದು ಸಂಘ ನಿಷ್ಠರ ಒಂದು ಗುಂಪಿನ ವಿರೋಧಕ್ಕೆ ಕಾರಣವಾಗಿತ್ತು ಕೂಡ.

ಬಿ.ವೈ. ವಿಜಯೇಂದ್ರ ಅವರಿಗೆ 'ಅನುಭವ' ಇಲ್ಲ,ಹಿರಿ ಕಿರಿಯರೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷವನ್ನು ಮುನ್ನಡೆಸೋ ತಾಕತ್ತು ವರ್ಚಸ್ಸು ಅವರಿಗಿಲ್ಲ ಎಂದೆಲ್ಲಾ ಹೇಳುತ್ತಿರುವುದೇ ವಿರೋಧಿ ಬಣ! ಅಂದು ರಾಜ್ಯದಲ್ಲಿ ಪಕ್ಷವನ್ನು ಕಟ್ಟಿ ಬೆಳೆಸಿ, ಅಧಿಕಾರಕ್ಕೆ ತಂದಿದ್ದ ಬಿಎಸ್‌ವೈ ಅವರನ್ನು ವಯಸ್ಸಿನ ಕಾರಣ ನೀಡಿ ಸಿಎಂ ಸ್ಥಾನದಿಂದ ಕೆಳಗಿಳಿಸಿದ್ದು ಈ ಬಣದ ಕುಮ್ಮಕ್ಕು ನಿಂದಲೇ ಎಂಬುದು ಗುಟ್ಟಾಗೇನು ಉಳಿದಿಲ್ಲ! ಯಡ್ಡಿಯನ್ನು ಕೆಳಗಿಳಿಸಿದ್ದು, ಅವರ ಮಗನಿಗೆ ಅಧ್ಯಕ್ಷ ಪಟ್ಟ ಕಟ್ಟಿದ್ದು, ಅದು ಉಂಟು ಮಾಡಿದ ಪರಿಣಾಮಗಳು....

ಈ ಹಿನ್ನೆಲೆಯಲ್ಲಿಯೇ ಹೈಕಮಾಂಡ್ ಈ ಬಾರಿ ಅಳೆದು ತೂಗಿ ಹೆಜ್ಜೆ ಇಡಲು ತೀರ್ಮಾನ ಮಾಡಿರುವಂತಿದೆ! ಇದರಿಂದಾಗಿ ಅಧ್ಯಕ್ಷರ ಅಧಿಕೃತ ನೇಮಕ ವಿಚಾರ ತಡವಾಗಲು ಕಾರಣವಾಗುತ್ತಿದೆ ಎನ್ನುತ್ತಿವೆ, ಬಿಜೆಪಿ ಮೂಲಗಳು.... ವಿಜಯೇಂದ್ರ ಬಿಟ್ರೆ ಇನ್ನಾರು ಅಂತಾ ವರ್ಚಸ್ವಿ ನಾಯಕ ಎಂದು ಹೈ ಕಮಾಂಡ್ ತಲೆ ಕೆಡಿಸಿಕೊಂಡು ಕು ಳಿತಿದೆ. ಇಂಥ ಸಂದರ್ಭದಲ್ಲಿಯೇ ಕೇಂದ್ರ ಸಚಿವ ವಿ ಸೋಮಣ್ಣ ಹೆಸರು ಮುನ್ನಲೆಗೆ ಬಂದಿರುವುದು ಕುತೂಹಲ ಕೆರಳಿಸಿದೆ.....

ಹಾಗಾದ್ರೆ, ಸೋಮಣ್ಣ ಅವರು ರಾಜ್ಯ ಬಿಜೆಪಿ 'ಅಧ್ಯಕ್ಷ' ಗಾದಿ ಅಲಂಕರಿಸುತ್ತಾರ?! ಎಂಬ ಕುತೂಹಲಕ್ಕೆ ಶೀಘ್ರದಲ್ಲಿಯೇ ಉತ್ತರ ದೊರಕಲಿದೆ.....

# ಕನಕಪುರದಲ್ಲಿ ಲಾಂಗು, ಮಚ್ಚುಗಳ ಸದ್ದಿಗೆ ಜನ ತತ್ತರ; ಗ್ರಾ.ಪಂ. ಮಾಜಿ ಅಧ್ಯಕ್ಷ ನಂಜೇಶ್ ಬರ್ಬರ ಕೊಲೆ!



ಪ್ರಮುಖ ಆರೋಪಿ ಶ್ರೀನಿವಾಸ್ ಅ॥ ಸೆಂಟ್ರಿಂಗ್ ಸೀನ




ಕೊಲೆಯಾದ ಗ್ರಾ.ಪಂ. ಮಾಜಿ ಅಧ್ಯಕ್ಷ ನಂಜೇಶ್

**ಇತ್ತೀಚೆಗೆ ರಾಮನಗರ ಜಿಲ್ಲೆ ನೂತನವಾಗಿ ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರು ನಾಮಕರಣವಾಗಿದೆ. ರಾಜಧಾನಿ ಬೆಂಗಳೂರಿಗೆ 50 ಕಿ.ಮೀ. ದೂರವಿರುವ ಕನಕಪುರ, ಕನಕಪುರ ಸುತ್ತಮುತ್ತ ಜಮೀನಿನ ಬೆಲೆ ದಿನೇ ದಿನೇ ಏರುತ್ತಲೇ ಇದೆ. ಇಂತಹ ಸನ್ನಿವೇಶದಲ್ಲಿ ತಮ್ಮ ತಮ್ಮ ಕುಟುಂಬದವರೇ ಅಂದರೆ ಅಣ್ಣತಮ್ಮ, ಅಕ್ಕತಂಗಿ, ತಂದೆ-ತಾಯಿ-ಮಕ್ಕಳು, ಚಿಕ್ಕಪ್ಪ-ದೊಡ್ಡಪ್ಪರಿಂದಲೇ ಪ್ರತಿನಿತ್ಯ ಆಸ್ತಿ ವಿವಾದಗಳಲ್ಲಿ ಹಲವಾರು ರೀತಿ ಕ್ರೈಂ ಘಟನೆಗಳು ನಡೆಯುತ್ತಲೇ ಇವೆ. ನಾಲ್ಕು ದಿನಗಳ ಅಂತರದಲ್ಲಿ ಕನಕಪುರದಲ್ಲಿ ಎರಡು ಕೊಲೆಗಳು ನಡೆದಿದ್ದು, ಈ ಕೊಲೆಗಳ ಪ್ರಕರಣವು ಮಾಸುವ ಮುನ್ನವೇ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಹಾಡುಹಗಲೇ ವ್ಯಕ್ತಿಯೊಬ್ಬನಿಗೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ, ಕೊಲೆಗೆ ಯತ್ನಿಸಿದ್ದು, ಹಲ್ಲೆಗೊಳಗಾದ ವ್ಯಕ್ತಿ ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಈ ರೀತಿ ಸಾಲು ಸಾಲು ಕ್ರೈಂ ಪ್ರಕರಣಗಳು ಹಾಗೂ ಲಾಂಗು, ಮಚ್ಚುಗಳ ಸದ್ದಿಗೆ ಕನಕಪುರ ಜನತೆ ಬೆಚ್ಚಿಬೀಳುವಂತಾಗಿದೆ!**



ಎಸ್ಪಿ ಎಸ್. ಶ್ರೀನಿವಾಸಗೌಡ



ಡಿವೈಎಸ್ಪಿ ಶ್ರೀಗಿರಿ



ಸಿಪಿಐ ಅನಂತರಾಮ್



ಸಿಪಿಐ ಎಸ್. ವಿಕಾಸ್



ಪಿಎಸ್ಐ ದುರ್ಗೇಗೌಡ

**ಕನಕಪುರ**

✍ ಶಾಂತರಾಜು ಜಿ. ಕಲ್ಲಹಳ್ಳಿ

ಕನಕಪುರ ತಾಲ್ಲೂಕು, ಸಾತನೂರು ಪೊಲೀಸ್ ಠಾಣಾ ವ್ಯಾಪ್ತಿಯ ಅಚ್ಚಲು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಹಾಗೂ ಕಾಂಗ್ರೆಸ್ ಮುಖಂಡ ಹೊಂಗಾಣಿದೊಡ್ಡಿಯ ನಂಜೇಶ್ (46)ರನ್ನು ಲಾಂಗು, ಮಚ್ಚಿನಿಂದ ಕೊಚ್ಚಿ ಭೀಕರವಾಗಿ ಕೊಲೆ ಮಾಡಿರುವ ಘಟನೆ ನಡೆದಿದ್ದು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೊಂಗಾಣಿದೊಡ್ಡಿಯಲ್ಲಿ ಘಟನೆ ನಡೆದ ಮೂರು ದಿನಗಳ ಹಿಂದೆ ನಿವೇಶನದಲ್ಲಿ ನಿರ್ಮಿಸಿದ್ದ ಶೆಡ್ (ಮನೆ)ನ ವಿಚಾರ ಮತ್ತು ಈ ಗ್ರಾಮದಲ್ಲಿ ಟೆನೆಂಟ್‌ಗೆ ನಿವೇಶನಗಳ ವಿವಾದವು ವಿವಾದ ನಡೆಯುತ್ತಿದ್ದು, ಇದರ ಜೊತೆಗೆ ನಿವೇಶನಗಳ ವಿವಾದವು ನಡೆಯುತ್ತಿದ್ದು, ಈ ಪೈಕಿ ಒಂದು ನಿವೇಶನದ ನಿವಾಸದಲ್ಲಿ ಶ್ರೀನಿವಾಸ್ ಎಂಬುವರು ನಿರ್ಮಾಣ ಕುರಿಮೇಕೆಗಳ ಶೆಡ್ ನಿರ್ಮಿಸಿದ್ದನು.

ಇದೇ ಜಾಗವು ತಮಗೆ ಸೇರಬೇಕು ಎಂದು



ದಯಾನಂದ ಸಾಗರ್ ಆಸ್ಪತ್ರೆಗೆ ನಂಜೇಶ್‌ನನ್ನು ದಾಖಲಿಸಿರುವುದು



ನಂಜೇಶ್‌ನ ತಲೆಗೆ ಲಾಂಗ್‌ನಿಂದ ಕೊಚ್ಚಿರುವುದು

ಮಂಡ್ಯ ಜಿಲ್ಲೆಯ ಕೋಲೂರುದೊಡ್ಡಿ ಜಯಮ್ಮ ಎಂಬುವರು ಈ ಕುರಿ, ಮೇಕೆ ಶೆಡ್‌ನ ಮನೆಯನ್ನು ಧ್ವಂಸಗೊಳಿಸಿದ್ದ ಹಿನ್ನೆಲೆಯಲ್ಲಿ ಶ್ರೀನಿವಾಸ್ ಮಾವ ನಾಗರಾಜು ಎಂಬುವರು ಜಯಮ್ಮ ಮತ್ತು ಅವರ ಮಗ ಹಾಗೂ ಕೊಲೆಯಾಗಿರುವ ನಂಜೇಶ್ ಮತ್ತು ಆತನ ಮಗ ಸೇರಿ ಮನೆ (ಶೆಡ್)ಯನ್ನು ಧ್ವಂಸಗೊಳಿಸಿದ್ದಾರೆ ಎಂದು ಆರೋಪಿಸಿ ಸಾತನೂರು ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಕೊಲೆಯಾಗಿರುವ ನಂಜೇಶ್ ಅಚ್ಚಲು ಗ್ರಾಮ ಪಂಚಾಯಿತಿಗೆ ಮೂರು ಬಾರಿ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದು, ಒಂದು ಬಾರಿ ಅಧ್ಯಕ್ಷರಾಗಿದ್ದರು. ಹಾಲಿ ಸದಸ್ಯರಾಗಿರುವ ನಂಜೇಶ್ ಶನಿವಾರ ರಾತ್ರಿ ಊಟಕ್ಕೆ ಅಂತ ಸಾತನೂರು ಹೊರವಲಯ, ಕನಕಪುರ ರಸ್ತೆಯಲ್ಲಿರುವ ಆರ್.ಕೆ. ಡಾಬಾದಲ್ಲಿ ತನ್ನ ಸ್ನೇಹಿತ ಚೇತನ್ ಎಂಬುವರ ಜೊತೆ ಊಟ ಮುಗಿಸಿ ಹೊರಗಡೆ ಬರುತ್ತಿದ್ದಾಗ ನಾಲ್ಕೈದು ಜನರು ಏಕಾಏಕಿ ಬಂದು ಲಾಂಗು, ಮಚ್ಚುಗಳಿಂದ ನಂಜೇಶ್‌ನ ಮೇಲೆ ದಾಳಿ ಮಾಡಿ ಮನ ಬಂದಂತೆ ನಂಜೇಶ್‌ನ ಕೈಕಾಲು ಮತ್ತು ಮುಖಕ್ಕೆ ಒಡೆದು, ಕತ್ತರಿಸಿ, ನಂಜೇಶ್ ಕೆಳಗೆ ಬಿದ್ದ ತಕ್ಷಣ ದುಷ್ಕರ್ಮಿಗಳು ಅಲ್ಲಿಂದ ಪರಾರಿಯಾಗಿದ್ದಾರೆ. ಇತ್ತ ರಕ್ತದ ಮಡುವಿನಲ್ಲಿ ಬಿದ್ದಿದ್ದ ನಂಜೇಶ್‌ನನ್ನು ತಕ್ಷಣವೇ ದಯಾನಂದಸಾಗರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದರೂ ಸಹ ಚಿಕಿತ್ಸೆ ಫಲಿಸದೆ ಆಸ್ಪತ್ರೆಯಲ್ಲಿ ನಂಜೇಶ್ ಕೊನೆಯುಸಿರೆಳೆದಿದ್ದಾನೆ.

ಈ ಘಟನೆ ಸಂಬಂಧ ಠಾಣೆಗೆ ದೂರು ನೀಡಲಾಗಿ, ಪೊಲೀಸರು ದೂರು ದಾಖಲಿಸಿಕೊಂಡು, ಗ್ರಾಮದಲ್ಲಿ ನಿವೇಶನದ ವಿವಾದದ ಹಿನ್ನೆಲೆಯಲ್ಲಿ ಈ ಕೊಲೆ ಮಾಡಲಾಗಿದೆ ಎಂದು ಪೊಲೀಸರು ಅನುಮಾನ ವ್ಯಕ್ತಪಡಿಸಿ, ಕೊಲೆಗೆ ಸಂಬಂಧಿಸಿದಂತೆ ಆರ್.ಕೆ. ಡಾಬಾ ಬಳಿ ಇರುವಂತಹ ಸಿಸಿಟಿವಿ ಕ್ಯಾಮರಾದ ಫುಟೇಜ್‌ನ್ನು ಸಂಗ್ರಹಿಸಿಕೊಂಡು ಆರೋಪಿಗಳ ಪತ್ತೆಗಾಗಿ ಕಾರ್ಯಾಚರಣೆ ನಡೆಸಲಾರಂಭಿಸಿದ್ದರು. ಇತ್ತ ಮೃತ ನಂಜೇಶ್‌ನ ಅಂತ್ಯ ಸಂಸ್ಕಾರದ ವೇಳೆ ಹೊಂಗಾಣಿದೊಡ್ಡಿ ಗ್ರಾಮಕ್ಕೆ ಆಗಮಿಸಿದ ಮಾಜಿ ಸಂಸದ ಡಿ.ಕೆ. ಸುರೇಶ್, ಎಂಎಲ್‌ಸಿ ಎಸ್. ರವಿರವರು ಮೃತನ ಪತ್ನಿ, ಮಗ, ಮಗಳಿಗೆ ಸಾಂತ್ವಾನ ಹೇಳಿ ಮೃತನ ಅಂತಿಮ ದರ್ಶನ ಪಡೆದಿದ್ದರು.



ಆರ್.ಕೆ. ಡಾಬಾದಲ್ಲಿ ನಂಜೇಶ್ ಊಟ ಮಾಡಿದ್ದ ಟೇಬಲ್



ಆರೋಪಿಗೆ ಪೊಲೀಸರು ಗುಂಡು ಆರಿಸಿದ ಸ್ಥಳ




ಹೊಂಗಾಣಿದೊಡ್ಡಿ ಗ್ರಾಮದಲ್ಲಿ ಶೆಡ್ ಧ್ವಂಸಗೊಳಿಸಿರುವುದು

ಪ್ರಕರಣದ ತನಿಖೆ ಚುರುಕುಗೊಳಿಸಿದ್ದ ಪೊಲೀಸರು ಆರೋಪಿಗಳ ಪತ್ತೆಗಾಗಿ ಶೋಧ ಕಾರ್ಯ ಕೈಗೊಂಡಿದ್ದರು. ಪ್ರಕರಣದ ಎ1 ಆರೋಪಿ ಶ್ರೀನಿವಾಸ್ ತಮಿಳುನಾಡಿಗೆ ಹೋಗಿ ಅಲ್ಲಿ ತನ್ನ ಮೊಬೈಲ್ ಸ್ವಿಚ್ ಆಫ್ ಮಾಡಿ, ಹಾರೋಹಳ್ಳಿ ತಾಲ್ಲೂಕಿನ ಗಬ್ಬಾಡಿಯಲ್ಲಿ ಬಂದು ತಲೆಮರೆಸಿಕೊಂಡಿದ್ದ ಖಚಿತ ಮಾಹಿತಿ ಮೇರೆಗೆ ಇನ್ಸ್‌ಪೆಕ್ಟರ್ ಅನಂತರಾಮು ನೇತೃತ್ವದ ತಂಡ ಆರೋಪಿಯನ್ನು ಬಂಧಿಸಲು ಬೆಳಗಿನ ಜಾವ 6 ಗಂಟೆಗೆ ಸ್ಥಳಕ್ಕೆ ತೆರಳಿತ್ತು. ಈ ಸಂದರ್ಭದಲ್ಲಿ ಶ್ರೀನಿವಾಸ್ ಕಾನ್‌ಸ್ಟೇಬಲ್ ರಮೇಶ್ ಮೇಲೆ ಹಲ್ಲೆ ನಡೆಸಿ ಎಸ್ಕೇಪ್ ಆಗಲು ಯತ್ನಿಸಿದ. ಪೊಲೀಸರ ಎಚ್ಚರಿಕೆ ಲೆಕ್ಕಿಸದೆ ತಪ್ಪಿಸಿಕೊಳ್ಳಲು ಮುಂದಾದಾಗ ಸಿಪಿಐ ಅನಂತರಾಮುರವರು ಆರೋಪಿ ಶ್ರೀನಿವಾಸನ ಕಾಲಿಗೆ ಗುಂಡು ಹಾರಿಸಿದರು. ನಂತರ ಆರೋಪಿಯನ್ನು ಬಂಧಿಸಿದಾಗ, ಗಂಭೀರವಾಗಿ ಗಾಯಗೊಂಡಿದ್ದ ಆರೋಪಿ ಶ್ರೀನಿವಾಸ್‌ನನ್ನು ಬೆಂಗಳೂರಿನ ಅಪೋಲೋ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಿಸಿದ್ದಾರೆ. ಘಟನೆಯಲ್ಲಿ ಕಾನ್‌ಸ್ಟೇಬಲ್ ರಮೇಶ್ ಗಾಯಗೊಂಡಿದ್ದು, ಇವರನ್ನು ದಯಾನಂದಸಾಗರ ಆಸ್ಪತ್ರೆಗೆ ದಾಖಲಿಸಲಾಗಿದೆ. ಇನ್ನುಳಿದ ಆರೋಪಿಗಳಾದ ಬಿಳಿಕಲ್ ಬ್ಯಾಡರಹಳ್ಳಿ ಸೋಲೂರ್ ಕಿರಣ್ (39), ಬೆಂಗಳೂರಿನ ಬಿಳಿಕಲ್

☞ 4



ಇದೇ ಸ್ಥಳಧಲ್ಲಿ ನಂಜೇಶ್‌ನನ್ನು ಕೊಚ್ಚಿ ಕೊಲೆ ಮಾಡಿದ್ದು

3 ☞

ಬ್ಯಾಡರಹಳ್ಳಿಯ ಅಂಜನಾನಗರದ ಪ್ರವೀಣ್ (31), ಬೆಂಗಳೂರಿನ ಉಳ್ಳಾಲ ಉಪನಗರದ ಅಂಬೇಡ್ಕರ್ ನಗರದ 2ನೇ ಕ್ರಾಸ್‌ನ ಗೂಬೇಂದ್ರನ್ ಅಲಿಯಾಸ್ ಗೋಪಿ (41) ಈ ಆರೋಪಿಗಳನ್ನು ಬಂಧಿಸಿ, ವಿಚಾರಣೆ ನಡೆಸಿ ಜೈಲಿಗಟ್ಟಿದ್ದಾರೆ. ಇತ್ತ ಹೊಂಗಾಣಿದೊಡ್ಡಿ ಗ್ರಾಮದಲ್ಲಿ ನಿವೇಶನ ವಿವಾದಕ್ಕೆ ಕೊಲೆ ನಡೆದಿದ್ದು, ಆರೋಪಿ ಮತ್ತು ಕೊಲೆಯಾದ ನಂಜೇಶ್ ಇಬ್ಬರೂ ಒಂದೇ ಗ್ರಾಮದವರು. ಹೀಗಾಗಿ ಗ್ರಾಮದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿ, ಇಲ್ಲಿ ಯಾವುದೇ ರೀತಿ


ಆರೋಪಿ ಶ್ರೀನಿವಾಸ್‌ಗೆ ಗುಂಡು ಆರಿಸಿ ಆಸ್ಪತ್ರೆಗೆ ದಾಖಲಿಸಿರುವುದು

ಅಹಿತಕರ ಘಟನೆಗಳು ನಡೆಯದಂತೆ ಕಾನೂನು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡಲು ಪೊಲೀಸ್ ಇಲಾಖೆ ಮುನ್ನೆಚ್ಚರಿಕೆ ಕ್ರಮವಹಿಸಿ, ಗ್ರಾಮದಲ್ಲಿ ಸುಮಾರು 50ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿದೆ. ಸಾತನೂರು ಪಿಎಸ್‌ಐ ದುರ್ಗೇಗೌಡ, ಕೋಡಿಹಳ್ಳಿ ಪಿಎಸ್‌ಐ ರಾಮಕೃಷ್ಣ, ಕನಕಪುರ ಪಿಎಸ್‌ಐ ಸೇರಿದಂತೆ ಎಎಸ್‌ಐಗಳು, ಹೆಚ್‌ಸಿಗಳು ಸ್ಥಳದಲ್ಲಿದ್ದರು.


ಬಸ್ ನಿಲ್ದಾಣದಲ್ಲಿ ಆರೋಪಿಗಳು ಲಾಂಗ್, ಮಚ್ಚು ಹಿಡಿದು ಮೆರೆಯುತ್ತಿರುವುದು

## ಪತಿಯಿಂದಲೇ ಪತ್ನಿ ಗೌರಮ್ಮನ ಬರ್ಬರ ಕೊಲೆ!

ಕನಕಪುರ ತಾಲ್ಲೂಕು, ಕಸಬಾ ಹೋಬಳಿಯ ಚಾಕನಹಳ್ಳಿ ಗ್ರಾಮದಲ್ಲಿ 45 ವರ್ಷದ ಗೌರಮ್ಮ ಮತ್ತು ಈಕೆಯ ಪತಿ ಶಿವರಾಜು (50) ಈ ದಂಪತಿಯ ಮಗ ಸಿದ್ದರಾಜು (28) ಇವರು ಚಾಕನಹಳ್ಳಿ ಗ್ರಾಮದಲ್ಲಿ ವ್ಯವಸಾಯ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಸುಮಾರು 10 ವರ್ಷಗಳಿಂದ ಗೌರಮ್ಮ ಮತ್ತು ಶಿವರಾಜು ದೂರ ಇದ್ದರು. ಗೌರಮ್ಮ ಇದೇ ಗ್ರಾಮದ ಬೇರೊಬ್ಬನ ಜೊತೆ ಅಕ್ರಮ ಸಂಬಂಧ ಹೊಂದಿ ಅವನ ಜೊತೆ ಜೀವನ ನಡೆಸುತ್ತಿದ್ದಳು. ಗೌರಮ್ಮನ ಮಕ್ಕಳು ಪತಿ ಶಿವರಾಜುವಿನ ಜೊತೆಗೆ ಬೇರೆ ಕಡೆ ವಾಸವಿದ್ದರು. ಇತ್ತೀಚೆಗೆ ಗೌರಮ್ಮ


ಮೃತ ನಂಜೇಶ್ ಅಂತ್ಯ ಸಂಸ್ಕಾರದಲ್ಲಿ ಮಾಜಿ ಸಂಸದ ಡಿ.ಕೆ. ಸುರೇಶ್ ಭಾಗಿ

ತನ್ನ ಹೆಸರಿನಲ್ಲಿದ್ದ ಆಸ್ತಿಯನ್ನು ಮಾರಾಟ ಮಾಡಲು ಮುಂದಾಗಿದ್ದಳು. ಗಂಡ ಶಿವರಾಜು ಮತ್ತು ಮಗ ಸಿದ್ದರಾಜು ಆಸ್ತಿಯನ್ನು ಮಾರಾಟ ಮಾಡುವುದು ಬೇಡ, ಮಾರಾಟ ಮಾಡಲು ಬಿಡುವುದಿಲ್ಲ ಎಂದಾಗ ಗೌರಮ್ಮ ಮತ್ತು ಗಂಡ, ಮಗನ ಜೊತೆ ಜಗಳವಾಗಿತ್ತು. ಅಚ್ಚಲು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ನಂಜೇಶ್‌ನ ಕೊಲೆ ನಡೆದ ದಿನವೇ, ಅಂದು ಶನಿವಾರ ಬೆಳಿಗ್ಗೆ ಗೌರಮ್ಮ ಕುರುಬರದೊಡ್ಡಿ ಬಳಿಯಿರುವ ತನ್ನ ಜಮೀನಿನ ಕಡೆ ಹೋಗಿದ್ದನ್ನೇ ಹಿಂಬಾಲಿಸುತ್ತಿದ್ದ ಗಂಡ ಶಿವರಾಜು ಮತ್ತು ಮಗ ಸಿದ್ದರಾಜು ಇಬ್ಬರು ಸೇರಿ ಕುಡುಗೋಲಿನಿಂದ ಗೌರಮ್ಮಳ ಕಣ್ಣಿಗೆ ಖಾರದ ಪುಡಿ ಎರಚಿ, ಕುಡುಗೋಲಿನಿಂದ ಕುತ್ತಿಗೆ ಕೊಯ್ದು ಕೊಲೆ ಮಾಡಿದ್ದಾರೆ. ಕೊಲೆ ಮಾಡಿದ ಆರೋಪಿಗಳು ಗೌರಮ್ಮ ಬೇರೊಬ್ಬ ವ್ಯಕ್ತಿಯ ಜೊತೆಗೆ ಅನೈತಿಕ ಸಂಬಂಧ ಹೊಂದಿದ್ದು, ಆತನ ಜೊತೆ ಸೇರಿ ಜಮೀನು ಮಾರಾಟ ಮಾಡಲು ಯತ್ನಿಸಿದ್ದಳು. ಈ ಕಾರಣದಿಂದಾಗಿ ತಾವೇ ಕೊಲೆ ಮಾಡಿರುವುದಾಗಿ ಪೊಲೀಸರಿಗೆ ಶರಣಾಗಿ ವಿವರಿಸಿದ್ದಾರೆ.


ಆರೋಪಿಗಳಾದ ಗೋಪಿ, ಕಿರಣ್ ಹಾಗೂ ಪ್ರವೀಣ್

ಮೃತ ಗೌರಮ್ಮ ಸಂಬಂಧಿ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಲಾಗಿ, ಜಿಲ್ಲಾ ಎಸ್ಪಿ ಶ್ರೀನಿವಾಸಗೌಡ, ಡಿವೈಎಸ್ಪಿ ಕೆ.ಸಿ. ಶ್ರೀಗಿರಿ, ಸರ್ಕಲ್ ಇನ್ಸ್‌ಪೆಕ್ಟರ್ ವಿಕಾಸ್ ಗೌಡ ಮತ್ತು ಪಿಎಸ್‌ಐ ಆಕಾಶ್ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮೃತ ಗೌರಮ್ಮಳ ಶವವನ್ನು ದಯಾನಂದಸಾಗರ್ ಆಸ್ಪತ್ರೆಗೆ ರವಾನಿಸಿ, ಮರಣೋತ್ತರ ಪರೀಕ್ಷೆಯ ನಂತರ ವಾರಸುದಾರರಿಗೆ ಗೌರಮ್ಮ ಮೃತದೇಹವನ್ನು ಒಪ್ಪಿಸಿ, ಆರೋಪಿಗಳಾದ ಶಿವರಾಜು ಮತ್ತು ಮಗ ಸಿದ್ದರಾಜುನನ್ನು ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿದ್ದಾರೆ.


ಹೊಂಗಾಣಿದೊಡ್ಡಿ ಗ್ರಾಮದಲ್ಲಿ ಪೊಲೀಸ್ ಬಂದೋಬಸ್ತ್


ಬಸ್ಸಿನಲ್ಲಿ ಹಲ್ಲೆಗೊಳಗಾದ ಮಾರೇಗೌಡ


ಬಸ್ಸಿನ ಒಳಗಡೆ ರಕ್ತದ ಮಡುವಿನಲ್ಲಿ ಮಾರೇಗೌಡ


ಆಸ್ ಸ್ಟಾಪ್‌ನಲ್ಲಿ ಲಾಂಗ್ ಹಿಡಿದು ಹಲ್ಲೆ ಮಾಡಿದ ಆರೋಪಿ ಆದಿತ್ಯ


ಆರೋಪಿ ಬನಶಂಕರಿಯ ಸಲ್ಮಾನ್

## ಹಳೇ ದ್ವೇಷಕ್ಕೆ ವ್ಯಕ್ತಿ ಮೇಲೆ ಮಾರಣಾಂತಿಕ ಹಲ್ಲೆ!

ಕನಕಪುರ ತಾಲ್ಲೂಕಿನ ಕೋಡಿಹಳ್ಳಿ ಹೋಬಳಿಯ ದಿಂಬದಹಳ್ಳಿ ಗ್ರಾಮದ ಮಾರೇಗೌಡ (53), ಕಳೆದ ಎರಡು ವರ್ಷಗಳ ಹಿಂದೆ ಜಮೀನು ವಿವಾದಕ್ಕೆ ತನ್ನ ತಮ್ಮ ಮಲ್ಲಯ್ಯನ ಮಗ ಅಜಯ್‌ನನ್ನು ಕೊಲೆ ಮಾಡಿದ್ದ. ಜಾಮೀನು ಪಡೆದು ಹೊರ ಬಂದಿದ್ದ ಮಾರೇಗೌಡ, ಇದೇ ಮಂಗಳವಾರ ಕೊಲೆ ಪ್ರಕರಣ ವಿಚಾರಣೆಗೆ ನ್ಯಾಯಾಲಯಕ್ಕೆ ಬಂದಿದ್ದ. ಮಾರೇಗೌಡನಿಂದ ಕೊಲೆಯಾದ ಅಜಯ್‌ನ ಸಹೋದರ ಆದಿತ್ಯ ತನ್ನ ಸಹೋದರನ ಕೊಲೆ ಸೇಡು ತೀರಿಸಿಕೊಳ್ಳಲು ಹಳೇ ದ್ವೇಷ ಇಟ್ಟುಕೊಂಡು ತನ್ನ ಸ್ನೇಹಿತನಾದ ಬೆಂಗಳೂರಿನ ಬನಶಂಕರಿಯ ಸಲ್ಮಾನ್ (19)ನೊಂದಿಗೆ ಸಂಚು ಮಾಡಿ ಮಾರೇಗೌಡ ನ್ಯಾಯಾಲಯಕ್ಕೆ ಬರುವ ವಿಚಾರ ತಿಳಿದು, ಹಿಂಬಾಲಿಸಿಕೊಂಡು ಬಂದು ಕನಕಪುರ ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಇರಲ್‌ಪೋಡ್ ದಿಂಬದಹಳ್ಳಿ ಗ್ರಾಮಕ್ಕೆ ತೆರಳಲು ಬಸ್‌ನಲ್ಲಿ ಕುಳಿತಿದ್ದ ಮಾರೇಗೌಡನ ಮೇಲೆ ಲಾಂಗು, ಮಚ್ಚಿನಿಂದ ಹಲ್ಲೆ ಮಾಡಲಾಗಿ, ಮಾರೇಗೌಡನ ತಲೆಗೆ ಗಂಭೀರ ಗಾಯವಾಗಿ ರಕ್ತದ ಮಡುವಿನಲ್ಲಿ ಬಸ್‌ನಲ್ಲೇ ಕುಸಿದು ಬಿದ್ದ ಮಾರೇಗೌಡನನ್ನು ನಗರದ ಸಾರ್ವಜನಿಕ ಆಸ್ಪತ್ರೆಗೆ ಬಸ್‌ನಲ್ಲೇ ಕರೆದೊಯ್ದು ಹೆಚ್ಚಿನ ಚಿಕಿತ್ಸೆಗೆ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಇತ್ತ ಹಲ್ಲೆ ನಡೆಸಿ ಮಾರಕಾಸ್ತ್ರಗಳಾದ ಲಾಂಗು, ಮಚ್ಚು ಹಿಡಿದು ಬಸ್ ನಿಲ್ದಾಣದಲ್ಲಿ ಆರೋಪಿಗಳು ಓಡಾಡಿದ ದೃಶ್ಯ ಕಂಡ ಸಾರ್ವಜನಿಕರು ಬೆಚ್ಚಿ ಬಿದ್ದಿದ್ದಾರೆ. ನಂತರ ತಾವೇ ಪೊಲೀಸರಿಗೆ ಶರಣಾಗಲು ಹೋಗುತ್ತಿದ್ದಾಗ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ. ಮಾರೇಗೌಡನ ಕುಟುಂಬಸ್ಥರು ನೀಡಿದ ದೂರಿನ ಮೇರೆಗೆ, ಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ. ಈ ರೀತಿಯಾಗಿ ಕ್ರೈಂಗಳ ಮೇಲೆ ಕ್ರೈಂ ಪ್ರಕರಣಗಳು ನಡೆ ಯುತ್ತಿರುವುದನ್ನು ಕಂಡು ಕನಕಪುರದ ಜನತೆ ಬೆಚ್ಚಿಬಿದ್ದಿದೆ.

☯


ಮಾರೇಗೌಡನನ್ನು ಆಸ್ಪತ್ರೆಗೆ ಕರೆದೊಯ್ಯುತ್ತಿರುವುದು


ಮಂದಿರಾ ಮಂಡಲ್

# ಸ್ನೇಹಿತನ ಪತ್ನಿಯೊಂದಿಗೆ ಪ್ಯಾರ್! ಪ್ರೇಮಿಸಲು ಒಪ್ಪದಿದ್ದಕ್ಕೆ ಮರ್ಡರ್!! ಬಳಿಕ ನೇಣು ಜೀರಿಕೊಂಡು ಟರ್ರ್!!!


ಪಾಪಿ ಪ್ರೇಮಿ ಸುಮನ್


ಕಿಚನ್‌ನಲ್ಲಿ ನೇಣು ಹಾಕಿಕೊಂಡಿರುವುದು

**ಬಿಜನ್ ಮಂಡಲ್ ತನ್ನ ಪತ್ನಿ ಮಂದಿರಾಳನ್ನು ಬಿಟ್ಟು 'ಅಂಡಮಾನ್' ಸೇರಿಕೊಂಡು ಒಂಟಿ ಜೀವನ ನಡೆಸುತ್ತಿದ್ದ. ಅಲ್ಲಿ ಅವನೊಡನೆ ದುಡಿಯುತ್ತಿದ್ದ ಸ್ನೇಹಿತ ಸುಮನ್, ಇಲ್ಲಿ ಬೆಂಗಳೂರಿನಲ್ಲಿ ಒಂಟಿಯಾಗಿ ಬದುಕುತ್ತಿದ್ದ ಬಿಜನ್ ಪತ್ನಿ ಮಂದಿರಾ ಮೇಲೆ ಕಣ್ಣು ಹಾಕಿದ್ದ! ಗಂಡ ಬಿಟ್ಟು ಹೋಗಿದ್ರೂ, ಇನ್ನೂ ಅವನ ನೆನಪಲ್ಲೇ ಇದ್ದ ಮಂದಿರಾ, ಸುಮನ್ ಜೊತೆ ಅಕ್ರಮ ಸಂಬಂಧವಿಟ್ಟುಕೊಳ್ಳಲು ಒಪ್ಪಿಕೊಂಡಿಲ್ಲ!! ಸುಮನ್ ಒಂಥರಾ ಪ್ರೀತ್ಸೇ... ಸಿನಿಮಾದ ಉಪ್ಪಿಯಂತ ಹುಡುಗ. ಮಂದಿರಾ ಯಾವಾಗ, ''ಐ ಡೋಂಟ್ ಲವ್ ಯೂ, ಐ ಡೋಂಟ್ ಮ್ಯಾರಿ ಯೂ'' ಅಂದಳೋ, ಅವಳ ಕುತ್ತಿಗೆ ಸೀಳಿ, ಅದೇ ಮನೆಯೊಳಗೆ ತಾನೂ ನೇಣು ಜೀರಿಕೊಂಡು ಸೂಸೈಡ್ ಮಾಡಿಕೊಂಡಿದ್ದಾನೆ!**

✍ ಹೆಚ್.ಕೆ. ಮಹದೇವ್

ಇದೊಂದು ವಿಚಿತ್ರ ಹಾಗೂ ವಿಲಕ್ಷಣ ಘಟನೆ ಬೆಂಗಳೂರು ಹೊರವಲಯದಲ್ಲಿರುವ ಹೆಬ್ಬಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟಿಸಿದೆ. ಸುಮನ್ ಮಂಡಲ್ ಎಂಬ ಅವಿವೇಕಿ, ಮಂದಿರಾ ಮಂಡಲ್ ಎಂಬ ಗೃಹಿಣಿಯ ಹಿಂದೆ ಬಿದ್ದು, ಆಕೆ ಇವನನ್ನು ಪ್ರೇಮಿಸಲು - ಮದುವೆಯಾಗಲು ಒಪ್ಪದಿದ್ದಕ್ಕೆ ಕುಪಿತಗೊಂಡು ಅವಳನ್ನು ಬರ್ಬರವಾಗಿ ಕೊಂದು ತಾನೂ ಆತ್ಮಹತ್ಯೆಗೆ ಶರಣಾಗಿದ್ದಾನೆ!

**ವೆಸ್ಟ್ ಬೆಂಗಾಳಿಯನ್ಸ್**

ಹೆಬ್ಬಗೋಡಿ ಸಮೀಪದ ತಿರುಪಾಳ್ಯದಲ್ಲಿ ಶಶಾಂಕ್ ಮಂಡಲ್ ಎಂಬುವರು ತನ್ನ ಕುಟುಂಬ ಸಮೇತ ನೆಲೆಸಿದ್ದಾರೆ. ಇವರು ಮೂಲತಃ ಪಶ್ಚಿಮ ಬಂಗಾಳದವರು. ನಾರ್ತ್ 24 ಪ್ರದೇಶ ವ್ಯಾಪ್ತಿಯಲ್ಲಿರುವ ಪಾರ್ಗುಮತಿ (ಪ್ಯಾರಗಾನ್ಸ್)ನವರು. ಕೆಲ ವರ್ಷಗಳ ಹಿಂದೆ ಹೊಟ್ಟೆಪಾಡನ್ನರಸಿಕೊಂಡು ಬೆಂಗಳೂರಿಗೆ ವಲಸೆ ಬಂದು ತಿರುಪಾಳ್ಯದಲ್ಲಿ ಮಂಜುನಾಥರೆಡ್ಡಿ ಎಂಬುವರ ಬಿಲ್ಡಿಂಗ್‌ನಲ್ಲಿ ಒಂದು ರೂಮು ಮಾಡಿಕೊಂಡು ನೆಲೆಸಿದ್ದಾರೆ. ಹತ್ತಿರದ ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾದಲ್ಲಿ ಸೆಕ್ಯೂರಿಟಿ ಗಾರ್ಡ್ ಕೆಲಸ. ಅವರ ಪತ್ನಿ ಶಿವಾನಿ ಮಂಡಲ್ ಹೌಸ್ ಕೀಪಿಂಗ್ ಕೆಲಸ ಮಾಡುತ್ತಾರೆ. ಈ ದಂಪತಿಗೆ ಮಂದಿರಾ ಮಂಡಲ್, ಮಿಲನ್ ಮಂಡಲ್ ಎಂಬಿಬ್ಬರು ಮಕ್ಕಳು. ಹಿರಿಯ ಮಗಳು ಮಂದಿರಾಗೆ ಈಗ್ಗೆ ಆರು ವರ್ಷದ ಹಿಂದೆ ತಮ್ಮದೇ ಊರಿನ ಬಿಜನ್ ಮಂಡಲ್‌ಗೆ ಕೊಟ್ಟು ಮದುವೆ ಮಾಡಿದ್ದರು. ಮಂದಿರಾ-ಬಿಜನ್‌ಗೆ 'ದೀಪು' ಎಂಬ ಗಂಡು ಮಗನಿದ್ದಾನೆ. ಈ ದಂಪತಿಗಳ ನಡುವೆ ಯಾವುದೋ ವಿಚಾರಕ್ಕೆ ಮನಸ್ತಾಪವಾಗಿ ಬಿಜನ್‌ನ ಪತ್ನಿ-ಮಗುವನ್ನು ತೊರೆದು 'ಅಂಡಮಾನ್' ದ್ವೀಪಕ್ಕೆ ಹಾರಿಬಿಟ್ಟಿದ್ದಾನೆ! ಗಂಡ ಬಿಟ್ಟ ಮಂದಿರಾ ಮಂಡಲ್, ಇಲ್ಲಿ ತನ್ನ ಪೋಷಕರ ಮನೆ ಬಳಿಯೇ ಬಾಬುರೆಡ್ಡಿ ಎಂಬುವರ ಬಿಲ್ಡಿಂಗ್‌ನಲ್ಲಿ ಬಾಡಿಗೆ ರೂಂ ಮಾಡಿಕೊಂಡು ತನ್ನ ಮಗುವಿನೊಡನೆ ಬಾಳ್ವೆ ಸಾಗಿಸುತ್ತಿದ್ದಳು. ತಂದೆ ಶಶಾಂಕ್ ಮಂಡಲ್, ತಾಯಿ ಶಿವಾನಿ ಮಂಡಲ್ ಹತ್ತಿರದಲ್ಲೇ ಇದ್ದುದರಿಂದ ಆಗಾಗ್ಗೆ ಮಗಳ ಮನೆಗೆ ಬಂದು ನೋಡಿಕೊಳ್ಳುತ್ತಿದ್ದರು. ಮಗಳು ಅಳಿಯ ವೈಮನಸ್ಯ ಮರೆತು ಒಂದಾಗಿ ಬಾಳಿದರೆ ಸಾಕು ಶಿವಾ... ಎಂದು ಭಗವಂತನಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದರು.


ಕುತ್ತಿಗೆ ಸೀಳಿ ಕೊಲೆ ಮಾಡಿರುವುದು

**ಬಿಜನ್ ಸ್ನೇಹಿತ ಸುಮನ್!**

ಶಶಾಂಕ್-ಶಿವಾನಿ ದಂಪತಿಗಳು ನೆಲೆಸಿದ್ದ ಬಿಲ್ಡಿಂಗ್‌ನಲ್ಲೇ ರವೀಂದ್ರ-ರೇಖಾ ಮಂಡಲ್ ದಂಪತಿಗಳು ವಾಸವಿದ್ದು, ಅವರೂ ಇವರ ಗ್ರಾಮದವರೇ. ಅವರ ಮಗ ಸುಮನ್ ಮಂಡಲ್‌ಗೆ 'ಮಂದಿರಾ' ಮೇಲೆ ಪ್ರಾಣ! ಅವಳನ್ನು ಹುಚ್ಚನಂತೆ ಪ್ರೀತಿಸುತ್ತಿದ್ದ. ಆದರೆ ಮಂದಿರಾಗೆ ಈಗಾಗಲೇ ಮದುವೆಯಾಗಿತ್ತಲ್ಲಾ... ಅವಳ ಗಂಡ ಬಿಜನ್ ಅವಳನ್ನು ಬಿಟ್ಟು ಅಂಡಮಾನ್ ಸೇರಿಕೊಂಡಿದ್ದನಲ್ಲಾ... ಈ ವಿಚಾರ ಸುಮನ್‌ಗೆ ಚೆನ್ನಾಗಿ ಗೊತ್ತಿತ್ತು. ಗಂಡನ ಬಿಟ್ಟು ಒಂಟಿಯಾಗಿ ಬದುಕುತ್ತಿರುವ ಮಂದಿರಾಳನ್ನು ತಾನು ಮದುವೆಯಾಗ್ತೀನಿ ಅಂತ ಅವಳ ಹಿಂದೆ ಬಿದ್ದಿದ್ದ! ಆದರವಳು ಇವನನ್ನು ಮದುವೆಯಾಗಲು ಒಪ್ಪಿರಲಿಲ್ಲ. ಬಿಟ್ಟು ಹೋಗಿರುವ ಗಂಡ ಎಂದಾದರೂ ಒಂದು ದಿನ ಮತ್ತೆ ಬಂದಾನು... ಎಂಬಾಸೆ ಇತ್ತೇನೋ! ಮಂದಿರಾಳ ಬೆನ್ನು ಹತ್ತಿ ಪ್ರೀತ್ಸೇ ಪ್ರೀತ್ಸೇ... ಎಂದು ಹಾಡ್ತಾ ಗೋಳಾಡ್ತಾ ಇದ್ದನಲ್ಲ ಸುಮನ್, ಈ ಐನಾತಿ ಆಸಾಮಿ 'ಅಂಡಮಾನ್' ದ್ವೀಪಕ್ಕೆ ತೆರಳಿ ಮಂದಿರಾ ಗಂಡ ಬಿಜನ್ ಹತ್ರಾನೇ ತಾನೂ ನೌಕರಿಗೆ ಸೇರಿಕೊಂಡಿದ್ದ! ಅಲ್ಲಿ ಅವನೊಂದಿಗೆ ಅದೇನೇನು ಚರ್ಚಿಸಿದನೋ ಏನೋ. ಆ ಪುಣ್ಯಾತ್ಮ ಅವನನ್ನು ಕೊಲ್ಲದೆ ಆಗಾಗ ಬೆಂಗಳೂರಿಗೆ ಬಂದು ತಿರುಪಾಳ್ಯದಲ್ಲಿದ್ದ ತನ್ನ ತಂದೆ-ತಾಯಿ ಹಾಗೂ 'ಪ್ಯಾರಿ' ಮಂದಿರಾಳನ್ನು ನೋಡಿಕೊಂಡು ಹೋಗುತ್ತಿದ್ದ. ಈಗ್ಗೆ ಹದಿನೈದು ದಿನಗಳ ಹಿಂದೆ 'ಅಂಡಮಾನ್'ಗೆ ಗುಡ್‌ಬೈ ಹೇಳಿ ತಿರುಪಾಳ್ಯದಲ್ಲೇ ಖಾಯಮ್ಮಾಗಿ ನೆಲೆಸಿಬಿಟ್ಟಿದ್ದ ಸುಮನ್, ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾದಲ್ಲಿ ಖಾಸಗಿ ಕಂಪನಿಯೊಂದರಲ್ಲಿ ಸೆಕ್ಯೂರಿಟಿ ಗಾರ್ಡ್ ಕೆಲಸಕ್ಕೆ ಸೇರಿಕೊಂಡಿದ್ದ. ಬೆಳಗಾಗೆದ್ದು ಮಂದಿರಾಳ ದರ್ಶನ ಮಾಡ್ತಾ ''ಪ್ರೀತ್ಸೇ... ಪ್ರೀತ್ಸೇ...'' ಹಾಡು ಹಾಡ್ತಾ, ನಿನ್ನ ಗಂಡ ಮತ್ತೆ ಇಲ್ಲಿಗೆ ಬರಲ್ಲ, ನಾವಿಬ್ರೂ ಮದುವೆಯಾಗಿ ಸುಖವಾಗಿರೋಣ ಎಂದು ಗೋಗರೆಯುತ್ತಿದ್ದ! ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ಮಂದಿರಾಳಿಗೆ ಇವನ ಮೇಲೆ ಪ್ರೀತಿ ಇತ್ತೋ? ಅಕ್ರಮ ಸಂಬಂಧವಿತ್ತೋ?? ಖಚಿತವಾಗಿ ಯಾರಿಗೂ ಗೊತ್ತಿಲ್ಲ! ಆದರೆ ಸುಮನ್ ಅಂತೂ ಮಂದಿರಾ ಹಿಂದೆ ಬಿದ್ದು ಹುಚ್ಚನಂತೆ ಪ್ರೀತಿಸುತ್ತಿದ್ದ. ಮದುವೆ ಆದ್ರೆ ಅವಳನ್ನೇ... ಬದುಕಿದ್ರೆ ಅವಳ ಜತೆಯೇ... ಎನ್ನುತ್ತಿದ್ದ!! ಈತ ಏನೇ ಲಾಗಾ ಹಾಕಿದ್ರೂ ಮಂದಿರಾ ಮಾತ್ರ ಇವನನ್ನು ವಿವಾಹವಾಗಲು ಒಪ್ಪಿರಲಿಲ್ಲ!


ಡಿಸಿಪಿ ಎಂ. ನಾರಾಯಣ


ಎಸಿಪಿ ಸತೀಶ್


ಪಿಐ ಜಿ. ಸೋಮಶೇಖರ್

**ಕತ್ತು ಕೊಯ್ದು ತಾನೂ...!**

ಆವತ್ತು ಆಗಸ್ಟ್ 5, 2025. ಮಂದಿರಾ ಮಂಡಲ್ ತನ್ನ ಮಗುವನ್ನು ತಂದೆತಾಯಿ ಬಳಿ ಬಿಟ್ಟು ತಾನು ಪ್ರೆಸ್ಟೀಜ್ ಅಪಾರ್ಟ್‌ಮೆಂಟ್‌ನಲ್ಲಿ ಹೌಸ್ ಕೀಪಿಂಗ್ ಕೆಲಸ ಮಾಡಲು ಹೋಗಿದ್ದಳು. ಕೆಲಸ ಮುಗಿಸಿಕೊಂಡು ಮನೆಗೆ ಹಿಂತಿರುಗಿದಾಗ ಸುಮನ್ ಮಂಡಲ್ ಅಲ್ಲಿಗೆ ಬಂದಿದ್ದಾನೆ. ಮತ್ತದೇ ಪ್ರೇಮ ನಿವೇದನೆ, ಅವಳಿಂದ ನಿರಾಕರಣೆ! ಇಬ್ಬರ ಮಧ್ಯೆ ಜಗಳವಾಗಿದೆ. ಒಂದು ಹಂತದಲ್ಲಿ ತಾಳ್ಮೆ ಕಳೆದುಕೊಂಡಿರುವ ಸುಮನ್, ನಿನ್ನನ್ನು ಬಿಟ್ಟು ಬದುಕುವ ಶಕ್ತಿ ನನಗಿಲ್ಲ... ನನಗೆ ಸಿಗದ ನೀನು ಇನ್ನಾರಿಗೂ ಸಿಗಲೇಬಾರದು... ಅಂತೆಲ್ಲಾ ಹುಚ್ಚುಚ್ಚಾಗಿ ಕಿರುಚಾಡಿ, ಚಾಕು ಎತ್ತಿಕೊಂಡು ಮಂದಿರಾಳ ಕುತ್ತಿಗೆಯನ್ನು ಸೀಳಿ ಬರ್ಬರವಾಗಿ ಕೊಲೆ ಮಾಡಿದ್ದಾನೆ! ನಂತರ ಅದೇ ಮನೆಯೊಳಗೆ ಅವಳದ್ದೇ 'ವೇಲ್'ನಿಂದ ನೇಣು ಜೀರಿಕೊಂಡು ತಾನೂ ಸೂಸೈಡ್ ಮಾಡಿಕೊಂಡಿದ್ದಾನೆ!!

ಮಂದಿರಾಳ ತಮ್ಮ ಅಕ್ಕನ ಹುಡುಕಿಕೊಂಡು ಆಕೆಯ ಮನೆಗೆ ಬಂದು ನೋಡಿದಾಗ ಬಾಗಿಲು ಮುಚ್ಚಿದ್ದು, ಒಳಗಡೆಯಿಂದ ಲಾಕ್ ಆಗಿದ್ದು ಕಂಡು ಬಂದಿತ್ತು. ಎಷ್ಟು ಬಡಿದರೂ ಆಕೆ ಬಾಗಿಲು ತೆಗೆಯದಿದ್ದಾಗ ಗಾಬರಿಯಾಗಿ ತನ್ನ ತಂದೆಗೆ ಸುದ್ದಿ ಮುಟ್ಟಿಸಿದ್ದ. ತಂದೆ ಶಶಾಂಕ್ ಗಾಬರಿಯಾಗಿ ಅಲ್ಲಿಗೆ ಧಾವಿಸಿ ಬಂದು ಎಲ್ಲರೂ ಸೇರಿಕೊಂಡು ಬಾಗಿಲು ಮುರಿದು ನೋಡಿದಾಗ, ಹಾಲ್‌ನಲ್ಲಿ ನೆತ್ತರ ಕೋಡಿ ಹರಿದು ಮಂದಿರಾ ಶವವಾಗಿ ಬಿದ್ದಿದ್ದ ದೃಶ್ಯ ಕಾಣಿಸಿತು. ಸಮೀಪದ ಕೋಣೆಯೊಳಗೆ ಸುಮನ್ ನೇಣು ಜೀರಿಕೊಂಡು ನೇತಾಡುತ್ತಿದ್ದ ದೃಶ್ಯ ಗೋಚರಿಸಿತು.

ಶಶಾಂಕ್ ಮಂಡಲ್ ಕೂಡಲೇ ಹೆಬ್ಬಗೋಡಿ ಪೊಲೀಸ್ ಠಾಣೆಗೆ ತೆರಳಿ ಈ ಬಗ್ಗೆ ಮಾಹಿತಿ ನೀಡಿದ್ದು, ಅಲ್ಲಿನ ಪೊಲೀಸ್ ಇನ್ಸ್‌ಪೆಕ್ಟರ್ ಜಿ. ಸೋಮಶೇಖರ್ ಈ ಪ್ರಕರಣ ದಾಖಲಿಸಿಕೊಂಡು (ಕ್ರೈಂ ನಂ. 410/2025) ಘಟನಾ ಸ್ಥಳಕ್ಕೆ ತೆರಳಿ ಮಹಜರು ಕಾರ್ಯ ನಡೆಯಿಸಿ ಮೃತರ ಶವಗಳನ್ನು ಪಂಚನಾಮೆಗೆ ಸಾಗಿಸಿದರು.

ಘಟನಾ ಸ್ಥಳಕ್ಕೆ ಎಲೆಕ್ಟ್ರಾನಿಕ್ ಸಿಟಿ ಉಪ ವಿಭಾಗದ ಡಿಸಿಪಿ ಎಂ. ನಾರಾಯಣ, ಎಸಿಪಿ ಸತೀಶ್ ಅವರುಗಳು ಆಗಮಿಸಿ ವೀಕ್ಷಿಸಿದ್ದು, ಅವರ ಮಾರ್ಗದರ್ಶನದಲ್ಲಿ ಇನ್ಸ್‌ಪೆಕ್ಟರ್ ಜಿ. ಸೋಮಶೇಖರ್ ಈ ಪ್ರಕರಣದ ತನಿಖೆಯನ್ನು ಮುಂದುವರೆಸಿದ್ದಾರೆ. ☯


ಗಂಡನೊಂದಿಗೆ ಮಂದಿರಾ

# ಜಾನಕಲ್ ಗ್ರಾ.ಪಂ. ಸದಸ್ಯೆ ಗಾಯತ್ರಿ ಜಾತ್ರೆ ದಿನವೇ ಗಂಡನ ಕೊಲ್ಲಿಸಿಬಿಟ್ಲು!



ಆರೋಪಿ ಗಾಯತ್ರಿ



ಕೊಲೆಯಾದ ಪ್ರಸನ್ನಕುಮಾರ್

✍ ಹಿರಿಯೂರು ರಫೀಕ್

ತರೀಕೆರೆ ತಾಲ್ಲೂಕಿನ ಲಿಂಗದಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಹೊಸದುರ್ಗ ತಾಲ್ಲೂಕಿನ ಜಾನಕಲ್ ಗ್ರಾಮದ ಪ್ರಸನ್ನಕುಮಾರ್ (45 ವರ್ಷ) ಕೊಲೆ ಪ್ರಕರಣದ ಸಂಬಂಧ ಆರು ತಿಂಗಳ ನಂತರ ನಾಲ್ವರು ಆರೋಪಿಗಳನ್ನು ಹೊಸದುರ್ಗ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹೊಸದುರ್ಗ ತಾಲ್ಲೂಕಿನ ಜಾನಕಲ್ ಗ್ರಾಮದ ನಿವಾಸಿ ಪ್ರಸನ್ನಕುಮಾರ್ (45) ಕೊಲೆಯಾದ ದುರ್ದೈವಿ. ಈತನ ಹೆಂಡತಿ ಗಾಯತ್ರಿ (30) ಈಕೆ ಜಾನಕಲ್ ಗ್ರಾಮದ ಗ್ರಾಮ ಪಂಚಾಯಿತ್ತಿ ಸದಸ್ಯೆಯಾಗಿದ್ದಳು! ಫೆಬ್ರವರಿ 15ರಂದು ಹೆಂಡತಿಯ ಊರಾದ ಬನಸಿಹಳ್ಳಿಯಲ್ಲಿ ಏಕನಾಥೇಶ್ವರಿ ಜಾತ್ರೆಯಿದ್ದು, ಜಾತ್ರೆಗೆ ಪ್ರಸನ್ನಕುಮಾರ್ ಹೋಗಿದ್ದ, ಅಲ್ಲಿಂದ ಮರಳಿ ತನ್ನ ಗ್ರಾಮವಾದ ಜಾನಕಲ್‌ಗೆ ಬಂದಿಲ್ಲ. ಇದರಿಂದ ಇವರ



ಎಸ್ಪಿ ರಂಜಿತ್‌ಕುಮಾರ್ ಬಂಡಾರು



ಡಿವೈಎಸ್ಪಿ ಟಿ.ಎಂ. ಶಿವಕುಮಾರ್



ಪಿಐ ಕೆ.ಟಿ. ರಮೇಶ್

ತಂದೆ ಷಣ್ಮುಖಪ ಗಾಬರಿಗೊಂಡು ಹೊಸದುರ್ಗ ಪೊಲೀಸ್ ಠಾಣೆಯಲ್ಲಿ ಮಗ ಕಾಣೆಯಾದ ಬಗ್ಗೆ ದೂರು ದಾಖಲಿಸುತ್ತಾರೆ. ದೂರು ದಾಖಲಿಸಿಕೊಂಡ ಹೊಸದುರ್ಗ ಪೊಲೀಸ್ ಇನ್ಸ್‌ಪೆಕ್ಟರ್ ಕೆ.ಟಿ. ರಮೇಶ್‌ರವರು ತನಿಖೆ ಕೈಗೊಳ್ಳುತ್ತಾರೆ. ತಮ್ಮ ಜಿಲ್ಲೆ ಹಾಗೂ ಪಕ್ಕದ ಜಿಲ್ಲೆಗಳಲ್ಲಿ ಅನಾಮಧೇಯ ಶವಗಳ ಬಗ್ಗೆ ನಿಗಾವಹಿಸುತ್ತಾರೆ. ಅಂತಹ ಘಟನೆ ವರದಿಯಾದರೆ ಘಟನಾ ಸ್ಥಳಕ್ಕೆ ತೆರಳಿ ಪರಿಶೀಲಿಸುತ್ತಾರೆ. ಹೀಗಿರುವಾಗ, ಜುಲೈ 20ರಂದು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಲಿಂಗದಹಳ್ಳಿ ಅರಣ್ಯ ಪ್ರದೇಶದಲ್ಲಿ ಕೊಳೆತ ಸ್ಥಿತಿಯಲ್ಲಿದ್ದ ಒಂದು ಮೃತದೇಹ ಪತ್ತೆಯಾಗುತ್ತದೆ. ಈ ವಿಷಯ ಪತ್ರಿಕೆಗಳಲ್ಲಿ ಪ್ರಕಟವಾದಾಗ ಹೊಸದುರ್ಗ ಪೊಲೀಸರು ಲಿಂಗದಹಳ್ಳಿಗೆ ತೆರಳಿ ಪರಿಶೀಲನೆ ನಡೆಸುತ್ತಾರೆ.

ಪ್ರಸನ್ನಕುಮಾರ್‌ರವರ ತಂದೆಯನ್ನು ಕೂಡ ಲಿಂಗದಹಳ್ಳಿಗೆ ಕರೆದುಕೊಂಡು ಹೋಗಿ ಮಗನ ಶವ ಪತ್ತೆಹಚ್ಚುವಂತೆ ತಿಳಿಸುತ್ತಾರೆ. ಆಗ ಷಣ್ಮುಖಪ್ಪ ಮೃತದೇಹವನ್ನು ಕೂಲಂಕುಷವಾಗಿ ನೋಡುತ್ತಾರೆ. ಬಟ್ಟೆ ಹಾಗೂ ಇನ್ನಿತರ ಗುರುತುಗಳ ಆಧಾರದ ಮೇಲೆ ಇದು ತನ್ನ ಮಗನ ದೇಹವೇ ಎಂದು ತಿಳಿಸುತ್ತಾರೆ. ಆಗ ಪೊಲೀಸರು ಕೊಲೆ ಮೊಕದ್ದಮೆ ದಾಖಲಿಸಿಕೊಂಡು ಕೊಲೆ ಆರೋಪಿಗಳ ಪತ್ತೆಗಾಗಿ ಡಿವೈಎಸ್ಪಿ ಟಿ.ಎಂ. ಶಿವಕುಮಾರ್‌ರವರು ಒಂದು ತಂಡವನ್ನು ರಚಿಸುತ್ತಾರೆ. ಪಿಐ ಕೆ.ಟಿ. ರಮೇಶ್, ಪಿಎಸ್‌ಐಗಳಾದ ಭೀಮನಗೌಡ ಪಾಟೀಲ್ ಹಾಗೂ ಮಹೇಶ್‌ಕುಮಾರ್ ಮತ್ತು ಸಿಬ್ಬಂದಿಗಳು ಕೊಲೆ ಆರೋಪಿಗಳ ಬಂಧನಕ್ಕೆ ವ್ಯಾಪಕ ಜಾಲ ಬೀಸುತ್ತಾರೆ.

### ಹೆಂಡತಿ ಮೇಲೆ ಅನುಮಾನ

ಮೊದಲಿಗೆ ಪ್ರಸನ್ನಕುಮಾರ್‌ನ ಮೊಬೈಲ್ ವಶಕ್ಕೆ ಪಡೆದು ಯಾರ್‍ಯಾರು ಸಂಭಾಷಣೆ ನಡೆಸಿದ್ದಾರೆ ಎಂಬುದನ್ನು ಪರಿಶೀಲಿಸುತ್ತಾರೆ. ಅದರಲ್ಲಿ ಹೆಂಡತಿ ಗಾಯತ್ರಿ ಹಾಗೂ ಹೊಸದುರ್ಗ ಶಾಸಕರ ಕಾರು ಚಾಲಕ ಯಶವಂತನೊಂದಿಗೆ ಬಹಳಷ್ಟು ಸಲ ಮಾತಾಡಿರುವುದು ಗೊತ್ತಾಗುತ್ತದೆ! ಈಕೆ ಅವನೊಂದಿಗೆ ಅಕ್ರಮ ಸಂಬಂಧ ಹೊಂದಿದ್ದ ವಾಸನೆ ಪೊಲೀಸರಿಗೆ ಮನವರಿಕೆಯಾಗುತ್ತದೆ. ಆಗ ಗಾಯತ್ರಿಯನ್ನು ವಶಕ್ಕೆ ಪಡೆದು ಪೊಲೀಸ್ ಭಾಷೆಯಲ್ಲಿ ವಿಚಾರಿಸಿದಾಗ ಕೊಲೆ ರಹಸ್ಯ ಹೊರ ಬಂತು. ಹೇಳಿ ಕೇಳಿ ಗಾಯತ್ರಿ ಗ್ರಾಮ ಪಂಚಾಯತ್ ಸದಸ್ಯೆ. ಶಾಸಕರ ಕಾರು ಚಾಲಕ ಯಶವಂತನೊಂದಿಗೆ ಲವ್ವಿಡವ್ವಿ ಇಟ್ಟುಕೊಂಡಿರುತ್ತಾಳೆ. ಈ ವಿಷಯ ಗಂಡ ಪ್ರಸನ್ನಕುಮಾರ್ ಕಿವಿಗೆ ಬೀಳುತ್ತದೆ. ಆಗ ಗಂಡ ಈಕೆಗೆ ಬುದ್ಧಿಮಾತು ಹೇಳುತ್ತಾನೆ. ಹಾದರಗಿತ್ತಿ ಗಾಯತ್ರಿ ಕೇಳುವುದಿಲ್ಲ. ಸಂಬಂಧವನ್ನು ಹಾಗೇ ಮುಂದುವರಿಸುತ್ತಾಳೆ. ಇದರಿಂದ ಗಂಡನಿಗೆ ತಡೆದುಕೊಳ್ಳಲಾಗುವುದಿಲ್ಲ. ಹೆಂಡತಿಗೆ ಹೊಡೆಯುವುದು, ಬಡಿಯುವುದು ಮಾಡಿದ್ದಾನೆ. ಇದು ಗಾಯತ್ರಿಗೆ ಸಹ್ಯವಾಗಿಲ್ಲ. ಇವನ ಕಾಟ ಸಹಿಸಲಾಗದೆ ತನ್ನ ಪ್ರೇಮಿ ಯಶವಂತನಿಗೆ ವಿಚಾರ ತಿಳಿಸಿದ್ದಾಳೆ.

### ಕೊಲೆಗೆ ಪ್ಲಾನ್

ನನ್ನ ಗಂಡನ ಕಾಟ ಜಾಸ್ತಿಯಾಗಿದೆ. ನನ್ನಿಂದ ಒದೆ ತಿನ್ನಲು ಸಾಧ್ಯವಿಲ್ಲ, ಹೇಗಾದರೂ ಮಾಡಿ ಇವನನ್ನು ಮುಗಿಸಬೇಕೆಂದು ಪ್ಲಾನ್ ಮಾಡುತ್ತಾಳೆ. ಆಗ ಯಶವಂತ ಹಾಗೂ ಆತನ ಸ್ನೇಹಿತರಾದ ಲೋಹಿತ್, ಆಟೋ ಡ್ರೈವರ್ ವೀರಭದ್ರಪ್ಪ ಎಂಬುವರು ಅವನಿಗೆ ಸಾಥ್ ನೀಡುತ್ತಾರೆ. ಬನಸಿಹಳ್ಳಿ ಜಾತ್ರೆಗೆ ಬಂದಿದ್ದ ಪ್ರಸನ್ನಕುಮಾರ್‌ನನ್ನು ಪುಸಲಾಯಿಸಿ ಮಾರುತಿ ಸ್ವಿಫ್ಟ್ ಕಾರಿನಲ್ಲಿ ಕುಳ್ಳಿರಿಸಿಕೊಂಡು ಕಾರಿನಲ್ಲಿ ಅವರ ಮೇಲೆ ತೀವ್ರ ಹಲ್ಲೆನಡೆಸಿ ಟವಲ್‌ನಿಂದ ಕುತ್ತಿಗೆಗೆ ಬಿಗಿದು ಉಸಿರುಗಟ್ಟಿಸಿ ಸಾಯಿಸಿ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಲಿಂಗದಹಳ್ಳಿ ಅರಣ್ಯದಲ್ಲಿ ಬಿಸಾಡಿ ಹೋಗುತ್ತಾರೆ. ನಂತರ ತಮಗೆ ಏನೂ ಗೊತ್ತಿಲ್ಲ ಎಂಬಂತೆ ಸುಮ್ಮನಿರುತ್ತಾರೆ! ಹೀಗೆ, ಗಾಯತ್ರಿಯ ಸಲಹೆಯಂತೆ ಯಶವಂತ, ಲೋಹಿತ್, ವೀರಭದ್ರಪ್ಪ ಇವರುಗಳು ಪ್ರಸನ್ನಕುಮಾರ್‌ನನ್ನು ಕೊಲೆ ಮಾಡಿರುತ್ತಾರೆ.



ಆರೋಪಿಗಳಾದ ಯಶವಂತ್, ಲೋಹಿತ್ ಹಾಗೂ ವೀರಭದ್ರ

ಹೊಸದುರ್ಗ ಪಿಐ ಕೆ.ಟಿ. ರಮೇಶ್ ಗಾಯತ್ರಿ ಹಾಗೂ ಮೇಲ್ಕಂಡ ಆರೋಪಿಗಳನ್ನು ಬಂಧಿಸಿ ಆರೋಪಿಗಳ ವಿರುದ್ಧ ಕ್ರೈಂ ನ. 339/2025 ಕಲಂ 103(1) 140(1) ಬಿಎನ್‌ಎಸ್ ರೀತ್ಯ ಪ್ರಕರಣ ದಾಖಲಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿರುತ್ತಾರೆ. ಅಂದಹಾಗೆ; ಹೊಸದುರ್ಗದ ಶಾಸಕರು ತಮ್ಮ ಕಾರು ಚಾಲಕ ಯಶವಂತನನ್ನು ತುಂಬಾ ಕುಡಿಯುತ್ತಾನೆಂದು ತಿಂಗಳ ಹಿಂದೆ ನೌಕರಿಯಿಂದ ತೆಗೆದಿದ್ದರು ಎನ್ನಲಾಗಿದೆ! ಕೊಲೆ ಆರೋಪಿಗಳನ್ನು ಬಂಧಿಸಿದ ತಂಡವನ್ನು ಚಿತ್ರದುರ್ಗದ ಎಸ್ಪಿ ರಂಜಿತ್‌ಕುಮಾರ್ ಬಂಡಾರುರವರು ಪ್ರಶಂಸಿಸಿದ್ದಾರೆ.

## ಓದುಗರ ಗಮನಕ್ಕೆ

### ರಾಜಕೀಯ ಸುದ್ದಿಯೂ ಇರುತ್ತದೆ...

'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಬರೀ ಅಪರಾಧ ವರದಿಗಳು ಮಾತ್ರ ಬರುತ್ತದೆ ಅಂದುಕೊಳ್ಳಬೇಡಿ. ಬದಲಾದ ಕಾಲಮಾನದಲ್ಲಿ ಇನ್ನು ಮುಂದೆ ರಾಜಕೀಯ, ಭ್ರಷ್ಟಾಚಾರ, ಮುಚ್ಚಿ ಹೋಗಿರುವ 'ಕ್ರೈಂ' ಮುಂತಾದ ರಹಸ್ಯ ವರದಿಗಳನ್ನು ಬ್ಲಾಸ್ಟ್ ಮಾಡಲಿದ್ದೇವೆ. ನಿಮ್ಮ ಊರುಗಳಲ್ಲಿ ಇಂತಹ ಬ್ಲಾಸ್ಟ್ ಮಾಡುವಂತಹ ಸುದ್ದಿಗಳಿದ್ದರೆ ನಮಗೆ ಕಳುಹಿಸಿ ಕೊಡಿ. ನಿಮ್ಮ ಹೆಸರು, ವಿಳಾಸವನ್ನು ರಹಸ್ಯವಾಗಿಡುವ ಜವಾಬ್ದಾರಿ ನಮ್ಮದು. ನೀವು ಕಳುಹಿಸುವ ವರದಿಗೆ ದಾಖಲೆಗಳಿದ್ದರೆ ಒಳ್ಳೆಯದು. ಅಕಸ್ಮಾತ್ ದಾಖಲೆಗಳು ಇಲ್ಲದಿದ್ದಲ್ಲಿ, ನೀವು ಕಳುಹಿಸುವ ವರದಿಯಲ್ಲಿ ದಾಖಲೆಗಳು ಸಿಗುವ ಜಾಗವನ್ನು ನಮೂದಿಸಿದರೆ ಸಾಕು, ದಾಖಲೆ ಎತ್ತುವ ಜವಾಬ್ದಾರಿ ನಮ್ಮದು.

**ನಮ್ಮ ವಿಳಾಸ :**

8884452699

policenewsreporter@gmail.com

ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ,
ಬಸವೇಶ್ವರನಗರ, ಬೆಂಗಳೂರು-560 079

080-23588510

# ಬುದ್ಧಿ ಹೇಳಿದ ಅಣ್ಣನ ಮಗನ ಕತ್ತು ಸೀಳಿ ಕೊಂದ ಪಾಪಿ ಭೀಮಪ್ಪ!

**ಆಸ್ತಿ ವಿಷಯಕ್ಕೆ ಅಥವಾ ಇನ್ನಾವುದೋ ವಿಷಯಕ್ಕೆ ಸಂಬಂಧಪಟ್ಟಂತೆ ಅಣ್ಣತಮ್ಮಂದಿರ ಮಧ್ಯೆ ಜಗಳಗಳು ಇದ್ದೇ ಇರುತ್ತದೆ, ಅದು ಸಾಮಾನ್ಯ. ಆದರೆ ಇಥೆಂಥ ಕ್ರೌರ್ಯ? ಹಗೆತನ ಅರ್ಥ ಮಾಡಿಕೊಳ್ಳುವುದು ನಿಜಕ್ಕೂ ಕಷ್ಟ! ಅಣ್ಣನಾದವನು ತಮ್ಮ ತಪ್ಪು ಮಾಡಿದರೆ ಬುದ್ಧಿ ಹೇಳಬಾರದೆ? ಇಲ್ಲೊಬ್ಬ ಕಿರಾತಕ ಒಂದು ವರ್ಷದ ಹಿಂದೆ ಕ್ಷುಲಕ ಕಾರಣಕ್ಕೆ ತನ್ನ ಹೆಂಡತಿಯನ್ನ ಹೊಡೆದು ಬಡಿದು ಮಾಡುತ್ತಿರುವಾಗ, ದೊಡ್ಡಪ್ಪನ ಮಗ ಹಾಗೂ ಸಂಬಂಧಿಕರು ಬೈದು ಬುದ್ಧಿ ಹೇಳಿದ್ದರು. ಅದೇ ಒಂದು ಕಾರಣ ಇಟ್ಟುಕೊಂಡು ವರ್ಷದಿಂದಲೂ ದ್ವೇಷ ಸಾಧಿಸುತ್ತಾ ಬಂದಿದ್ದನು! ಮೊನ್ನೆ ಮತ್ತೊಂದು ವಿಚಾರಕ್ಕೆ ಜಗಳವಾಗಿದ್ದು, ತನಗೆ ಬುದ್ಧಿವಾದ ಹೇಳಿದ್ದ ದೊಡ್ಡಪ್ಪನ 4 ವರ್ಷದ ಕಂದಮ್ಮನನ್ನು ಕತ್ತು ಕತ್ತರಿಸಿ ಕೊಲೆಗೈದಿದ್ದಾನೆ. ಈ ಹೃದಯ ವಿದ್ರಾವಕ ಘಟನೆ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಬೆನಕನವಾಡಿ ಎಂಬ ಗ್ರಾಮದಲ್ಲಿ ನಡೆದಿದ್ದು ಅಮೀನಗಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.**

**ಬಾಗಲಕೋಟೆ**

✍ ಮಂಜುನಾಥ ಈಶ್ವರ ಕರೋಳಿ

ಸಾಂಸ್ಕೃತಿಕ ನಗರಿ ಕೋಟೆ ನಾಡು ಬಾಗಲಕೋಟ ಜಿಲ್ಲೆಯ ಹುನಗುಂದ ತಾಲ್ಲೂಕಿನ ಬೆನಕನವಾಡಿ ಗ್ರಾಮ ರೈತಾಪಿಯನ್ನೇ ಅವಲಂಭಿಸಿರುವ ಈ ಗ್ರಾಮ. ಇಲ್ಲಿನ ನಿವಾಸಿ ಮಾರುತಿ ಫಕೀರಪ್ಪ ವಾಲಿಕಾರ (36) ಹೆಂಡತಿ ಹನಮವ್ವ ಈ ಕೃಷಿ ಅವಲಂಭಿತ ಕುಟುಂಬ ಗ್ರಾಮದಲ್ಲಿ ಸುಮಾರು ಎರಡು ಎಕರೆ ಜಮೀನು ಹೊಂದಿದ್ದು ವಾಣಿಜ್ಯ ಬೆಳೆಯನ್ನು ಬೆಳೆಯುತ್ತ ತಮ್ಮ ಸಂಸಾರದ ಬಂಡಿಯನ್ನು ಸಾಗಿಸಿದ್ದರು. ಮಾರುತಿಯ ತಂದೆಯಾದ ಫಕೀರಪ್ಪ ಮನೆಯ ಹಿರಿಜೀವ. ಮಗ, ಸೊಸೆ ಜಮೀನಿನಲ್ಲಿ ಕೂಲಿ ಕೆಲಸ ಮಾಡಿಕೊಂಡು ಅನ್ಯೋನ್ಯವಾಗಿದ್ದರು. ಮಾರುತಿ ವಾಲಿಕಾರ ಪತ್ನಿ ಹನಮವ್ವ ದಂಪತಿಗಳಿಗೆ ಎರಡು ಮುದ್ದಾದ ಮಕ್ಕಳು ಜನಿಸಿದವು. ಒಂದು ಗಂಡು ಮಗು ಒಂದು ಹೆಣ್ಣು ಮಗು. ವೀಣಾ (5), ಮಧು ಕುಮಾರ (4). ಹೀಗೆ ಎರಡು ಮಕ್ಕಳದ ಜನನದ ನಂತರ ಮನೆಯಲ್ಲಿ ಸಂತೋಷದ ವಾತಾವರಣ ಸೃಷ್ಠಿಯಾಗಿತ್ತು. ಮಾರುತಿ ಹಾಗೂ ಪತ್ನಿ ಹನಮವ್ವ ಮಕ್ಕಳ ಪಾಲನೆ ಪೋಷಣೆಗೆ ಹೆಚ್ಚಿನ ಮಹತ್ವ ನೀಡಿದ್ದರು. ಮಾರುತಿಯ ತಂದೆಯಾದ ಫಕೀರಪ್ಪ ಅವರಿಗೂ





ಕೊಲೆಯಾದ ಬಾಲಕ ಮಧುಕುಮಾರ

ವಯಸ್ಸಾಗಿದ್ದು ಮನೆಯಲ್ಲಿ ಮೊಮ್ಮಕ್ಕಳೊಂದಿಗೆ ಇರುತ್ತಿದ್ದ. ಇವರದು ಒಂದು ತುಂಬಿದ ಸಂಸಾರವಾಗಿ ಮಾರ್ಪಾಟಾಗಿತ್ತು. ಮಾರುತಿಗೆ ತನ್ನ ಮಕ್ಕಳು ಬೆಳೆದು ಒಳ್ಳೆಯ ಶಿಕ್ಷಣ ಕೊಡಿಸಿ ಅವರನ್ನ ಸಮಾಜಮುಖಿಗಳಾಗಿ ಬೆಳೆಯಬೇಕು ಎಂಬ ಹತ್ತಾರು ಕನಸುಗಳ ಗೋಪುರವನ್ನೇ ನಿರ್ಮಿಸಿಕೊಂಡು ಸಂಸಾರದ ಬಂಡಿ ಸಾಗಿಸಿ ಮನೆಯಲ್ಲಿ ಫಕೀರಪ್ಪ ಆತನ ಮೊಮ್ಮಕಳ ಜೊತೆ ಇದ್ದು ಇತ್ತ ಮಾರುತಿ ಹಾಗೂ ಪತ್ನಿ ಹನಮವ್ವ ಜೀವನ ಸಾಗಿಸಿದ್ದರು.

**ಸಹೋದರನ ಮನೆ ಜಗಳ, ಅಣ್ಣನಿಂದ ಬುದ್ಧಿವಾದ!**

ಈಗ್ಗೆ ಒಂದು ವರ್ಷದ ಹಿಂದೆ ಅಂದರೆ 2024ರಲ್ಲಿ ಮಾರುತಿ ವಾಲಿಕಾರ, ತನ್ನ ಚಿಕ್ಕಪ್ಪನ ಮಗನಾದ ಭೀಮಪ್ಪ ಹನಮಪ್ಪ ವಾಲಿಕಾರ ಎಂಬುವನು ತನ್ನ ಹೆಂಡತಿಯೊಂದಿಗೆ ಯಾವುದೋ ಕಾರಣಕ್ಕೆ ಜಗಳ ಮಾಡಿ ಹೊಡೆದು, ಬಡಿದು ಮಾಡಿದನಂತೆ. ಈ ವಿಷಯ ಮಾರುತಿಗೆ ಗೊತ್ತಾಗಿದೆ. ಇಬ್ಬರು ಸಹೋದರ ಕುಟುಂಬವರು ಅಕ್ಕ ಪಕ್ಕದ ಗಲ್ಲಿಯಲ್ಲಿಯೋ ಮನೆ. ಈ ವಿಚಾರವಾಗಿ ಮಾರುತಿ ತನ್ನ ತಮ್ಮನಾದ ಭೀಮಪ್ಪ ವಾಲಿಕಾರನಿಗೆ ಸಂಬಂಧಿಕರ ಸಮ್ಮುಖದಲ್ಲಿ ಬುದ್ಧಿವಾದ ಹೇಳಿ, ಯಾಕೆ ನಿನ್ನ ಹೆಂಡತಿಯನ್ನು ಹೊಡಿಯುತ್ತಿದ್ದಿಯಾ? ಇಷ್ಟು ದಿನ ಇರಲಾರದ ಸಿಟ್ಟು ಆಕೆ ಮೇಲೆ ಯಾಕೆ? ಅಂತಾ ಭೀಮಪ್ಪನಿಗೆ ಕೇಳಿದ್ದ. ಆಗ ಭೀಮಪ್ಪ ಉಡಾಫೆ ಉತ್ತರವನ್ನು ನೀಡಿದ್ದು ಅಣ್ಣನಾದ ಮಾರುತಿ ಹಾಗೂ ಸಂಬಂಧಿಕರು ಅವಳು ಎಷ್ಟೇ ಆಗಲಿ ನಿನ್ನ ಹೆಂಡತಿ, ಹೊಡೆದು ಬಡಿದು ಮಾಡುವುದು ಸರಿ ಇಲ್ಲ, ಚೆನ್ನಾಗಿ ಸಂಸಾರ ಮಾಡಿಕೊಂಡು ಹೋಗು ಅಂತ ಬುದ್ಧಿ ಹೇಳಿದ್ದಾನೆ. ಆಗ ಭೀಮಪ್ಪ ಮಾರುತಿ, ನೀನು ನನ್ನ ದೊಡ್ಡಪ್ಪನ ಮಗ, ವರಸೆಯಲ್ಲಿ ಅಣ್ಣ ಆಗಿರಬಹುದು. ಇದು ನನ್ನ ಕುಟುಂಬದ ವಿಚಾರ, ಅದಕ್ಕೆ ನೀನು ಬುದ್ಧಿ ಹೇಳಲು ಬರಬೇಡ ಅಂತಾ ಮಾರುತಿಗೆ ತಿರುಗೇಟು ನೀಡಿದನು. ನಂತರ ತನ್ನ ಸಂಸಾರದ ಕಡೆ ಗಮನ ಕೊಟ್ಟು ಸುಮಾರು ಒಂದು ವರ್ಷದ ತನಕ ಸುಮ್ಮನಿದ್ದನು.



ಎಸ್ಪಿ ಸಿದ್ದಾರ್ಥ ಗೋಯಲ್



ಅ॥ ಎಸ್ಪಿ ಪ್ರಸನ್ನ ದೇಸಾಯಿ



ಸಿಪಿಐ ಸುನೀಲ್ ಸವದಿ



ಪಿಎಸ್ಐ ಜ್ಯೋತಿ ವಾಲಿಕಾರ

**ವರ್ಷದಿಂದ ಹಗೆ ಸಾಧಿಸಿದನು!**

ವರ್ಷದ ಹಿಂದೆ ತನ್ನ ಅಣ್ಣನಾದ ಮಾರುತಿ ವಾಲಿಕಾರ ಬುದ್ಧಿ ಹೇಳಿದ ಸಿಟ್ಟಿನಿಂದ ಭೀಮಪ್ಪ ಒಂದು ವರ್ಷದ ತನಕ ಆತನ ಮೇಲೆ ಹಲ್ಲು ಮಸೆಯುತ್ತ ಬಂದಿದ್ದನು! ಕಳೆದ ದಿನಾಂಕ ಜುಲೈ 22, 2025ರಂದು ಎಂದಿನಂತೆ ಮಾರುತಿ ವಾಲಿಕಾರ ಹೆಂಡತಿ ಹನಮವ್ವ ತಮ್ಮ ದಿನನಿತ್ಯದ ಕೆಲಸಕ್ಕೆ ಹೋಗಲು ಸಜ್ಜಾಗಿ ಮಾರುತಿ ತನ್ನ ತಂದೆಯಾದ ಫಕೀರಪ್ಪನಿಗೆ ತನ್ನ ಮಕ್ಕಳನ್ನು ಅಂಗನವಾಡಿಗೆ ಬಿಡು ನಾವು ಹೊಲಕ್ಕೆ ಹೊಗ್ತೀವಿ ಅಂತಾ ಹೇಳಿ ತಮ್ಮ ಕೆಲಸಕ್ಕೆ ತಾವು ಹೋಗಿದ್ದರು. ಆಗ ಫಕಿರಪ್ಪ ತನ್ನ ಮೊಮ್ಮಗ ಪುಟ್ಟ ಕಂದಮ್ಮ ಮಧು ಕುಮಾರ ಬೆನಕನವಾಡಿ ಅಂಗನವಾಡಿ ಕೇಂದ್ರಕ್ಕೆ ಬಿಡಲು ಹೋಗಿದ್ದಾರೆ. ಆಗ ಸಮಯ ಬೆಳಿಗ್ಗೆ 8:30 ರ ಸಮಯವಾಗಿರಬಹುದು. ಇನ್ನು ಅಂಗನವಾಡಿ ಕೇಂದ್ರ ತೆರೆದಿರದ ಕಾರಣ ತನ್ನ ಮೊಮ್ಮಗನನ್ನು ಅಲ್ಲಿಯೇ ಇದ್ದ ಗ್ರಾಮದ ಮಕ್ಕಳೊಂದಿಗೆ ಆಟವಾಡಲು ಬಿಟ್ಟು ಮನೆಗೆ ಬಂದಿದ್ದಾರೆ. ಅದೇ ಸಮಯದಲ್ಲಿ ಭೀಮಪ್ಪ ವಾಲಿಕಾರ ಅಂಗನವಾಡಿ ಕೇಂದ್ರಕ್ಕೆ ಬಂದಿರುತ್ತಾನೆ. ಅಲ್ಲಿ ಆ ಪುಟ್ಟ ಕಂದಮ್ಮ ಮಕ್ಕಳೊಂದಿಗೆ ಆಟವಾಡಿಕೊಂಡು ಇತ್ತು. ಇದೇ ಸಮಯ.... ಅಂದುಕೊಂಡು ತನ್ನ ಅಣ್ಣನ ಮಗನಾದ ಆ ಪುಟ್ಟ ಕಂದಮ್ಮ ಮಧುಕುಮಾರನನ್ನು ಎತ್ತಿಕೊಂಡು ತನ್ನ ಮನೆಗೆ ಕರೆದುಕೊಂಡು ಬಂದು ತನ್ನ ಅಣ್ಣನ ಮೇಲಿನ

☞ 10



ಆರೋಪಿ ಭೀಮಪ್ಪ ವಾಲಿಕಾರ

## ಸ್ವಂತ ಅಕ್ಕ-ತಂಗೀರು!

ಮಾರುತಿ ವಾಲಿಕಾರ ಇವರ ಮಗ ಪುಟ್ಟ ಕಂದಮ್ಮ ಮಧುಕುಮಾರ. ಇನ್ನು ಬೆಳೆದು ಒಳ್ಳೆಯ ವಿದ್ಯಾವಂತನನ್ನ ಮಾಡಲು ಕನಸು ಕಟ್ಟಿಕೊಂಡಿದ್ದ ಕುಟುಂಬ ಈಗ ಕಣ್ಣೀರಿನಲ್ಲಿ ಕೈ ತೊಳೆಯುವತಾಗಿದೆ. ಈ ಕಂದಮ್ಮನ ಅಕ್ಕ ಅವಳು ಸಹ ಚಿಕ್ಕ ಹುಡುಗಿ. ಅವಳೊಂದಿಗೆ ಯಾವಾಗಲೂ ಆಟವಾಡಿಕೊಂಡಿದ್ದ, ತಮ್ಮನನ್ನು ಕಳೆದುಕೊಂಡಿದ್ದು, ಊಟ ತಿಂಡಿ ಬಿಟ್ಟು ರೋಧಿಸುತ್ತಿದ್ದಾಳೆ. ಏನೂ ಅರಿಯದ ಪುಟ್ಟ ಮಗುವನ್ನ ಕೊಲೆ ಮಾಡಿದ ಭೀಮಪ್ಪನಿಗೆ ಉಗ್ರಶಿಕ್ಷೆಯಾಗಬೇಕೆಂದು ಕುಟುಂಬಸ್ಥರು ಆಗ್ರಹಿಸಿದ್ದಾರೆ. ಏನೇ ಆಗಲಿ ಭೀಮಪ್ಪ ಕ್ರೂರಿಯಾಗಿದ್ದು, ಎಷ್ಟು ಸರಿ, ಏನೇ ಮೈಮನಸ್ಸು ಜಗಳವಾಗಿದ್ದರು ಕೂತು ಮಾತನಾಡಿದ್ದರೆ ಬಗೆಹರಿಯುತ್ತಿತ್ತು. ಆದರೆ ಭೀಮಪ್ಪ ಸಿಟ್ಟಿನ ಕೈಯಲ್ಲಿ ಬುದ್ಧಿ ಕೊಟ್ಟು ಆ ಪುಟ್ಟ ಮಗುವನ್ನು ಬಲಿ ತೆಗೆದುಕೊಂಡಿದ್ದು ನೀಚ ಕೃತ್ಯ.

ಪಾಪ ಆ ಮಗ ಇವನಿಗೆ ಏನು ದ್ರೋಹ ಮಾಡಿತ್ತು? ತಾನು ಜಗಳ ಮಾಡಿದಾಗ ಅಣ್ಣನಾದ ಮಾರುತಿ ಬುದ್ಧಿವಾದ ಹೇಳಿದ್ದು ಇವನಿಗೆ ತಪ್ಪೆನಿಸಿತ್ತೆ? ಗಮನೀಯ ಸಂಗತಿ ಏನೆಂದರೆ, ಮಾರುತಿ ಹೆಂಡತಿ ಹನುಮವ್ವ ಹಾಗೂ ಈಗ ಕೊಲೆಗಾರ ಭೀಮಪ್ಪನ ಹೆಂಡತಿ ಸ್ವಂತ ಸಹೋದರಿಯರಾಗಬೇಕು. ಈಗ ಇಂತಹ ಹೇಯ ಘಟನೆ ಆಗಿದೆ, ಅಕ್ಕತಂಗಿಯರು ಮತ್ತೆ ಮುಖ ಮುಖ ನೋಡ್ತಾರಾ? ಮಾತಾಡ್ತಾರಾ??

9 ☞


ಮೆಡಿಕಲ್ ಎಕ್ಸಾನೇಷನ್‌ಗಳನ್ನು ಮಾಡಿ ಅಸಹಜ ಸಾವಿನ ಕಾರಣಗಳನ್ನು ತಿಳಿದು ಮುಂದಿನ ತನಿಖೆಗಳನ್ನು ಮಾಡಬೇಕಾಗುತ್ತದೆ.

ಹೆಣ ಸಿಕ್ಕಿತು ಎಂದು ಬೇಕಾಬಿಟ್ಟಿ ಎಲ್ಲೆಂದರಲ್ಲಿ ಹೂಳುವುದು ಏನಾದರೂ ಧರ್ಮಸ್ಥಳದಲ್ಲಿ ನಡೆದಿದ್ದರೇ ಅದಕ್ಕೆ ಅಲ್ಲಿನ ಪೊಲೀಸರು ಹಾಗೂ ಸ್ಥಳೀಯ ಆಡಳಿತ ಗ್ರಾಮ ಪಂಚಾಯ್ತಿ ಕೂಡ ಆರೋಪಿಯಾಗಿ ಕಟಕಟೆಯಲ್ಲಿ ನಿಲ್ಲಬೇಕಾಗುತ್ತದೆ. ಧರ್ಮಸ್ಥಳ ಪಂಚಾಯ್ತಿಗೆ ಒಂದು ಕಾನೂನು ಬೇರೆ ಊರಿಗೆ ಒಂದು ನಿಯಮ ಇಲ್ಲ. ಇಂತಹ ಗಂಭೀರ ವಿಚಾರ ಬೆಳಕಿಗೆ ಬಂದಿರುವುದರಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯ್ತ್ ರಾಜ್ ಇಲಾಖೆ ಉನ್ನತ ಅಧಿಕಾರಿಗಳ ತಂಡವನ್ನು ಕಳುಹಿಸಿ ಈ ಕೂಡಲೇ ಗ್ರಾಮ ಪಂಚಾಯ್ತಿಯಲ್ಲಿನ ಯುಡಿಆರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿ ತಮ್ಮ ವಶಕ್ಕ ತೆಗೆದುಕೊಂಡು ತನಿಖೆಗೆ ಒಳಪಡಿಸಬೇಕು. ಇದು ಗಂಭೀರ ಆರೋಪ ಆಗಿರುವುದರಿಂದ ಎಸ್‌ಐಟಿ ರಚನೆ ಆಗಿರುವ ಕಾರಣಕ್ಕೆ ಆರ್‌ಡಿಪಿಆರ್ ಇಲಾಖೆ ಮುಖ್ಯಸ್ಥರು ದೂರದಾರನ ಹೇಳಿಕೆಯ ಅನ್ವಯ ಅಷ್ಟು ವರ್ಷಗಳ ಯುಡಿಆರ್ ದಾಖಲೆಗಳನ್ನು ಹಾಗೂ ಆಯಾ ಸಂದರ್ಭದಲ್ಲಿ ಕೆಲಸ ಮಾಡಿದ ಅಧಿಕಾರಿಗಳನ್ನು ಇಲಾಖೆ ಆಂತರಿಕ ವಿಚಾರಣೆ ನಡೆಸಿ ವರದಿ ಸಿದ್ಧಪಡಿಸಿಕೊಳ್ಳುವುದು ಇದರಲ್ಲಿ ಲೋಪದೋಷಗಳಾಗಿದ್ದರೇ ಕೂಡಲೇ ಎಸ್‌ಐಟಿಗೆ ಮಾಹಿತಿ ನೀಡುವುದು ಆರ್‌ಡಿಪಿಆರ್



ಇಲಾಖೆಯ ಉನ್ನತ ಅಧಿಕಾರಿಗಳ ಜವಬ್ದಾರಿಯಾಗಿದೆ.

ಬೆಳ್ತಂಗಡಿ ಪೊಲೀಸರು ಆರ್‌ಟಿಐ ಕಾರ್ಯಕರ್ತರಿಗೆ ನಮ್ಮಲ್ಲಿ ಯಾವುದೇ ಯುಡಿಆರ್ ದಾಖಲೆ ಇಲ್ಲವೆಂದು ಇಲಾಖೆಯ ರೊಟೀನ್ ಪ್ರಕ್ರಿಯೆಯ ಭಾಗವಾಗಿ ಅವುಗಳನ್ನು ಸುಟ್ಟು ಹಾಕಲಾಗಿದೆ ಎಂದು ಹಿಂಬರಹ ನೀಡಿದ್ದಾರೆ. ಆದರೆ ಯಾವಾಗ ಸುಟ್ಟು ಹಾಕಿದ್ದೇವೆಂದು ಸುಟ್ಟು ಹಾಕುವ ಮುನ್ನ ಉನ್ನತ ಅಧಿಕಾರಿಯ ಅನುಮತಿ ಪಡೆಯಲಾಗಿದೆಯೇ? ಈ ಹಂತದಲ್ಲಿ ಅನುಸರಿಸುವ ಕಾನೂನು ಪ್ರಕ್ರಿಯೆ ನಡೆಸಿದ್ದಾರೆಯೇ ಹಾಗೂ ಯಾವ ಅವಧಿಯಲ್ಲಿ, ಯಾವ ಅಧಿಕಾರಿ ಇದ್ದಾಗ ದಾಖಲೆ ವಿಸರ್ಜನೆ ಮಾಡಲಾಗಿದೆ ಎಂಬ ಮಾಹಿತಿಗಳು ಹೊರಬರಬೇಕಾಗಿದೆ. ಆದರೆ ಪೊಲೀಸ್‌ಠಾಣೆಯಲ್ಲಿ ದಾಖಲಾದ ಎಲ್ಲಾ ಎಫ್‌ಐಆರ್‌ಗಳು ಹಾಗೂ ಸಂಬಂಧಪಟ್ಟ ಒಂದು ಪ್ರತಿ ನ್ಯಾಯಾಲಯದಲ್ಲಿ ಇದ್ದು ಅದನ್ನು ನಾಶ ಮಾಡುವುದಿಲ್ಲ. ಎಸ್‌ಐಟಿ ಪೊಲೀಸರಿಂದ ಸಿಗದೆ ಇರುವ ಮಾಹಿತಿ



ದಕ್ಷ ತನಿಖಾಧಿಕಾರಿ ಎಂ.ಎನ್. ಅನುಚೇತ್

ಯನ್ನು ನ್ಯಾಯಾಲಯದಿಂದ ಪಡೆದುಕೊಳ್ಳುತ್ತದೆ. ಖಾಸಗಿ ವ್ಯಕ್ತಿಗಳು ಕೂಡ ಅರ್ಜಿ ಸಲ್ಲಿಸಿ ದಾಖಲೆ ಪಡೆದುಕೊಳ್ಳಬಹುದಾಗಿದೆ.

ಕಳೆದ ಜುಲೈ 28ನೇ ತಾರೀಖಿನಿಂದ ಎಸ್‌ಐಟಿ ತಂಡ ದೂರುದಾರ ಗುರುತಿಸಿದ ಜಾಗಗಳಲ್ಲಿ ಶವಗಳ ಅವಶೇಷಗಳನ್ನು ಹೊರಗೆತೆಯಲು ಉತ್ಖನನ ಕಾರ್ಯ ನಡೆಸುತ್ತಿದೆ. ಈತ ಗುರುತಿಸಿದ ಕೆಲವು ಕಡೆ ಮಾನವ ಅವಶೇಷಗಳು ಪತ್ತೆಯಾದರೆ ಕೆಲವು ಕಡೆ ಪತ್ತೆಯಾಗಿಲ್ಲ. ದೂರುದಾರ ಕಳೆದ ಹತ್ತು ವರ್ಷಗಳ ಹಿಂದೆಯೇ ಧರ್ಮಸ್ಥಳದಿಂದ ಹೊರನಡೆದಿದ್ದು 1994 ರಿಂದ 2024ರವರೆಗೂ ಹೆಣಗಳನ್ನು ಅರಣ್ಯ ಪ್ರದೇಶಗಳಲ್ಲಿ ಹೂತಿದ್ದೇನೆಂದು ಹೇಳಿಕೆ ನೀಡಿದ್ದು ನೆನಪು ಮಾಡಿಕೊಂಡು ಗುರುತು ಮಾಡುವುದು ಕಷ್ಟದ ಕೆಲಸವಾಗಿದೆ. ಭೌಗೋಳಿಕವಾಗಿ ಅರಣ್ಯ ಪ್ರದೇಶಗಳಲ್ಲಿ ನಾನಾ ರೀತಿಯ ಬದಲಾವಣೆಗಳು ಆಗಿರುತ್ತವೆ. ಮಣ್ಣಿನ ಸವಕಳಿ, ಈತ ಹೆಣ ಹೂತ ಜಾಗದಲ್ಲೇ ಗಿಡ ಬೆಳೆದು ಅದು ಹೆಮ್ಮರವಾಗಿ ಮರದ ಕೆಳಗಡೆ ಅವಶೇಷ ಸಿಲುಕಿರುಬಹುದು ಅಥವಾ ಅದು ಸಂಪೂರ್ಣವಾಗಿ ಮಣ್ಣಲ್ಲಿ ಕಳಿತು ಹೋಗಿರುವ ಸಾಧ್ಯತೆಗಳು ಇರುತ್ತವೆ. ಹೆಣ ಹೂಳಿದ ಜಾಗದಲ್ಲಿ ಒಂದು ಗಿಡ ನೆಟ್ಟರೆ ಅದು ಹುಲುಸಾಗಿ ಬೆಳೆದು ಫಲ ಕೊಡುತ್ತದೆ ಎಂಬ ಮಾತು ಹಿಂದಿನಿಂದಲೂ ಇದೆ. ಸಮಾಧಿ ಕಟ್ಟದೆ ಇರುವವರು ಗಿಡ ನೆಡುವ ಸಂಪ್ರದಾಯ ಇಟ್ಟುಕೊಂಡಿದ್ದಾರೆ. ಈ ಕಾರಣದಿಂದ ವೈಜ್ಞಾನಿಕವಾಗಿ ಉತ್ಖನನ ಮಾಡಬೇಕೆಂಬುದು ಅನೇಕರ ಒತ್ತಾಯ ಕೂಡ ಆಗಿದೆ.





ದೂರುದಾರನೇ ಮೊದಲು ಗುರುತಿಸಲಿ, ಅವನು ಗುರತಿಸಿದ ಜಾಗದಲ್ಲೇ ಸಹಜ ಪ್ರಕ್ರಿಯೆ ಮೂಲಕ ಅವಶೇಷಗಳನ್ನು ಹೊರತೆಗೆದು ಇನ್ನು ಹೆಚ್ಚಿನ ತನಿಖೆಗಾಗಿ ರೆಡಾರ್ ವ್ಯವಸ್ಥೆಯನ್ನು ಬಳಸಿಕೊಳ್ಳುವ ಯೋಚನೆ ಎಸ್‌ಐಟಿ ಮುಂದೆ ಇರಬಹುದು. ಈಗ ಒಂದು ರೀತಿಯಲ್ಲಿ ಧರ್ಮಸ್ಥಳ ಸೀಲ್ಡ್ ಏರಿಯಾ ಇದ್ದ ಹಾಗೆ. ಅಲ್ಲಿ ಅನುಮಾನಸ್ಪದವಾಗಿ ಕಾಡಿನೊಳಗೆ ಹೋಗುವವರು ಕೂಡ ವಿಚಾರಣೆಗೆ ಒಳಗಾಗಬೇಕಾಗುತ್ತದೆ. ಹಾರೆ, ಪಿಕಾಸಿ ಹಿಡಿದು ಸಿಕ್ಕಿಬಿದ್ದರೇ ಅವನು ಜೈಲಿಗೆ ಹೋಗಲೇಬೇಕಾಗುತ್ತದೆ. ಈಗ ಅವಶೇಷಗಳು ಪತ್ತೆಯಾಗಿರುವ ಸ್ಥಳಗಳಿಗೆ ಜನರು ಯಾರೂ ಹೋಗುವುದಿಲ್ಲ ಎಂದು ಸ್ಥಳೀಯರೇ ಹೇಳುತ್ತಿದ್ದಾರೆ. ಆಗಿರುವಾಗ ಅಲ್ಲಿ ಯಾರೂ ದಫನ್ ಮಾಡಲು ಹೋಗುತ್ತಾರೆ. ಇವೆಲ್ಲಾ ಅಕ್ರಮ ಎಂಬುದಕ್ಕೆ ನಿದರ್ಶನ. ಧರ್ಮಸ್ಥಳದಲ್ಲಿ ನ್ಯಾಯಕ್ಕಾಗಿ ಹೋರಾಟ ಮಾಡುತ್ತಿರುವುದು ಹೋರಾಟಗಾರರು ಸಾಮಾನ್ಯ ಜನರೇ ಹೊರತು ಯಾವುದೇ ರಾಜಕೀಯ ಪಕ್ಷಗಳು ಇಲ್ಲ.

ವಿರೇಂದ್ರಹೆಗ್ಗಡೆಯವರಿಗೆ ನಿಜವಾಗಿಯೂ ನೈತಿಕತೆ ಇದ್ದರೇ ಅವರು ಮೊದಲು ಅವರು ತಮ್ಮ ರಾಜ್ಯಸಭಾ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಪ್ರೊಫೆಷನಲ್ ರಾಜಕಾರಣಿ ಆಗಿದ್ದರೇ ಕೊಡುವುದು ಬೇಡ. ಧರ್ಮಾಧಿಕಾರಿ ಎಂದು ತಮ್ಮ ಹೆಸರಿನ ಪಕ್ಕದಲ್ಲಿ ಬಿರುದು ಇಟ್ಟುಕೊಂಡಿರುವುದರಿಂದ ಧರ್ಮಸ್ಥಳ ಆರೋಪ ಮುಕ್ತವಾಗುವವರೆಗೂ ನನಗೆ ರಾಜ್ಯಸಭಾಸ್ಥಾನ ಬೇಡವೆಂದು ಈ ವೇಳೆಗಾಗಲೇ ರಾಜೀನಾಮೆ ನೀಡಬೇಕಾಗಿತ್ತು. ಆದರೆ ಅವರು ಎಲ್ಲಾ ರಾಜಕಾರಣಿಗಳಂತೆ ವರ್ತನೆ ಮಾಡುತ್ತಿರುವುದು ಅವರ ಧರ್ಮಾಧಿಕಾರಿ ಹುದ್ದೆಗೆ ಗೌರವ ಅಲ್ಲ. ಇಷ್ಟು ವರ್ಷಗಳಿಂದ ರಾಜಕೀಯ ಹುದ್ದೆಗಳನ್ನು ಪಡೆಯದೆ ವೀರೇಂದ್ರ ಹೆಗ್ಗಡೆ ದಿಢೀರನೇ ಬಿಜೆಪಿ ಜೊತೆ ಪರೋಕ್ಷವಾಗಿ ಗುರುತಿಸಿಕೊಂಡು ರಾಜ್ಯಸಭಾ ಸ್ಥಾನ ಪಡೆದುಕೊಂಡಿದ್ದೇ ವಿಚಿತ್ರ ಬೆಳವಣಿಗೆಯಾಗಿದೆ. ರಾಜ್ಯಸಭಾ ಸದಸ್ಯರಾಗಿ ರಾಜ್ಯಸಭೆಯಲ್ಲಿ ಪದ್ಮಲತಾ, ಆನೇಮಾವುತ, ಸೌಜನ್ಯ ಹೀಗೆ ಅನೇಕ ಸ್ಥಳೀಯ ಹೆಣ್ಣುಮಕ್ಕಳಿಗೆ ನ್ಯಾಯ ಸಿಕ್ಕಿಲ್ಲ ಇದು ನಮ್ಮ ಕ್ಷೇತ್ರಕ್ಕೆ ಆದ ಕಳಂಕ ಎಂದು ತಮ್ಮ ಭಾಷಣದ ಮೂಲಕ ಪ್ರಸ್ತಾಪ ಮಾಡಿ ಅದನ್ನು ಸಂಸತ್ತಿನ ದಾಖಲೆಗೆ ಸೇರಿಸುವ ಉದಾರತೆಯನ್ನು ಹೆಗ್ಗಡೆಯವರು ಮಾಡಲಿಲ್ಲ. ಇವರೆಲ್ಲಾ ಅವರ ಪ್ರದೇಶದ ಜನರಲ್ಲವೇ? ಖಾವಂದರಿಗೆ ಈ ಭಾವನೆ ಏಕೆ ಬರಲಿಲ್ಲವೋ ಗೊತ್ತಿಲ್ಲ. ಈ ಎಲ್ಲಾ ಪ್ರಕರಣಗಳಲ್ಲಿ ನ್ಯಾಯ ಸಿಗದೆ ಇರುವುದರಿಂದ ಸುಪ್ರೀಂಕೋರ್ಟ್ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ಮಾಡಬೇಕೆಂದು ಅವರು ರಾಜ್ಯಸಭೆಯಲ್ಲಿ ಒತ್ತಾಯ ಮಾಡಲು ದೊಡ್ಡ ವೇದಿಕೆ ಮತ್ತು ಅವಕಾಶ ಇತ್ತು. ಆದರೆ ಅವರು ಬಳಸಿಕೊಳ್ಳದೆ, ಹೋದ ಪುಟ್ಟ ಬಂದೆ ಪುಟ್ಟ ಎಂದು ಹೆಸರಿಗೆ ರಾಜ್ಯಸಭಾ ಸದಸ್ಯರಾಗಿ ಪ್ರತಿನಿಧಿಸಿದ್ದಾರೆ. ವೀರೇಂದ್ರ ಹೆಗ್ಗಡೆ ಎಂದರೆ ಧರ್ಮಸ್ಥಳದ ಜನರು ಖಾವಂದರು ಬಂದರು ಎಂದು ತಲೆಬಗ್ಗಿಸಿ ನಡೆಯುತ್ತಾರೆ. ತಮ್ಮದೇ ಜನರ ಮಕ್ಕಳಿಗೆ ಅನ್ಯಾಯವಾದಾಗ ರಾಜ್ಯಸಭಾ ಹುದ್ದೆಯಲ್ಲಿದ್ದುಕೊಂಡು ಅವರ ಪರವಾಗಿ ಸಂಸತ್ತಿನಲ್ಲಿ ಧ್ವನಿ ಎತ್ತದೆ ಇರುವುದು ನಿಜವಾದ ದುರಂತ.





ಈಗಲೂ ಸಂಸತ್ ಅಧಿವೇಶನ ನಡೆಯುತ್ತಿದ್ದು ಕೂಡಲೇ ವೀರೇಂದ್ರ ಹೆಗ್ಗಡೆಯವರು ರಾಜ್ಯಸಭೆ ಚರ್ಚೆಯಲ್ಲಿ ಭಾಗವಹಿಸಿ ನ್ಯಾಯ ಸಿಗದೆ ಇರುವ ಎಲ್ಲಾ ಹೆಣ್ಣುಮಕ್ಕಳ ಹೆಸರನ್ನು ಪ್ರಸ್ತಾಪ ಮಾಡಿ ನ್ಯಾಯ ಸಿಗದೆ ಇರುವ ಬಗ್ಗೆ ಖಂಡನೆ ವ್ಯಕ್ತಪಡಿಸಿ ಅದನ್ನು ಸಂಸತ್ ಕಡತಕ್ಕೆ ಸೇರಿಸುವ ಕೆಲಸ ಮೊದಲು ಮಾಡಲಿ. ಸಾಧ್ಯವಾಗದೆ ಇದ್ದರೇ ಕೂಡಲೇ ರಾಜ್ಯಸಭಾ ಸ್ಥಾನಕ್ಕೆ ರಾಜೀನಾಮೆ ನೀಡಿ ತಮ್ಮ ದೇವ ಸ್ಥಾನದ ಕೆಲಸ ಕಾರ್ಯಗಳಲ್ಲಿ ತೊಡಗಿ ದೈವಾರಾಧನೆ ಮಾಡುವುದು ಲೇಸು! ☯

# ಕತ್ತು ಸೀಳಿ ಕೊಂದ ಪಾಪಿ ಭೀಮಪ್ಪ!

7 ☞

ಸಿಟ್ಟಿನಿಂದ ಆ ಪುಟ್ಟ ಕಂದಮ್ಮ ನನ್ನು ಕೆಳಗೆ ಇಳಿಸಿ ಹರಿತವಾದ ಚೂರಿಯಿದ ಕುತ್ತಿಗೆಗೆ ಇರಿದು ಕೊಲೆ ಮಾಡಿ ಅಲ್ಲಿಂದ ಪರಾರಿಯಾಗಿದ್ದಾನೆ!

ಈ ಭೀಕರ ಘಟನೆಯ ಸುದ್ದಿ ಗ್ರಾಮದ ತುಂಬೆಲ್ಲಾ ಹರಡುತ್ತಿದ್ದಂತೆ ಗ್ರಾಮಸ್ಥರು ತಂಡೋಪ ತಂಡವಾಗಿ ಸೇರಿದ್ದು, ವಿಷಯ ತಿಳಿದ ಮಾರುತಿ ಆತನ ಪತ್ನಿ ಹನುಮವ್ವ ಹಾಗೂ ಸಂಬಂಧಿಕರು ಹೊಲದಿಂದ ಓಡಿ ಬಂದು ನೋಡಲಾಗಿ ಆ ಮಗುವಿನ ಪ್ರಾಣಪಕ್ಷಿ ಹಾರಿಹೋಗಿತ್ತು. ಕುಟುಂಬಸ್ಥರ ರೋಧನ ಮುಗಿಲು ಮುಟ್ಟಿದ್ದು ನಂತರ ಮಗುವಿನ ತಂದೆ ಮಾರುತಿ ವಾಲಿಕಾರ ನೇರವಾಗಿ ಅಮೀನಗಡ ಪೊಲೀಸ್ ಠಾಣೆಗೆ ತೆರಳಿ ಕರ್ತವ್ಯದಲ್ಲಿ ಅಮೀನಗಡ ಪಿಎಸ್‌ಐ ಜ್ಯೋತಿ ವಾಲಿಕಾರ ರವರಿಗೆ ನಡೆದ ಘಟನೆಗೆ ಬಗ್ಗೆ ವಿವರಿಸಿ ಲಿಖಿತ ದೂರು ನೀಡಿದರು. ದೂರು ದಾಖಲಿಸಿಕೊಂಡ ಪಿಎಸ್‌ಐರವರು ಠಾಣಾ ಕ್ರೈಂ ನಂ. 94/2025 ಬಿಎನ್‌ಎಸ್ 2023 ವಿ/ಎಸ್ 103(1) ನೆದರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತಮ್ಮ ಠಾಣಾ ಸಿಬ್ಬಂದಿಯೊಂದಿಗೆ ಘಟನಾ ಸ್ಥಳಕ್ಕೆ ಬಂದು ಆ ಪುಟ್ಟ ಕಂದಮ್ಮನ ಶವ ಮತ್ತು ಜಾಗವನ್ನು ವೀಕ್ಷಿಸಿ ನಂತರ ತಮ್ಮ ಹಿರಿಯ ಅಧಿಕಾರಿಗಳಾದ ಹುನಗುಂದ ಸಿಪಿಐ ಸುನೀಲ ಸವದಿ, ಬಾಗಲಕೋಟ ಎಸ್ಪಿ ಸಿದ್ದಾರ್ಥ ಗೊಯಲ್ ರವರಿಗೆ ಸುದ್ದಿ ರವಾನಿಸಿದರು. ಸುದ್ದಿ ತಿಳಿದ ತಕ್ಷಣ ಹಿರಿಯ ಅಧಿಕಾರಿಗಳು ಘಟನಾ ಸ್ಥಳಕ್ಕೆ ಬಂದು ಪಂಚನಾಮೆ ನಡೆಸಿ ಆರೋಪಿಯನ್ನು ಶೀಘ್ರವೇ ಬಂಧಿಸುವಂತೆ ಮಾರ್ಗದರ್ಶನ ನೀಡಿದರು. ಘಟನೆ ನಡೆದ ಕೆಲವೇ ಗಂಟೆಗಳಲ್ಲಿ ಪ್ರಕರಣದ ಸದರಿ ಆರೋಪಿತನಾದ ಭೀಮಪ್ಪ ಹನಮಪ್ಪ ವಾಲಿಕಾರ (32) ಈತನನ್ನು ವಶಕ್ಕೆ ಪಡೆದು ಠಾಣೆಗೆ ತಂದು ವಿಚಾರಿಸಲಾಗಿ ಆರೋಪಿ ತಾನು ಮಾಡಿದ ಕೃತ್ಯವನ್ನು ಒಪ್ಪಿಕೊಂಡಿದ್ದು ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ ☯



ತಂದೆ ಮಾರುತಿ ವಾಲಿಕಾರನೊಂದಿಗೆ ಮೃತ ಮಧುಕುಮಾರ

# ಶಿರಸಿ : ಕ್ಷುಲ್ಲಕ ಕಾರಣಕ್ಕೆ ಅತ್ತೆಯನ್ನೇ ಕೊಂದ ಅಳಿಯ!



ಕೊಲೆಯಾದ ಗೀತಾ

ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ದೊಡ್ನಳ್ಳಿಯ ಒಕ್ಕಲಕೊಪ್ಪದಲ್ಲಿ ತೀರಾ ಕ್ಷುಲ್ಲಕ ಕಾರಣಕ್ಕೆ ಹೆಣ್ಣು ಕೊಟ್ಟ ಅತ್ತೆಯನ್ನೇ ಅಳಿಯನೊಬ್ಬ ಮುಗಿಸಿದ ಘಟನೆ ಜರುಗಿದೆ.

**ಉತ್ತರ ಕನ್ನಡ**
✍ ಸಂತೋಷಕುಮಾರ

ಆಕೆಯ ಹೆಸರು ಗೀತಾ ಬಸವರಾಜ ನಾಯ್ಕ (36) ಮಾಡುವುದು ಕೂಲಿ ಕೆಲಸ. ವಸತಿ ಶಿರಸಿ ದೊಡ್ನಳ್ಳಿಯ ಒಕ್ಕಲಕೊಪ್ಪದಲ್ಲಿ, ತನ್ನ ಗಂಡ ಬಸವರಾಜ, ಮಕ್ಕಳಾದ ಭರತ, ಶಾಶ್ವತಿ ಹಾಗೂ ತನ್ನ ತಾಯಿ ಕಮಲಾ ಜೊತೆ ಸೇರಿಕೊಂಡು ಕಳೆದ ಐದು ವರ್ಷಗಳ ಹಿಂದೆ ಒಕ್ಕಲಕೊಪ್ಪದಲ್ಲಿ ಜಾಗ ಖರೀದಿಸಿ ಕಳೆದ ಎರಡು ವರ್ಷಗಳ ಹಿಂದೆ ಮನೆ ಕಟ್ಟಿಕೊಂಡು ವಾಸವಾಗಿದ್ದರು. ಗಂಡ, ಹೆಂಡತಿ ಇಬ್ಬರೂ ಕೂಲಿ ಕೆಲಸಕ್ಕೆ ಹೋಗುತ್ತಿದ್ದರೆ, ಮಗ ಭರತ ಶಿರಸಿ ಚಿಪಗಿ ಬಳಿ ಜೆಸಿಬಿ ಗ್ಯಾರೇಜ್‌ನಲ್ಲಿ ಕೆಲಸ ಮಾಡುತ್ತಿದ್ದು, ಮಗಳು ಶಾಶ್ವತಿ ಇಸಳೂರು ಪ್ರೌಢಶಾಲೆಯಲ್ಲಿ ಎಂಟನೇ ತರಗತಿಯಲ್ಲಿ ಓದುತ್ತಿದ್ದಾಳೆ. ಅಷ್ಟೇ ಅಲ್ಲದೇ ಗೀತಾಳ ತಾಯಿ ಎಪ್ಪತ್ತು ವರ್ಷದವರಾಗಿದ್ದರೂ ಕೂಲಿ ಕೆಲಸಕ್ಕೆ ಹೋಗುತ್ತಿದ್ದರು.

ಈ ಅತ್ತೆ ಮತ್ತು ಅಳಿಯನ ಮಧ್ಯೆ ಸಣ್ಣಪುಟ್ಟ ವಿಷಯಕ್ಕೆ ಆಗಾಗ ಜಗಳವಾಗುತ್ತಾ ಇತ್ತು. ಅಷ್ಟೇ ಅಲ್ಲ ಬಸವರಾಜ ತನ್ನ ಹೆಂಡತಿ ಗೀತಾ ಜೊತೆ ಜಗಳ ಮಾಡಿ ಗೀತಾಗೆ ಹೊಡೆಯೋಕೆ ಹೋದರೆ, ಗೀತಾಳ ತಾಯಿ ಕಮಲಾ ಮಧ್ಯೆ ಹೋಗಿ ತಡೆಯುತ್ತಿದ್ದರು.

ಅಷ್ಟೇ ಅಲ್ಲ, ಕಮಲಾ ಕೂಡಾ ತನ್ನ ಅಳಿಯ ಬಸವರಾಜನಿಗೆ ಏರುಧ್ವನಿಯಲ್ಲಿ ಮಾತಾಡುತ್ತಿದ್ದರು. ಆಗ ಕೋಪಗೊಂಡ ಬಸವರಾಜ ಕಮಲಾಗೆ ಹೊಡೆಯಲು ಹೋದಾಗ ಗೀತಾ ಮತ್ತು ಭರತ ಜಗಳ ಬಿಡಿಸಿದ್ದೂ ಇದೆ.

ಗೀತಾ ಮತ್ತು ಮನೆಯವರೆಲ್ಲರೂ ಬೆಳಿಗ್ಗೆ ಒಂಬತ್ತು ಗಂಟೆಗೆ ಮನೆಯಿಂದ ಹೊರಗೆ ಕೆಲಸಕ್ಕೆ ಅಂತ ಹೋದರೆ ಮತ್ತೆ ವಾಪಸ್ ಮನೆಗೆ ಬರೋದು ಸಾಯಂಕಾಲ ಆರು ಗಂಟೆ ಹೊತ್ತಿಗೆ.



ಎಸ್ಪಿ ದೀಪನ್



ಡಿ|| ಎಸ್ಪಿ ಕೃಷ್ಣಮೂರ್ತಿ



ಪಿಐ ಮಂಜುನಾಥ ಗೌಡ

ಆವತ್ತು 10/07/2025 ಗುರುವಾರ, ಗೀತಾ ಪ್ರತಿನಿತ್ಯದಂತೆ ಬೆಳಿಗ್ಗೆ ಚಹಾ, ತಿಂಡಿ ಮಾಡಿ ಮಗಳು ಶಾಲೆಗೆ, ಮಗ ಗ್ಯಾರೇಜ್‌ಗೆ, ಹಾಗೇ ತಾಯಿ ಕಮಲಾ ಚಿಪಗಿಯ ಬಾಬುರಾಯರವರ ತೋಟದ ಕೆಲಸಕ್ಕೆ ಹೋಗಿದ್ದಾರೆ. ನಂತರ ಗೀತಾ ತನ್ನ ಗಂಡ ಬಸವರಾಜ ಜೊತೆ ಮೋಟಾರ್ ಸೈಕಲ್‌ನಲ್ಲಿ ಚಿಪಗಿ ಹತ್ತಿರ ಕೂಲಿ ಕೆಲಸಕ್ಕೆ ಹೋಗಿದ್ದು, ಬಸವರಾಜ ಕೂಡಾ ತಾನು ಕೂಲಿ ಕೆಲಸಕ್ಕೆ ಹೋಗಿ ಬರುತ್ತೇನೆ ಅಂತ ಹೋಗಿದ್ದಾನೆ.

ಮಧ್ಯಾಹ್ನ ಎರಡು ಗಂಟೆ ಊಟದ ಹೊತ್ತಿಗೆ ಗೀತಾ ತನ್ನ ಗಂಡನಿಗೆ ಫೋನ್ ಮಾಡಿ ಎಲ್ಲಿದ್ದೀರಿ ಅಂತಾ ಕೇಳಿದಾಗ, ಬಸವರಾಜ ನಾನು ಮನೆಯ ಹೊರಗಡೆ ಕುಳಿತಿದ್ದೇನೆ, ನೀನು ಬೇಗ ಕೆಲಸ ಮುಗಿಸಿಕೊಂಡು ಬೀಗ ತೆಗೆದುಕೊಂಡು ಬಾ ಎಂದಿದ್ದಾನೆ. ಹಾಗೇ ಸಂಜೆ ಕೆಲಸ ಮುಗಿದ ನಂತರ ಗೀತಾ ತನ್ನ ಮಗಳು ಶಾಶ್ವತಿಯನ್ನ ಕರೆದುಕೊಂಡು ಸಂಜೆ 6-15ರ ಹೊತ್ತಿಗೆ ಮನೆ ಕಡೆ ಬಂದಿದ್ದಾಳೆ. ಆಗ ಗೀತಾಳ ಗಂಡ ಗೀತಾಳ ತಾಯಿಯ ಚಪ್ಪಲಿ ಹಿಡಿದುಕೊಂಡು ಮನೆ ಹಿತ್ತಲಿನ ಕಡೆಯಿಂದ ಬರುತ್ತಾ ಇದ್ದಾನೆ. ಅದನ್ನು ಕಂಡ ಗೀತಾ ದಂಗಾಗಿ ಅಮ್ಮ ಎಲ್ಲಿ ಅಂತ ಗಂಡ ಬಸವರಾಜನನ್ನು ಕೇಳಿದಾಗ, ಆತ ನಿನ್ನಮ್ಮ ತನ್ನ ಇನ್ನೊಬ್ಬ ಮಗಳ ಮನೆಗೆ ಹೋಗಿರಬಹುದು ಅಂತಾ ಹೇಳಿದ್ದಾನೆ. ಆಗ ಶಾಶ್ವತಿ ಅಪ್ಪಾ ನಿನ್ ಕೈಯಲ್ಲಿ ಅಜ್ಜಿ ಚಪ್ಲಿ ಯಾಕೆ ಅಂತಾ ಕೇಳಿದ್ದೇ ತಡ, ಬಸವರಾಜ ಕೂಡಲೇ ತನ್ನ ಮೋಟಾರ್‌ಸೈಕಲ್ ಏರಿ ಹೊರಟೇ ಹೋಗಿದ್ದಾನೆ. ಗಾಬರಿಗೊಂಡಿದ್ದ ಗೀತಾ ತನ್ನ ಮಗಳ ಜೊತೆ ಮನೆ ಬೀಗ ತೆಗೆದು ಒಳಗೆ ಹೋಗಿದ್ದಾರೆ.

ಮಗಳು ಶಾಶ್ವತಿ ಕೈಕಾಲು ತೊಳೆಯುವುದಕ್ಕೆ ಅಂತ ಮನೆ ಬಚ್ಚಲ ಬಳಿ ಹೋಗುತ್ತಿದ್ದಾಗ ಅಲ್ಲಲ್ಲಿ ಬಿದ್ದಿದ್ದ ರಕ್ತದ ಕಲೆ ಕಂಡು ಭಯಗೊಂಡು ಅವ್ವನಿಗೆ ಹೇಳಿದ್ದಾಳೆ. ಗೀತಾ ಆ ಕಲೆಯನ್ನೇ ಹಿಂಬಾಲಿಸಿಕೊಂಡು ಹಿತ್ತಲ ಬೇಲಿವರೆಗೆ ಹೋದರೆ, ಹಿತ್ತಲಿನ ಗಿಡಗಂಟಿಗಳ ಮಧ್ಯದಲ್ಲಿ ಗೀತಾಳ ತಾಯಿ ಕಮಲಾ ಬಿದ್ದಿದ್ದು ಎಡಗಣ್ಣಿನ ಹತ್ತಿರ ಮತ್ತು ಎಡ ಗದ್ದದ ಹತ್ತಿರ ಹರಿತವಾದ ಆಯುಧದಿಂದ ಗಾಯವಾಗಿ ರಕ್ತ ಸೋರುತ್ತಿತ್ತು! ತಕ್ಷಣ ಗೀತಾ ತನ್ನ ತಾಯಿಯನ್ನ ಎಬ್ಬಿಸಲು ಪ್ರಯತ್ನಿಸುತ್ತಿದ್ದರೆ ಆಕೆ ಏಳಲಿಲ್ಲ! ಗೀತಾ ತನ್ನ ತಾಯಿಯ ಮೂಗಿನ ಹತ್ತಿರ ಕೈ ಹಚ್ಚಿ ನೋಡಿದಾಗ ವೃದ್ಧೆ ಕಮಲಾರ ಉಸಿರಾಟ ನಿಂತಿತ್ತು! ಗೀತಾ ತಕ್ಷಣ ತನ್ನ ಮಗನಿಗೆ ಫೋನ್ ಮಾಡಿ ಕರೆಸಿ, ಆಂಬುಲೆನ್ಸ್ ತರಿಸಿ ಶಿರಸಿ ಗ್ರಾಮೀಣ ಠಾಣೆಯಲ್ಲಿ ದೂರು ದಾಖಲಿಸಿದ್ದಾಳೆ.



ಆರೋಪಿ ಬಸವರಾಜ

ತಕ್ಷಣ ಉತ್ತರ ಕನ್ನಡ ಎಸ್ಪಿ ದೀಪನ್ ಎಂ.ಎನ್.ರವರ ಮಾರ್ಗದರ್ಶನದಲ್ಲಿ ಶಿರಸಿ ಡಿವೈಎಸ್ಪಿ ಗೀತಾ ಪಾಟೀಲ್ ನೇತೃತ್ವದಲ್ಲಿ ಶಿರಸಿ ಗ್ರಾಮೀಣ ಠಾಣೆಯ ಆಗಿನ ಪಿಐ ಮಂಜುನಾಥ ಗೌಡ ಹಾಗೂ ತಂಡ ಕ್ಷಿಪ್ರ ಕಾರ್ಯಾಚರಣೆ ನಡೆಸಿ, ತಪ್ಪಿಸಿಕೊಂಡು ಹೋಗುತ್ತಿದ್ದ ಆರೋಪಿ ಬಸವರಾಜನನ್ನು ಯಲ್ಲಾಪುರ ರೋಡ್‌ನಲ್ಲಿ ಬಂಧಿಸಿ ನ್ಯಾಯಾಂಗದ ವಶಕ್ಕೆ ಒಪ್ಪಿಸಿದ್ದಾರೆ. ಆರೋಪಿ ಬಸವರಾಜ ಕ್ಷುಲ್ಲಕ ಕಾರಣಕ್ಕೆ ಜಗಳ ತೆಗೆದು ಕಮಲಾರನ್ನು ಕಲ್ಲಿನಿಂದ ಮತ್ತು ಚೂಪಾದ ಕಟ್ಟಿಗೆಯಿಂದ ಚುಚ್ಚಿ ಹೊಡೆದು ಕೊಲೆ ಮಾಡಿದ್ದಾನೆಂದು ಹೇಳಲಾಗಿದೆ! ತನಿಖೆ ಮುಂದುವರೆದಿದೆ. ☯



ಶವ ಎಸೆದ ಸ್ಥಳ ತೋರಿಸುತ್ತಿರುವ ಆರೋಪಿ

# ಜಮಖಂಡಿ ನಗರದಲ್ಲಿ ಮಾವಾ ಧಂದೆ! ಅಡ್ಡೆಗಳ ಮೇಲೆ ಅಧಿಕಾರಿಗಳ ದಾಳಿ!!

ಇಂದಿನ ಯುವಪೀಳಿಗೆ ಮಾದಕ ವಸ್ತುಗಳಿಗೆ ಬಲಿಯಾಗುತ್ತಿರುವ ಪ್ರಸಂಗಗಳು ಕಂಡು ಬರುತ್ತಿದ್ದು ಗಾಂಜಾ, ಕೊಕ್, ಡ್ರಗ್ಸ್, ತಂಬಾಕು ಮಿಶ್ರಿತ ಮಾವಾ ಅಂತಹ ಮಾದಕ ವಸ್ತುಗಳು ಮನುಷ್ಯ ಅವುಗಳನ್ನು ಸೇವಿಸುವುದರಿಂದ ಮಾರಕವಾಗಿವೆ. ಇವು ಮಾನವ ಶರೀರದ ಮೇಲೆ ತುಂಬಾ ಅಪಾಯಕಾರಿಯಾಗಿ ಪರಿಣಮಿಸುತ್ತಿದೆ. ಸಣ್ಣಪುಟ್ಟ ಅಂಗಡಿಗಳು ಪಾನ್ ಶಾಪ್‌ಗಳಲ್ಲಿ ಮಾವಾ ದಂಧೆ ಬಲು ಜೋರಾಗಿ ಸಾಗಿದೆ. ಅದರಲ್ಲೂ ಯುವಕರು ಕಾಲೇಜು ವಿದ್ಯಾರ್ಥಿಗಳು ಈ ಚಟಕ್ಕೆ ಅಂಟಿಕೊಂಡಿದು ವಿಷಾದಕರ ಸಂಗತಿಯ ಕೆಲವೊಂದು ವ್ಯಾಪಾರಿಗಳು ದುಡ್ಡು ಮಾಡುವ ಸಲುವಾಗಿ ಮಾವಾ ಅಡ್ಡೆಗಳನ್ನು ಪ್ರಾರಂಭಿಸಿ ಸಲಿಸಾಗಿ ದುಡ್ಡು ಮಾಡುತ್ತಿದ್ದಾರೆ. ಇತ್ತೀಚೆಗೆ ಬಾಗಲಕೋಟೆ ಜಿಲ್ಲೆ ಜಮಖಂಡಿ ನಗರದ ವಿವಿಧ ಮಾವಾ ಅಡ್ಡೆಗಳ ಮೇಲೆ ದಾಳಿ ನಡೆಸಿ ಅಧಿಕಾರಿಗಳ ತಂಡ ತಂಬಾಕು ಉತ್ಪನ್ನ ಯಂತ್ರಗಳನ್ನು ಕಚ್ಚಾ ವಸ್ತುಗಳನ್ನು ವಶಪಡಿಸಿಕೊಂಡು ಕೆಲವರ ಮೇಲೆ ಎಫ್ ಐಆರ್ ದಾಖಲಿಸಿ ತನಿಖೆ ಮಾಡುತ್ತಿದ್ದಾರೆ.



ಎಸ್ಪಿ ಸಿದ್ಧಾರ್ಥ ಗೊಯಲ್



ಸಿಪಿಐ ಮಲ್ಲಪ್ಪ ಮಡ್ಡಿ

ಬಾಗಲಕೋಟೆ ಜಿಲ್ಲೆಯ ಜಮಖಂಡಿ ನಗರದಲ್ಲಿ ಜುಲೈ 21ರಂದು ತಾಲ್ಲೂಕು ಅಬಕಾರಿ ಅಧಿಕಾರಿಗಳು, ಆರೋಗ್ಯ ಅಧಿಕಾರಿಗಳು, ತಾಲ್ಲೂಕು ಅಧಿಕಾರಿಗಳು ಖಚಿತ ಮಾಹಿತಿ ಮೇರೆಗೆ ವಿವಿಧ ಮಾವಾ ಅಡ್ಡೆಗಳ ಮೇಲೆ ದಾಳಿ ನಡೆಸಿದ ಅಧಿಕಾರಿಗಳ ತಂಡ ಜಮಖಂಡಿ ಹಾಗೂ ಹುನ್ನೂರ ಗ್ರಾಮದಲ್ಲಿ ಮಾವಾ ತಯಾರಿಸುವ ಯಂತ್ರ ಕಚ್ಚಾ ವಸ್ತುಗಳನ್ನು ಜಪ್ತಿ ಮಾಡಿ ಹಲವರ ಮೇಲೆ ಎಫ್‌ಐಆರ್ ದಾಖಲಿಸಿದ್ದಾರೆ. ದಾಳಿ ನಡೆಸಿದ ನಂತರ ಜಮಖಂಡಿ ತಹಶೀಲ್ದಾರ್ ಅನಿಲ್ ಬಡಿಗೇರ ಮಾತನಾಡಿ, ನಗರದಲ್ಲಿ ಇನ್ನು ಮುಂದೆ ನಗರದಲ್ಲಿ ಅಕ್ರಮ ಮಾವಾ ಮಾರಾಟಕ್ಕೆ ಕಡಿವಾಣ ಹಾಕಲಾಗುವುದು ಇನ್ನು ಮುಂದೆ ಯಾವುದೇ ಪಾನ್ ಶಾಪ್‌ಗಳಲ್ಲಿ ಮಾವಾ ಮಾರಾಟ ಮಾಡುತ್ತಿರುವುದು ಕಂಡು ಬಂದರೆ ಅಂತಹ ಅಂಗಡಿಗಳನ್ನು ಸೀಜ್ ಮಾಡಿ ಪ್ರಕರಣ ದಾಖಲಿಸಲಾಗುವುದು. ಮಾವಾ ತಯಾರಿಸುವವರ ಮೇಲೆ ತೀವ್ರ ನಿಗಾವಹಿಸಲಾಗುವುದು ಎಂದಿದ್ದಾರೆ.



ಅಕ್ರಮ ಮಾವಾ ಜಪ್ತಿ ಮಾಡಿದ ಅಧಿಕಾರಿಗಳು

ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಜಿ.ಎಸ್. ಗಲಗಲಿ ಮಾತನಾಡಿ, ಮಾವಾ ತಯಾರಿಸುವ ಅಡ್ಡೆಗಳನ್ನು ಮಟ್ಟ ಹಾಕಲಾಗುವುದು. ಮುಂದಿನ ದಿನಗಳಲ್ಲಿ ಇಂತಹ ದಂಧೆಗಳನ್ನು ಸಂಪೂರ್ಣವಾಗಿ ಮಟ್ಟ ಹಾಕಲಾಗುತ್ತದೆ ಎಂದು ತಿಳಿಸಿದರು. ಜಮಖಂಡಿ ಶಹರ ಠಾಣೆ ಸಿಪಿಐ ಮಲ್ಲಪ್ಪ ಮಡ್ಡಿ ಅವರು ಮಾತನಾಡಿ ಅಕ್ರಮವಾಗಿ ಮಾವಾ ತಯಾರಿಸುವವರು ಹಾಗೂ

☞12

# ಕಾಮಿಡಿ ಕಿಲಾಡಿಗಳು ಖ್ಯಾತಿಯ ಚಂದ್ರಶೇಖರ ಸಿದ್ಧಿ ಆತ್ಮಹತ್ಯೆ !


ಚಂದ್ರಶೇಖರ ಬದುಕಿದ್ದಾಗ

ಜೀ ಕನ್ನಡ ವಾಹಿನಿಯ ಕಾಮಿಡಿ ಕಿಲಾಡಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ತನ್ನದೇ ಆದ ವಿಶಿಷ್ಟ ಛಾಪು ಮೂಡಿಸಿದ್ದ ಹಳ್ಳಿಗಾಡಿನ ಹುಡುಗ ಚಂದ್ರಶೇಖರ ಸಿದ್ಧಿ ಮಾನಸಿಕ ಖಿನ್ನತೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಉತ್ತರಕನ್ನಡದ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಚಿಮ್ನಳ್ಳಿಯ ಆಶಾ ಕಾರ್ಯಕರ್ತೆ ಲಕ್ಷ್ಮಿ ನಾಗಪ್ಪ ಸಿದ್ಧಿ ಮಗ ಚಂದ್ರು. ಕೆಲ ತಿಂಗಳಿಂದ ಚಂದ್ರಶೇಖರ ಸಿದ್ದಿ ಮಾನಸಿಕ ರೋಗಿಯಂತೆ ವರ್ತಿಸುತ್ತಿದ್ದನಂತೆ. ತನ್ನ ಹೆಂಡತಿಗೆ ನೀನು ನನಗೆ ಮೋಸ ಮಾಡುತ್ತಿದ್ದೀಯಾ, ಎಲ್ಲಾ ಜನ ನನ್ನನ್ನ ನೋಡುತ್ತಾರೆ, ಟಾರ್ಗೆಟ್ ಮಾಡುತ್ತಾರೆ, ನನ್ನಿಂದ ಇದನ್ನೆಲ್ಲಾ ಸಹಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ, ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಅಂತ ಹೇಳುತ್ತಾ ಇದ್ದನಂತೆ!!

ಆಗ ಮನೆಯವರೆಲ್ಲ ಸೇರಿ ಆತನನ್ನು ಕಿಮ್ಸ್ ಆಸ್ಪತ್ರೆಗೆ ಸೇರಿಸಿ ವೈದ್ಯರಿಂದ ಸೂಕ್ತ ಚಿಕಿತ್ಸೆ ಕೊಡಿಸಿದ್ದರು. ಇದೇ ರೀತಿ ಮತ್ತೊಂದು ಸಲ ಮಾನಸಿಕ ಖಿನ್ನತೆಗೆ ಚಿಕಿತ್ಸೆ ಕೊಡಿಸಿದ್ದರು. ಕಳೆದ ತಿಂಗಳ 9ರಂದು ಚಂದ್ರಶೇಖರ ತನ್ನ ಹೆಂಡತಿಯನ್ನು ಕರೆದುಕೊಂಡು ಯಲ್ಲಾಪುರ ತಾಲ್ಲೂಕಿನ ಕಟ್ಟಿಗೆ ಗ್ರಾಮದ ಶ್ರೀಪತಿಕೋಟೆ ಮನೆ ಅವರ ಹೊಲದ ಕೂಲಿ ಕೆಲಸಕ್ಕೆ ಹೋಗಿದ್ದಾನೆ. ದಿನಾಂಕ 31/07/2025ರಂದು ಚಂದ್ರಶೇಖರನ ಹೆಂಡತಿ ಮಧ್ಯಾಹ್ನ 3-15ರ ಹೊತ್ತಿಗೆ ತನ್ನ ಅತ್ತೆ ಲಕ್ಷ್ಮಿ ನಾಗಪ್ಪ ಸಿದ್ದಿಗೆ ಫೋನ್ ಮಾಡಿ, ತನ್ನ ಗಂಡ ಚಂದ್ರಶೇಖರ ತನ್ನ ಮಗನನ್ನ ಶಾಲೆಯಿಂದ ಮಧ್ಯಾಹ್ನ 2 ಗಂಟೆಗೆ ಮನೆಗೆ ಕರೆದುಕೊಂಡು ಬಂದು ತಾನು ಶೌಚಾಲಯಕ್ಕೆ ಹೋಗಿಬರುತ್ತೇನೆ ಅಂತ ಹೇಳಿ ತಂಬಿಗೆ ತೆಗೆದುಕೊಂಡು ಹೋದವನು, ಎಷ್ಟು ಹೊತ್ತಾದರೂ ವಾಪಸ್ ಮನೆಗೆ ಬಂದಿಲ್ಲ ಅಂತ ಹೇಳಿದ್ದಾಳೆ! ಅಲ್ಲದೇ ನಾನು ನನ್ನ ಗಂಡನ್ನ ಹುಡುಕಿಕೊಂಡು ಕಾಡಿನ ದಾರಿಯಲ್ಲಿ ಹೋದಾಗ, ಕಾಡಿನಲ್ಲಿದ್ದ ಒಂದು ಮರಕ್ಕೆ ನೈಲಾನ್ ಹಗ್ಗದಿಂದ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಅಂತಾ ಹೇಳಿದ್ದಾಳೆ!!




ಚಂದ್ರಶೇಖರನ ಮೃತದೇಹ

ಈ ಬಗ್ಗೆ ಅಂದೇ ಯಲ್ಲಾಪುರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ ಚಂದ್ರಶೇಖರನ ತಾಯಿ ತನ್ನ ಮಗನ ಸಾವಲ್ಲಿ ತನಗೆ ಸಂಶಯವಿದ್ದು, ಈ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕೆಂದು ದೂರು ನೀಡಿದ್ದಾರೆ. ಶಿರಸಿ ಡಿವೈಎಸ್ಪಿ ಗೀತಾ ಪಾಟೀಲ, ಯಲ್ಲಾಪುರ ಪಿಐ ರಮೇಶ ಹಾನಾಪೂರ ಮಾರ್ಗದರ್ಶನದಲ್ಲಿ ಪಿಎಸ್ಐ ಯಲ್ಲಾಲಿಂಗ ಕುನ್ನೂರ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸಿದ್ದಾರೆ.


ಎಸ್ಪಿ ದೀಪನ್


ಡಿವೈಎಸ್ಪಿ ಗೀತಾ ಪಾಟೀಲ್


ಪಿಐ ರಮೇಶ್


ಪಿಎಸ್ಐ ಯಲ್ಲಾಲಿಂಗ ಕುನ್ನೂರ

ಈ ದೂರಿಗೆ ಸಂಬಂಧಿಸಿದಂತೆ ಮೃತನ ತಾಯಿ ಲಕ್ಷ್ಮಿ ತನ್ನ ಮಗ ಚಂದ್ರಶೇಖರನದ್ದು ಆತ್ಮಹತ್ಯೆಯಲ್ಲ ತನಗೆ ಈ ಸಾವಲ್ಲಿ ಸಂಶಯವಿದೆ ಎಂದು ದೂರಿದ್ದರಿಂದ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಈ ರಿಯಾಲಿಟಿ ಶೋಗಳು ಅಮಾಯಕ ಹುಡುಗರನ್ನು ಕಾಡಿಂದ ಕರೆತಂದು ಹಾಳುಗೆಡವಿ ಸಾವಿನ ಒಡಲಿಗೆ ದೂಕುತ್ತಿರುವುದು ಇದೇ ಮೊದಲಲ್ಲ. ಈ ಹಿಂದೆ ರಾಜೇಶ್ ಎಂಬ ಯುವಕ (ಬಿಳಿಗಿರಿರಂಗನಬೆಟ್ಟ) ಹಳ್ಳಿಹೈದ ಪ್ಯಾಟೆಗೆ ಬಂದ... ಶೋನಲ್ಲಿ ಭಾಗವಹಿಸಿ, ನಂತರ 'ಜಂಗಲ್ ಜಾಕಿ' ಎಂಬ ಸಿನಿಮಾದಲ್ಲೂ ನಟಿಸಿ, ಕಡೆಗೆ ಇಲ್ಲೂ ಏಗಲಾರದೆ, ಹಳ್ಳಿಗೂ ಹೋಗಲಾರದೆ ಮೈಸೂರಿನ ಬಾಡಿಗೆ ಮನೆಯಲ್ಲಿ, ಟೆರೇಸ್‌ನಿಂದ ಕೆಳಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದ! ಈಗ ಯಲ್ಲಾಪುರ ಕಾಡಿನ ಅಮಾಯಕ ಸಿದ್ದಿ ಸರದಿ!!

**-ಸಂತೋಷಕುಮಾರ**

11 ☞

ಮಾರಾಟ ಮಾಡುವವರು ಹಾಗೂ ಸಾರ್ವಜನಿಕವಾಗಿ ಮಾವಾ ಇಟ್ಟುಕೊಂಡು ತಿರುಗಾಡುವವರು ಕಂಡು ಬಂದರೆ ಅವರ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದ್ದಾರೆ.

ಮಾವಾ ತಯಾರಿಸುವ ಯಂತ್ರ ಕಚ್ಚಾ ಪದಾರ್ಥಗಳನ್ನು ಇಟ್ಟುಕೊಂಡು 'ಮಾವಾ' ಅಡ್ಡೆ ನಡೆಸುತ್ತಿದ್ದ ಹುನ್ನೂರ ಗ್ರಾಮದ ದಯಾನಂದ ಗುರವ, ಜಮಖಂಡಿ ನಗರದ ಮಹಾಲಿಂಗೇಶ್ವರ ಕಾಲೋನಿಯ ಲಾಲಸಾಬ ಹೊರಟ್ಟಿ ಮೇಲೆ ದೂರು ದಾಖಲಿಸಲಾಗಿದೆ. ಸುಮಾರು 10 ವರ್ಷಗಳ ಹಿಂದೆ ಮಾವಾ ಹುಟ್ಟಿಕೊಂಡಿದ್ದೆ ಜಮಖಂಡಿಯಲ್ಲಿ ಮೊದಲು ಎನ್ನಲಾಗಿದೆ! ಅಂದಿನಿಂದ ಜಮಖಂಡಿಯಿಂದಲೇ ಜಿಲ್ಲೆಯ ಕೆಲವು ನಗರಗಳಿಗೆ ಗ್ರಾಮಗಳಿಗೆ ಮಾವಾ ರವಾನೆಯಾಗುತ್ತಿತ್ತು ಎಂದು ತಿಳಿದು ಬಂದಿದ್ದು ಈ ದಂಧೆಯನ್ನು ಮಟ್ಟ ಹಾಕಬೇಕು, ಜಿಲ್ಲೆಯ ಅಬಕಾರಿ ಇಲಾಖೆ ಆರೋಗ್ಯ ಇಲಾಖೆ ಪೊಲೀಸ್ ಇಲಾಖೆ ಹಾಗೂ ತೀವ್ರ ನಿಗಾವಹಿಸಿ ಇಂತಹ ಅಕ್ರಮ ಮಾವಾ ತಯಾರಿಕೆ ಮತ್ತು ಮಾರಾಟವನ್ನು ಸಂಪೂರ್ಣ ಮಟ್ಟ ಹಾಕಬೇಕೆಂಬುದು ಸಾರ್ವಜನಿಕರ ದ್ವನಿಯಾಗಿದೆ

ಜಮಖಂಡಿ ನಗರದ 'ಮಾವಾ' ದಾಳಿ ವೇಳೆ 23 ಕೆಜಿ ಅಡಿಕೆ, 29 ಕೆಜಿ ತಂಬಾಕು, 9 ಕೆಜಿ ಬಣ್ಣದ ಚೀಲ, 3 ಚೀಲ ರಬ್ಬರ್ ಬ್ಯಾಂಡ್, ಮಾವಾ ಮಿಶ್ರಣ ಮಾಡುವ ಎರಡು ಯಂತ್ರ, ತೂಕ ಮಾಡುವ ಯಂತ್ರ, ಮಾರಾಟಕ್ಕೆ ಸಿದ್ದಪಡಿಸಿದ್ದ 400 ಅಧಿಕ ಮಾವಾ ಪ್ಯಾಕೆಟ್‌ಗಳನ್ನು ಅಧಿಕಾರಿಗಳು ವಶಪಡಿಕೊಂಡಿದ್ದು, 10 ಪಾನ್ ಶಾಪ್‌ಗಳ ಮೇಲೆ ದಾಳಿ ನಡೆದಿದ್ದು, ಒಟ್ಟು 25 ಜನರ ಮೇಲೆ ದೂರು ದಾಖಲಾಗಿದ್ದು, ತಲಾ 2700 ರೂ. ದಂಡ ವಿಧಿಸಿದ್ದಾರೆ. ಆದರೆ ಅಧಿಕಾರಿಗಳು ದಾಳಿ ನಡೆಸುತ್ತಿದ್ದಂತೆ ಇನ್ನೂ ಕೆಲ ಅಂಗಡಿ ಪಾನ್‌ಶಾಪ್ ಮಾಲಿಕರು ವಿಷಯ ಗೊತ್ತಾಗುತ್ತಿದ್ದಂತೆ ತಮ್ಮ ಅಂಗಡಿಗಳಿಗೆ ಬೀಗ ಜಡಿದು ಅಲ್ಲಿಂದ ಕಾಲ್ಕಿತ್ತಿದ್ದಾರೆ. ಜಮಖಂಡಿ ನಗರ ಹಾಗೂ ಹುನ್ನೂರ ಗ್ರಾಮದಲ್ಲಿ ಅಕ್ರಮ ಮಾವಾ ಅಡ್ಡೆ ಪಾನ್ ಶಾಪ್‌ಗಳ ಮೇಲೆ ದಾಳಿ ನಡೆಸಿದ ಕಾರ್ಯಾಚರಣೆಯಲ್ಲಿ ಜಮಖಂಡಿ ತಹಶೀಲ್ದಾರ್ ಅನಿಲ ಬಡಿಗೇರ, ತಾಲೂಕು ಆರೋಗ್ಯಾಧಿಕಾರಿ ಡಾ. ಜಿ.ಎಸ್. ಗಲಗಲಿ, ಸಿಪಿಐ ಮಲ್ಲಪ್ಪ ಮಡ್ಡಿ, ಡಿ.ಎ. ಜ. ದಯಾನಂದ ಕರೆನ್ನವರ, ಸಮಾಜ ಕಲ್ಯಾಣ ಅಧಿಕಾರಿ ಜಗದೀಶ ಪಾಸೋಡಿ, ಜಿಲ್ಲಾ ಸಂಯೋಜಕ ಶಶಿಕಾಂತ ಕುಮಟಳ್ಳಿ, ಶಿಕ್ಷಣ ಇಲಾಖೆ ಅಧಿಕಾರಿಗಳು, ಕಂದಾಯ ಆರೋಗ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಜನರು ಪಾಲ್ಗೊಂಡಿದ್ದರು.

**-ಮಂಜುನಾಥ ಈಶ್ವರ ಕರೋಳಿ**

ಜಮಖಂಡಿಯಲ್ಲಿ ಅಷ್ಟೇ ಅಲ್ಲದೇ ಅಕ್ಕಪಕ್ಕದ ವಿವಿಧ ಗ್ರಾಮಗಳಲ್ಲಿ, ನಗರಗಳಲ್ಲಿ ಮಾವಾ ಮಾರಾಟ ಮಾಡುತ್ತಿರುವ ಗುಮಾನಿ ಇದೆ. ಈ ಹಿಂದೆ ಮಾವಾ ಅಡ್ಡೆ ಅಂಗಡಿಗಳ ಮೇಲೆ ದಾಳಿ ನಡೆಸಿದರೂ ಅದು ವಾರೊಪ್ಪತ್ತಿನಲ್ಲಿ ಮತ್ತೆ ಮಾವಾ ದಂಧೆ ಎಗ್ಗಿಲ್ಲದೆ ನಡೆಯುತ್ತಲೇ ಬಂದಿದೆ. ಈ ಸಾರಿಯಾದರೂ ಅಧಿಕಾರಿಗಳು ಕಾಟಾಚಾರಕ್ಕೆ ಎಂಬಂತೆ ನಡೆದುಕೊಳ್ಳದೇ ಮಾವಾ ತಯಾರಿಕಾ ಅಡ್ಡೆಗಳನ್ನೇ ಶಾಶ್ವತವಾಗಿ ಮಟ್ಟ ಹಾಕಬೇಕು. ಮಾರಾಟಗಾರರ ಮೇಲೆ ಬಿಗಿ ಕಾನೂನು ಕ್ರಮ ಜರುಗಿಸಬೇಕು ಎಂಬುದು ಸಾರ್ವಜನಿಕರ ಅಹವಾಲಾಗಿದೆ. ಸಾರ್ವಜನಿಕರು ಸಂಬಂಧಪಟ್ಟ ಇಲಾಖೆಯೊಂದಿಗೆ ಸಹಕರಿದರೆ ಮಾತ್ರ ಈ ಮಾವಾ ಎಂಬ ಕರಾಳ ದಂಧೆ ಸಂಪೂರ್ಣವಾಗಿ ಈ ಸಮಾಜದಿಂದ ನಿರ್ನಾಮಗೊಳ್ಳಲು ಸಾಧ್ಯ ! ☯

# ಕೆಆರ್‌ಎಸ್‌ಗೆ ಟಿಪ್ಪು ಸುಲ್ತಾನ್ 'ಅಡಿಗಲ್ಲು' ಎಂದ ಚೇತನ್ ಅಹಿಂಸಾ!




ಮಂಡ್ಯದ ಶ್ರೀರಂಗಪಟ್ಟಣದಲ್ಲಿ ಇತೀಚೆಗಷ್ಟೇ ನಡೆದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ. ಮಹದೇವಪ್ಪ... ಕೃಷ್ಣರಾಜ ಸಾಗರ ಅಣೆಕಟ್ಟೆಗೆ ಮೊದಲು ಅಡಿಗಲ್ಲು ಹಾಕಿದ್ದು ಟಿಪ್ಪು ಸುಲ್ತಾನ್ ಎಂದು ಹೇಳಿದ್ದು ಈಗ ಭಾರಿ ವಿವಾದಕ್ಕೆ ಕಾರಣವಾಗಿದೆ! ಕೃಷ್ಣರಾಜ ಸಾಗರ ಜಲಾಶಯಕ್ಕೆ ಅಡಿಗಲ್ಲು ಹಾಕಿದ್ದು ಟಿಪ್ಪು ಸುಲ್ತಾನ್ ಎಂಬ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಹೆಚ್.ಸಿ. ಮಹದೇವಪ್ಪನವರ ಹೇಳಿಕೆಗೆ ಪಬ್ಲಿಕ್‌ನಿಂದ ಪರ ಹಾಗೂ ವಿರೋಧ ವ್ಯಕ್ತವಾಗುತ್ತಿದೆ.



ಸಾಹಿತಿಗಳು ಹಾಗೂ ಇತಿಹಾಸಕಾರರು ತಮ್ಮ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಇದರ ಮಧ್ಯೆ, ಟಿಪ್ಪು ಸುಲ್ತಾನ್ ಕೆಆರ್‌ಎಸ್‌ಗೆ 'ಆಧಾರ ಶಿಲೆ' ಎಂದು ನಟ, ಸೋಶಿಯಲ್ ವರ್ಕರ್ ಚೇತನ್ ಅಹಿಂಸಾ ಹೇಳಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದು, ಮೈಸೂರು ಮೂಲದ 'ಟಿಪ್ಪು' ಸಂಶೋಧಕ ಪ್ರೊಫೆಸರ್ ಗುರುಸಿದ್ದಯ್ಯ ಅವರ ಮಾತುಗಳ ಪ್ರಕಾರ, ಶಾಸನಗಳ ಆಧಾರದಲ್ಲಿ ಟಿಪ್ಪು ಸುಲ್ತಾನ್ ಇವತ್ತಿನ ಕೆಆರ್‌ಎಸ್ ಅಣೆಕಟ್ಟು ಇರುವ ಸ್ಥಳದ ಬಳಿ ಅಣೆಕಟ್ಟು ಕಟ್ಟುವ ಉದ್ದೇಶ ಹೊಂದಿದ್ದರು ಅನ್ನೋದು ಗೊತ್ತಾಗುತ್ತದೆ. ಟಿಪ್ಪು ಅಣೆಕಟ್ಟು ನಿರ್ಮಾಣವನ್ನು ಪ್ರಾರಂಭಿಸಲ್ಲವಾದರೂ, ಇವತ್ತಿನ ಅಣೆಕಟ್ಟು ಅದೇ ಸುತ್ತಮುತ್ತಲಿನ ಸ್ಥಳದಲ್ಲಿ ನಿರ್ಮಾಣವಾಗಿರುವುದರಿಂದ ಅವರನ್ನೂ ಕೆಆರ್‌ಎಸ್‌ಗೆ 'ಆಧಾರ ಶಿಲೆ' ಎಂದರೆ ತಪ್ಪೇನಿಲ್ಲ.

ಕೆಆರ್‌ಎಸ್ ಗೇಟ್‌ನ ಹೆಬ್ಬಾಗಿಲಿನಲ್ಲಿ ಈಗಲೂ ಅವರ 'ಅಡಿಗಲ್ಲು' ಇದ್ದು ಈ ಸತ್ಯವನ್ನು ಹೇಳಲು ಯಾರಿಗೂ ಧೈರ್ಯವಿಲ್ಲ ಎಂದು ಚೇತನ್ ಹೇಳಿದ್ದಾರೆ! ಈ ಹಿಂದೆ ಮೈಸೂರು ವಿಮಾನ ನಿಲ್ದಾಣಕ್ಕೆ ಟಿಪ್ಪು ಸುಲ್ತಾನ್ ಹೆಸರಿಡುವುದರಲ್ಲಿ ತಪ್ಪೇನಿಲ್ಲ ಎಂದಿದ್ದ ಚೇತನ್ ಅಹಿಂಸಾ ಅವರಿಗೆ, ಸಂಘಿಗಳಿಂದ ವಿರೋಧ ವ್ಯಕ್ತವಾಗಿತ್ತು! ☯

# ಯಮೆನ್‌ನಲ್ಲಿ ನರ್ಸ್ ನಿಮಿಷಾ ಪ್ರಿಯಾಗೆ ಯಮಪಾಶದಿಂದ ಮುಕ್ತಿ ಸಿಕ್ಕಿತೇ?!




ತಲಾಲ್ ಮೆಹ್ದಿ

**ಕೇರಳದ ನರ್ಸ್ ನಿಮಿಷಾ ಪ್ರಿಯಾ ಅವರಿಗೆ ಕೊಲೆ ಪ್ರಕರಣದಲ್ಲಿ ಯೆಮೆನ್ ನ್ಯಾಯಾಲಯ ಗಲ್ಲು ಶಿಕ್ಷೆ ವಿಧಿಸಿದ್ದು, ಆಕೆಯ ಗಲ್ಲು ಶಿಕ್ಷೆಯನ್ನು ತಡೆಯಲು ಇರುವ ಏಕೈಕ ಮಾರ್ಗವೆಂದರೆ ಅದು 'ಬ್ಲಡ್ ಮನಿ' (ಮೃತನ ಕುಟುಂಬದವರಿಗೆ ಆರೋಪಿಯಿಂದ ಆರ್ಥಿಕ ಸಹಾಯ) ಎಂದು ಹೇಳಲಾಗಿತ್ತು. ಆದರೆ, 'ಬ್ಲಡ್ ಮನಿ'ಯನ್ನು ಮೃತ ವ್ಯಕ್ತಿ ತಲಾಲ್ ಮೆಹ್ದಿ ಅವರ ಕುಟುಂಬ ನಿರಾಕರಿಸಿದೆ! ಕಳೆದ ಜುಲೈ 16ರಂದು ನಿಮಿಷಾಗೆ ನೇಣು ಹಾಕಲು ನಿರ್ಧಾರವಾಗಿತ್ತು! ಆದರೆ, ಭಾರತ ಸರ್ಕಾರ ಹಾಗೂ ಕೆಲವು ಸಂಘಟನೆಗಳ ಕೋರಿಕೆಯ ಮೇರೆಗೆ ನೇಣು ಶಿಕ್ಷೆ ಮುಂದೂಡಲಪಟ್ಟಿತ್ತು! ನೇಣು ಶಿಕ್ಷೆ ಮುಂದೂಡಲ್ಪಟ್ಟಿದ್ದಕ್ಕೆ ಕೆರಳಿರುವ ಮೃತನ ಕುಟುಂಬ, ಬ್ಲಡ್ ಮನಿ ಬೇಡವೇ ಬೇಡ, ಪ್ರತೀಕಾರ ಒಂದೇ ಪರಮಸುಖ... ಎಂದು ಹಠ ಹಿಡಿದು ಕುಳಿತಿದ್ದಾರೆ!! ಈ ನಡುವೆ ಯಮೆನ್ ನ್ಯಾಯಾಲಯ ನಿಮಿಷಾ ಪ್ರಿಯಾಳಿಗೆ ನೀಡಿದ್ದ ಗಲ್ಲು ಶಿಕ್ಷೆಯನ್ನು ರದ್ದು ಪಡಿಸಿದೆ ಎಂಬ ಶುಭ ಸುದ್ದಿ ಹೊರ ಬಿದ್ದಿದೆ!! ಆದರಿನ್ನೂ ಸರ್ಕಾರದಿಂದ ಅಧಿಕೃತ ಮಾಹಿತಿ ಹೊರಬಿದ್ದಿಲ್ಲ!!!**

ಕೇರಳದ ನರ್ಸ್ ನಿಮಿಷಾ ಪ್ರಿಯಾ ಎಂಬುವರು ಯಮೆನ್‌ನಲ್ಲಿ ತನ್ನ ಬ್ಯುಸಿನೆಸ್ ಪಾರ್ಟನರ್ ತಲಾಲ್ ಮೆಹ್ದಿಯನ್ನು ಕೊಲೆ ಮಾಡಿದ ಅಪರಾಧದಲ್ಲಿ ಗಲ್ಲು ಶಿಕ್ಷೆಗೆ ಗುರಿಯಾಗಿದ್ದರು. ಈ ಪ್ರಕರಣದಲ್ಲಿ ಕಳೆದ ಜುಲೈ 16 ರಂದು ಗಲ್ಲಿಗೇರಬೇಕಾಗಿದ್ದ ಆಕೆಯ ಮರಣದಂಡನೆಯನ್ನು ಭಾರತ ಸರ್ಕಾರ ಹಾಗೂ ವಿವಿಧ ಸಂಘಟನೆಗಳ ಕೋರಿಕೆಯ ಮೇರೆಗೆ ಮುಂದೂಡಲಾಗಿತ್ತು! ಯಮೆನ್ ನಲ್ಲಿರುವ ಶರಿಯತ್ ಕಾನೂನಿನಲ್ಲಿ ಮೃತರ ಕುಟುಂಬಕ್ಕೆ ಬ್ಲಡ್ ಮನಿ (ಪರಿಹಾರ)ಕೊಡುವ ಮೂಲಕ ಸಮಸ್ಯೆ ಇತ್ಯರ್ಥ ಮಾಡಿಕೊಳ್ಳುವ ಅವಕಾಶ ಜಾರಿಯಲ್ಲಿದೆ!


ಅಬ್ದುಲ್ ಮೆಹ್ದಿ


ಹೀಗೆ ಮಾಡಿಕೊಂಡರೆ ಆಕೆಗೆ ಗಲ್ಲು ಶಿಕ್ಷೆಯನ್ನು ತಪ್ಪಿಸಲು ಕಾನೂನಿನಲ್ಲಿ ಅವಕಾಶವಿದೆ. ಆದರೆ, ಕೊಲೆಯಾದ ತಲಾಲ್ ಮೆಹ್ದಿ ಅವರ ಕುಟುಂಬ 'ಬ್ಲಡ್ ಮನಿ' ಸ್ವೀಕರಿಸಲು ತಮ್ಮ ಒಪ್ಪಿಗೆಯಿಲ್ಲ ಎಂದು ಖಡಾ ಖಂಡಿತವಾಗಿ ಹೇಳಿಬಿಟ್ಟಿದ್ದಾರೆ! ಈ ಹಿನ್ನೆಲೆಯಲ್ಲಿ ನಿಮಿಷಾ ಪ್ರಿಯಾ ನೇಣಿಗೇರುವುದು ಬಹುತೇಕ ಖಚಿತ! ಎನ್ನುವಾಗಲೇ......

### ತಾತ್ಕಾಲಿಕ ರಿಲೀಫ್

ಮರಣ ದಂಡನೆ ರದ್ದಾಗಿದೆ ಎಂಬ ಶುಭ ಸುದ್ದಿ ಮಾಧ್ಯಮಗಳಲ್ಲಿ ಬಂದಿದೆ! ಆದರೆ, ಯಮೆನ್ ಸರ್ಕಾರ ವಿನ್ನೂ ಅಧಿಕೃತವಾಗಿ ಮಾಹಿತಿ ಬಿಡುಗಡೆ ಮಾಡಿಲ್ಲ! ಕಳೆದ ಜುಲೈ 16ರಂದು ನಿಗದಿಯಾಗಿದ್ದ ಮರಣ ದಂಡನೆಯನ್ನು ಮುಂದೂಡಿದ ನಂತರ ಕೇರಳದ ನರ್ಸ್ ನಿಮಿಷಾ ಪ್ರಿಯಾ ಅವರಿಗೆ ತಾತ್ಕಾಲಿಕ ರಿಲೀಫ್ ಸಿಕ್ಕಿತ್ತು. ಆದರೆ ನಿಮಿಷಾ ಹತ್ಯೆ ಮಾಡಿದ್ದ ಯೆಮೆನ್ ನಾಗರಿಕ ತಲಾಲ್ ಅಬ್ದೋ ಮಹ್ದಿ ಅವರ ಸಹೋದರ ಇತ್ತೀಚೆಗೆ ನೀಡಿದ ಹೇಳಿಕೆಯ ನಂತರ ಅವರ ಭವಿಷ್ಯದ ಬಗ್ಗೆ ಕಳವಳಗಳು ಹೆಚ್ಚಾಗಿವೆ!

ನಿಮಿಷಾಳ ಮರಣ ದಂಡನೆಯನ್ನು ವಜಾಗೊಳಿಸಲು ಭಾರತದಿಂದಲೂ ಸಾಕಷ್ಟು ಪ್ರಯತ್ನಗಳು ನಡೆದಿವೆ.ಖುದ್ದು ಮೋದಿ ಅವರು ಯಮೆನ್ ಪ್ರಧಾನಿಗೆ ಮನವಿ ಮಾಡಿದ್ದಾರೆ. ಕೊನೆಗೆ, ನಮ್ಮಿಂದ ಮಾಡಲು ಆಗುವುದು ಇಷ್ಟೇ.... ಎಂಬ ಹೇಳಿಕೆಯು ಬಿಡುಗಡೆ ಆಗಿದೆ. ಆದರೆ, ಯಮೆನ್‌ನಲ್ಲಿ ಬಹಳ ಕಠಿಣ ಕಾನೂನು ಇರುವುದರಿಂದ ಬೇರೆ ಯಾವುದೇ ಹಸ್ತಕ್ಷೇಪವೂ ಅಲ್ಲಿ ನೆರವಿಗೆ ಬರುತ್ತಿಲ್ಲ.. ಮರಣದಂಡನೆಯನ್ನು ಮುಂದೂಡಿರುವುದನ್ನು ತಲಾಲ್ ಮಹ್ದಿ ಅವರ ಸಹೋದರ ಅಬ್ದೆಲ್ಫತ್ತಾ ಮಹ್ದಿ ಟೀಕಿಸಿದ್ದಾರೆ. ಮೃತರ ಕುಟುಂಬದಿಂದ ನಿಮಿಷಾಗೆ ಕ್ಷಮೆ ಪಡೆಯುವ ಪ್ರಯತ್ನಗಳನ್ನು ಮತ್ತು ಭಾರತ ಸರ್ಕಾರ ಸೇರಿದಂತೆ ವಿವಿಧ ಪಕ್ಷಗಳಿಂದ ಮಧ್ಯಸ್ಥಿಕೆಯ ಮಾತುಕತೆಗಳನ್ನು ಅವರು ಬಲವಾಗಿ ತಿರಸ್ಕರಿಸಿದ್ದಾರೆ.

ಈ ಬಗ್ಗೆ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿರುವ ಅಬ್ದುಲ್ ಫತ್ತಾಹ್, ಇಸ್ಲಾಮಿಕ್ ಶರಿಯಾ ಕಾನೂನಿನ ಪ್ರಕಾರ ಕ್ವಿಸಾಸ್ (ಪ್ರತೀಕಾರ)ಗಾಗಿ ನಮ್ಮ ಬೇಡಿಕೆ ದೃಢವಾಗಿದೆ. ಮರಣ ದಂಡನೆ ಜಾರಿಯಾಗುವವರೆಗೆ ಕಾನೂನು ಕ್ರಮಗಳನ್ನು ಮುಂದುವರಿಸುತ್ತೇವೆ. ಮರಣದಂಡನೆಯನ್ನು ಮುಂದೂಡಿದ ಮಾತ್ರಕ್ಕೆ ಆಕೆ ಗಲ್ಲಿಗೇರುವುದು ತಪ್ಪುವುದಿಲ್ಲ ಎಂದು ಹೇಳಿದ್ದಾರೆ!



### ಪ್ರತೀಕಾರವಷ್ಟೇ ಪರಮಸುಖ

ಮೊನ್ನೆ ಮಂಗಳವಾರ ಕೇರಳದ ಮುಸ್ಲಿಂ ಧರ್ಮಗುರು



ವೊಬ್ಬರ ಮಧ್ಯಸ್ಥಿಕೆಯ ನಂತರ ಯೆಮೆನ್ ಅಧಿಕಾರಿಗಳು ಇಂದು ನಿಗದಿಪಡಿಸಲಾಗಿದ್ದ ನಿಮಿಷಾ ಅವರ ಮರಣ ದಂಡನೆಯನ್ನು ಅನಿರ್ದಿಷ್ಟ ದಿನಾಂಕಕ್ಕೆ ಮುಂದೂಡಿದ ನಂತರ ಈ ಹೇಳಿಕೆಗಳು ಬಂದಿರುವುದು ಗಮನರ್ಹ.

ಇಂದು ಏನು ನಡೆಯುತ್ತಿದೆ ಎಂಬುದು ನಮಗೂ ಅಚ್ಚರಿ ತಂದಿದೆ. ಮಧ್ಯಸ್ಥಿಕೆ ಪ್ರಯತ್ನಗಳ ಬಗ್ಗೆ ಈ ಎಲ್ಲಾ ಮಾತುಗಳು ಹೊಸದಲ್ಲ, ಇಷ್ಟು ವರ್ಷಗಳ ನಮ್ಮ ಕಾನೂನು ಹೋರಾಟದಲ್ಲಿ ರಹಸ್ಯ ಪ್ರಯತ್ನಗಳು ಮತ್ತು ಮಧ್ಯಸ್ಥಿಕೆಗೆ ಗಂಭೀರ ಪ್ರಯತ್ನಗಳು ನಡೆದಿವೆ! ಆದರೆ ನಾವು ಎದುರಿಸಿದ ಒತ್ತಡಗಳು ನಮ್ಮನ್ನು ಬದಲಾಯಿಸಿಲ್ಲ! ನಮ್ಮ ಬೇಡಿಕೆ ಸ್ಪಷ್ಟವಾಗಿದೆ. ಕ್ವಿಸಾಸ್ (ಪ್ರತೀಕಾರ) ಬಿಟ್ಟು ಬೇರೇನೂ ಇಲ್ಲ ಎಂದು ಮೆಹದಿ ಸೋದರ ತನ್ನ ಪೋಸ್ಟ್‌ನಲ್ಲಿ ಹಾಕಿದ್ದಾರೆ.

### 8.60 ಕೋಟಿ ರೂ ಕೊಡಲು ಸಿದ್ದ!

ಯಮೆನ್ ಕಾನೂನಿನಡಿಯಲ್ಲಿ ಮೃತರ ಕುಟುಂಬದಿಂದ ಅಪರಾಧಿ ಕ್ಷಮಾದಾನವನ್ನು ಪಡೆಯಬಹುದು. ಈ ಸಂದರ್ಭದಲ್ಲಿ ನಿಮಿಷಾ ಮನವಿ ಮಾಡಿದರೆ ಮೃತ ವ್ಯಕ್ತಿ ತಲಾಲ್ ಅಬ್ದೋ ಮೆಹ್ದಿ ಅವರ ಕುಟುಂಬವು ನಿಮಿಷಾ ಅವರನ್ನು ಕ್ಷಮಿಸುವ ಅಧಿಕಾರವನ್ನು ಹೊಂದಿದೆ. ಆಗ ಮಾತ್ರ ಅವರ ಗಲ್ಲು ಶಿಕ್ಷೆ ರದ್ದಾಗುವ ಸಾಧ್ಯತೆ ಇರುತ್ತದೆ. ಆದರೆ, ಮೃತನ ಕುಟುಂಬ ಕ್ಷಮೆಗೆ ಅಥವಾ 'ಬ್ಲಡ್ ಮನಿ'ಗೆ (ಆರ್ಥಿಕ ಸಹಾಯ) ಒಪ್ಪಿಲ್ಲ! ಕೇರಳ



☞14

## 8.60 ಕೋಟಿ 'ಬ್ಲಡ್ ಮನಿ' ಕೊಟ್ಟರೂ...

ಕೇರಳದ ಧರ್ಮಗುರು ಅಬುಬಕರ್ ಅವರ ಹಸ್ತಕ್ಷೇಪದಿಂದಾಗಿ ನೇಣು ಹಾಕುವಿಕೆಯನ್ನು ಮುಂದೂಡಲಾಗಿದೆಯಂತೆ! ಯಮೆನ್ನಲ್ಲಿರುವ 'ಹೌತಿ' ಸರ್ಕಾರದೊಂದಿಗೆ ಮಾತುಕತೆ ನಡೆಯುತ್ತಿದೆ ಅಂತಾ ಅಬು ಬಕರ್ ತಿಳಿಸಿದ್ದಾರೆ. ಆದರೆ, ತನ್ನ ಸೋದರನನ್ನು ಕೊಂದ ನಿಮಿಷಾಳಿಗೆ ಶಿಕ್ಷೆಯಾಗಲೇಬೇಕು ಎಂದು ಮೃತ ತಲಾಲ್ ಮೆಹ್ದಿ ಸೋದರ ಅಬ್ದುಲ್ ಫತ್ರಾಹ್ ಮೆಹ್ದಿ ಹಠ ಹಿಡಿದಿದ್ದಾನೆ!

ಆಕೆಯ ಅಪರಾಧಕ್ಕೆ ಕ್ಷಮೆಯೇ ಇಲ್ಲ, ಆಕೆಗೆ ಶಿಕ್ಷೆಯಾಗಬೇಕು. 'ಬ್ಲಡ್ ಮನಿ'ಯನ್ನು ಸ್ವೀಕರಿಸುವುದಿಲ್ಲ, ಹಣದಿಂದ ಹೋದ ಜೀವವನ್ನು ಮತ್ತೆ ಖರೀದಿಸಲು ಸಾಧ್ಯವಿಲ್ಲ, ನಮಗೆ ನ್ಯಾಯ ಬೇಕು. ಭಾರತ ದೇಶವೇ ಆಗಲಿ, ಯಾರೇ ಆಗಲಿ, ಓರ್ವ ಕೊಲೆ ಅಪರಾಧಿಯನ್ನು ಬಲಿಪಶು ಎಂದು ಬಿಂಬಿಸಬಾರದು ಎಂದು ಸಾರ್ವಜನಿಕವಾಗಿ ಮನವಿ ಮಾಡಿಕೊಂಡಿದ್ದಾರೆ!

ಇನ್ನು, ನಿಮಿಷ ಪ್ರಿಯಾ ಇಂಟರ್ ನ್ಯಾಷನಲ್ ಆಕ್ಷನ್ ಕೌನ್ಸಿಲ್ ಕೋರ್ ಕಮಿಟಿ ಸದಸ್ಯ ದಿನೇಶ್ ನಾಯರ್ ಈ ಬಗ್ಗೆ ಪ್ರತಿಕ್ರಿಯಿಸಿ... ನಿಮಿಷಾ ಪ್ರಿಯಾಗೆ ಕ್ಷಮಾದಾನಕ್ಕೆ ನಮ್ಮ ಮಂಡಳಿ ಅವಿರತ ಶ್ರಮಪಡ್ತಿದೆ. ಸಂತ್ರಸ್ತ ಕುಟುಂಬದ ಜೊತೆ ಮಾತುಕತೆ ನಡೆಸುತ್ತಿದ್ದೇವೆ. ಕ್ಷಮಾದಾನಕ್ಕಾಗಿ ದೊಡ್ಡ ಪ್ರಮಾಣದ ಪರಿಹಾರ ವ್ಯವಸ್ಥೆ ಮಾಡಿದ್ದೇವೆ. ಆದರೆ ಸಂತ್ರಸ್ತೆಯ ಕುಟುಂಬವು ಅದನ್ನು ಸ್ವೀಕರಿಸಲು ನಿರಾಕರಿಸಿದೆ. ಏನಾದ್ರೂ ಮಾಡಿ ಅವರನ್ನು ಒಪ್ಪಿಸುತ್ತೇವೆ. ಈ ನಿಟ್ಟಿನಲ್ಲಿ ನಮ್ಮ ಪ್ರಯತ್ನ ಮುಂದುವರಿಯಲಿದೆ... ನಿಮಿಷಾ ಪ್ರಿಯಾಳ ಬಿಡುಗಡೆಗಾಗಿ ಸಂಭಾವ್ಯವಿರೋ ಎಲ್ಲಾ ಮಾರ್ಗಗಳನ್ನು ಹುಡುಕಲಾಗುತ್ತಿದೆ. ಕೇಂದ್ರ ಸರ್ಕಾರ ಕೂಡ ನಮ್ಮ ಜೊತೆ ಇದೆ. ಭಾರತ ಸರ್ಕಾರವು ಮೆನ್ ಜೈಲು ಅಧಿಕಾರಿಗಳು ಹಾಗೂ ಪ್ರಾಸಿಕ್ಯೂಷನ್ ಕಚೇರಿಯೊಂದಿಗೆ ನಿರಂತರ ಸಂಪರ್ಕದಲ್ಲಿದೆ. ಇದನ್ನೆಲ್ಲ ಮಾನ್ಯ ಸುಪ್ರೀಂ ಕೋರ್ಟ್ ತಿಳಿಸಲಾಗಿದೆ. ಒಳ್ಳೆಯದಾಗಲಿದೆ ಎಂಬ ಮಾಹಿತಿ ನೀಡಿದ್ದಾರೆ!

# ಹೆಂಡತಿ ಅನೈತಿಕ ಸಂಬಂಧದಲ್ಲಿದ್ದಳು....




ಹೆಂಡತಿ ಅನೈತಿಕ ಸಂಬಂಧದಲ್ಲಿದ್ದಳು. ಆದರೆ ಗಂಡ ಸೇಡು ತೀರಿಸಿಕೊಳ್ಳಲಿಲ್ಲ, ದಲಿಗೆ, ತನ್ನನ್ನು ತಾನು ಬದಲಿಸಿಕೊಂಡ!

ಅವನ ಹೆಸರು ರಮೇಶ್. ರ್ಕಾರಿ ಕಚೇರಿಯಲ್ಲಿ ಕಸ ಗುಡಿಸುವವನು.ನೌಕರರಿಗೆ ಚಹಾ ಬಡಿಸುವವನು. ಕಡಿಮೆ ವಿದ್ಯಾವಂತ, ಸರಳ, ಸ್ವಾಭಿಮಾನದಿಂದ ತುಂಬಿದ್ದರೂ ಅಸಹಾಯಕ. ಅವನ ಪತ್ನಿ ನಿಧಿ ಅದೇ ಕಚೇರಿಯಲ್ಲಿ ಉನ್ನತ ಅಧಿಕಾರಿ ಹುದ್ದೆಯಲ್ಲಿದ್ದಳು.

ವಿದ್ಯಾವಂತ, ಬುದ್ಧಿವಂತ, ಮಹತ್ವಾಕಾಂಕ್ಷೆಯುಳ್ಳವಳು. ಜನರು ಹೇಳುತ್ತಿದ್ದರು - ಇಂತಹ ದೊಡ್ಡ ಅಧಿಕಾರಿ ಪತ್ನಿಯನ್ನು ಪಡೆದ ರಮೇಶ್ ನಿಜಕ್ಕೂ ಅದೃಷ್ಟಶಾಲಿ.

ಆರಂಭದಲ್ಲಿ ಎಲ್ಲವೂ ಚೆನ್ನಾಗಿತ್ತು. ರಮೇಶ್ ತನ್ನ ಹೆಂಡತಿಯ ಬಗ್ಗೆ ಹೆಮ್ಮೆಪಡುತ್ತಿದ್ದನು. ನಿಧಿ ಕುರ್ಚಿಯ ಮೇಲೆ ಕುಳಿತಿರುವುದನ್ನು ನೋಡಿದಾಗಲೆಲ್ಲಾ ಅವನ ಕಣ್ಣುಗಳಲ್ಲಿ ಒಂದು ಹೊಳಪು ಹೊಳೆಯುತ್ತಿತ್ತು. ಆದರೆ ನಿಧಾನವಾಗಿ ಆ ಹೊಳಪು ಮಂಜಾಗಿ ಬದಲಾಗಲು ಪ್ರಾರಂಭಿಸಿತು.

ಅದೇ ಕಚೇರಿಯಲ್ಲಿ ಮತ್ತೊಬ್ಬ ಅಧಿಕಾರಿ ಇದ್ದರು - ಸಂದೀಪ್ ಶ್ರೀವಾಸ್ತವ. ಆತ ಇಲಾಖೆಯ ಮುಖ್ಯಸ್ಥರಾಗಿದ್ದರು. ನಿಧಿ ಈಗ ತಡರಾತ್ರಿಯವರೆಗೆ ಮೀಟಿಂಗ್‌ನಲ್ಲಿ ಬ್ಯುಸಿ ಇರುತ್ತಿದ್ದಳು! ವಾರಾಂತ್ಯದಲ್ಲಿ ಪ್ರಯಾಣಕ್ಕೆ ಹೋಗುತ್ತಿದ್ದಳು. ಮತ್ತು ನಿಧಾನವಾಗಿ.....ಮನೆಗೆ ಹಿಂತಿರುಗುವುದನ್ನು ರೂಢಿಗತ ಮಾಡಿಕೊಂಡಿದ್ದಳು.

ರಮೇಶ್ ಪ್ರತಿ ರಾತ್ರಿ ಬಾಗಿಲು ತೆರೆದು ಪರಿಶೀಲಿಸುತ್ತಿದ್ದನು! ಅವಳ ಸುಳಿವೇ ಇಲ್ಲಾ. ಕರೆ ಮಾಡಿ ಪ್ರಶ್ನಿಸುತ್ತಿದ್ದ ಇಂದು ಬರುತ್ತೀಯಾ? ಆದರೆ ಅವಳ ಉತ್ತರ ಮೌನವಾಗಿತ್ತು!

ಒಂದು ದಿನ, ರಮೇಶ್ ಧೈರ್ಯ ತಂದುಕೊಂಡು ಕೇಳಿದ್ದ, ನೀನು ಯಾಕೆ ಇಷ್ಟು ತಡವಾಗಿ ಬಂದೆ ನಿಧಿ?

ಇದಕ್ಕೆ, ನಿಧಿ ಉತ್ತರಿಸಿದಳು:

ನಿನಗೆ ಅರ್ಥವಾಗುವುದಿಲ್ಲ ರಮೇಶ್, ನೀನು ಕೇವಲ ಕಸ ಗುಡಿಸುವವನು. ನನ್ನ ಜವಾಬ್ದಾರಿ ದೊಡ್ಡದಿದೆ... ಜೀವನವೇ ಬೇರೆ. ಅವಳ ಉತ್ತರ ಕೇಳಿ ರಮೇಶ್ ಮೌನವಾಗಿದ್ದನು... ಆದರೆ, ಅವನ ತಲೆ ಬಗ್ಗಿರಲಿಲ್ಲ, ಆದರೆ ಅವನ ಹೃದಯ ಭಾರವಾಗಿತ್ತು.

ಒಂದು ಸಂಜೆ... ರಮೇಶ್ ಆಫೀಸಿನ ಒಂದು ಕೋಣೆಗೆ ತಪ್ಪಾಗಿ ಪ್ರವೇಶಿಸಿದನು. ಅಲ್ಲಿ ನಿಧಿ ಮತ್ತು ಶ್ರೀವಾಸ್ತವ ಒಟ್ಟಿಗೆ ಕುಳಿತಿದ್ದರು. ತುಂಬಾ ಹತ್ತಿರದಲ್ಲಿ ಕುಳಿತಿದ್ದರು. ರಮೇಶ್ ಜೊತೆ ಅವರು ಮಾತುಗಳನ್ನಾಡಲಿಲ್ಲ, ಆದರೆ ಅವರ ಕಣ್ಣುಗಳು ಎಲ್ಲವನ್ನೂ ಹೇಳಿದವು.

ಒಂದು ದಿನ ರಮೇಶ್ ರಜೆ ಹಾಕಿದ. ನಿಧಿ ರಾತ್ರಿ ಮನೆಗೆ ಬಂದಳು - ಅವಳು ಏನೋ ಹೇಳಲು ಪ್ರಾರಂಭಿಸಿದಳು, ಅಷ್ಟರಲ್ಲಿ ಆದರೆ ರಮೇಶನೇ ಹೇಳಿದ.... ನಿಮ್ಮ ಸಂಬಂಧದಿಂದ ನನಗೆ ಯಾವುದೇ ತೊಂದರೆಯಾಗಿಲ್ಲ... ನಾನು ಪ್ರತಿದಿನ ಚಹಾ ಬಡಿಸಲು ಹೋಗುವ ವ್ಯಕ್ತಿ. ನೀವು ನನ್ನನ್ನು ಮುಖ್ಯ ವ್ಯಕ್ತಿ ಎಂದು ಪರಿಗಣಿಸುವುದಿಲ್ಲ... ಇದರಿಂದ ನನಗೆ ಬೇಸರವಾಗಿದೆ.

ಆರು ತಿಂಗಳ ನಂತರ... ರಮೇಶ್ ಈಗ ಬೇರೆ ನಗರದಲ್ಲಿದ್ದಾನೆ. ಮತ್ತು ಜವಾನನ ಕೆಲಸವನ್ನು ಮಾಡುತ್ತಿದ್ದಾನೆ. ಅವನು ತನ್ನ ಅಧ್ಯಯನವನ್ನು ಪುನರಾರಂಭಿಸಿದ್ದಾನೆ. ಅವನು ದೂರ ಶಿಕ್ಷಣದ ಮೂಲಕ ತನ್ನ ವ್ಯಾಸಂಗ ಮುಂದುವರೆಸಿದ್ದಾನೆ.

ನಿಧಿ?

ಅವಳು ಇಲ್ಲೇ ದೊಡ್ಡ ಅಧಿಕಾರಿ... ಆದರೆ ಈಗ ಅವಳಿಗೆ ಕಚೇರಿಯಲ್ಲಿ ಮೊದಲು ಸಿಗುತ್ತಿದ್ದ ಗೌರವವಿಲ್ಲ, ಎಲ್ಲರಿಗೂ ತಿಳಿದಿದೆ - ರಮೇಶ್ ಅವಳನ್ನು ಬಿಟ್ಟು ಹೋಗಿದ್ದಾನೆ... ಆದರೆ ಅವನು ಅವಳನ್ನು ಅವಮಾನಿಸಲಿಲ್ಲ,

ಈ ಕಥೆಯ ಸಂದೇಶ:

ಒಬ್ಬ ವ್ಯಕ್ತಿಯ ಸ್ಥಾನಮಾನವನ್ನು ಅವನ ನಡವಳಿಕೆಯಿಂದ ನಿರ್ಧರಿಸಲಾಗುತ್ತದೆ, ಅವನ ಉದ್ಯೋಗ ಮತ್ತು ಸಂಬಳದಿಂದಲ್ಲ!

ಸಂಬಂಧಗಳ ಅಡಿಪಾಯವನ್ನು ಗೌರವದಿಂದ ನಿರ್ಮಿಸಲಾಗುತ್ತದೆ. ಮತ್ತು ಅದು ಅಲುಗಾಡಿದಾಗ, ಆ ಸಂಬಂಧ ಎಷ್ಟೇ ದೊಡ್ಡದಾಗಿದ್ದರೂ, ಅದು ಕುಸಿಯುತ್ತದೆ!!

ತಮ್ಮ ಯಶಸ್ಸಿನ ಅಮಲಿನಲ್ಲಿ, ತಮ್ಮ ಜನರನ್ನು ಸಣ್ಣವರು ಎಂದು ಪರಿಗಣಿಸುವವರು, ಒಬ್ಬ ವ್ಯಕ್ತಿಯು ತನ್ನ ಸ್ಥಾನದಿಂದಲ್ಲ, ಬದಲಾಗಿ ಆಲೋಚನೆಯಿಂದ ಚಿಕ್ಕವರು ಎಂಬುದನ್ನು ನೆನಪಿನಲ್ಲಿಡಬೇಕು.

ಈ ಕಥೆಯ ಸಾರಾಂಶ ನಿಜವೆಂದು ಒಪ್ಪಿಕೊಂಡರೆ, ಇದನ್ನು ಹಂಚಿಕೊಳ್ಳಿ, ಇತರರಿಗೂ ತಿಳಿಸಿ. ಇದರಿಂದ ನಿಮ್ಮ ಅಕ್ಕಪಕ್ಕದಲ್ಲೇ ಇರಬಹುದಾದ 'ರಮೇಶ್' ರಂಥವರು ಮೌನವಾಗಿ ಕೊರಗುವುದಿಲ್ಲ,

# ನರ್ಸ್ ನಿಮಿಷಾ ಪ್ರಿಯಾಗೆ ಯಮಪಾಶದಿಂದ ಮುಕ್ತಿ ಸಿಕ್ಕಿತೇ?!

13 ☜

ಮೂಲದ ಬಿಲಿಯನೇರ್ ಎಂ.ಎ. ಯೂಸುಫ್ ಅಲಿ ಎಂಬ ವ್ಯಕ್ತಿ ತಾವು ನಿಮಿಷಾ ಪ್ರಿಯಾಳ ಪ್ರಾಣ ಪಕ್ಷಿ ಹಾರಿ ಹೋಗುವುದನ್ನು ತಪ್ಪಿಸಲು ಅಗತ್ಯವಿರುವ ಯಾವುದೇ ಹಣಕಾಸಿನ ಸಹಾಯವನ್ನು ನೀಡಲು ತಾವು ಸಿದ್ದ ಎಂದಿದ್ದು, ತಮ್ಮ ಕಡೆಯಿಂದ 'ಬ್ಲಡ್ ಮನಿ' ಯಾಗಿ ಸುಮಾರು 08 ಕೋಟಿ 60 ಲಕ್ಷ ರೂ ಕೊಡಲು ಸಿದ್ದವಾಗಿದ್ದಾರೆ! ಆದರೆ, ಮೃತ ವ್ಯಕ್ತಿಯ ಕುಟುಂಬದವರು ಈ ಪರಿಹಾರವನ್ನು ಪಡೆಯಲು ಸಿದ್ಧರಿಲ್ಲ!! ಅವರಿಗೆ ಸೇಡು ತೀರಿಸಿಕೊಳ್ಳುವುದಷ್ಟೇ ಮುಖ್ಯವಾದಂತಿದೆ. ಭಾರತ ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡು ನಿಮಿಷಾಳ ಬಿಡುಗಡೆಗೆ ಅವಿರತ ಪ್ರಯತ್ನ ನಡೆಸುತ್ತಿದೆ.

### ಕೊಲೆ ಪ್ರಕರಣದ ಹಿನ್ನೆಲೆ

ಕೇರಳದ ಪಾಲಕ್ಕಾಡ್ ಜಿಲ್ಲೆಯವರಾದ ನಿಮಿಷಾ ಪ್ರಿಯಾ, 2011ರಲ್ಲಿ ತನ್ನ ನರ್ಸಿಂಗ್ ತರಬೇತಿಯನ್ನು ಪೂರ್ಣಗೊಳಿಸಿ,ನಂತರ ಯಮೆನ್ಗೆ ತೆರಳಿದ್ದರು. ಅವರು ಅಲ್ಲಿ ದುಡಿದು ಕೂಲಿ ಕಾರ್ಮಿಕರಾದ ತಮ್ಮ ಪೋಷಕರಿಗೆ ಆರ್ಥಿಕ ಸಹಾಯ ಮಾಡುತ್ತ ಯಮೆನ್‌ನಲ್ಲಿ ನೆಲೆಸಿದ್ದರು. ಕಾಲಾನುಕ್ರಮದಲ್ಲಿ 2014 ರಲ್ಲಿ ತಾವೇ ಒಂದು ಸ್ವಂತ ಕ್ಲಿನಿಕ್ ನಡೆಸಿ ಹೆಚ್ಚಿನ ಸಂಪಾದನೆ ಮಾಡಲು ನಿರ್ಧರಿಸಿದ್ದರು.

ಆ ಸಂದರ್ಭದಲ್ಲಿ ಅವರಿಗೆ ಕ್ಲಿನಿಕ್ ಅನ್ನು ಪ್ರಾರಂಭಿಸಲು ಸಹಾಯ ಮಾಡುವುದಾಗಿ ಅವರ ಸಹಪಾಠಿ ತಲಾಲ್ ಮೆಹ್ದಿ ಭರವಸೆ ನೀಡಿದ್ದ, ಯಮೆನ್ 'ಬ್ಯುಸಿನೆಸ್ ಲಾ' ಪ್ರಕಾರ... ಅಲ್ಲಿ ವಿದೇಶಿಯರು ಬ್ಯುಸಿನೆಸ್ ಪ್ರಾರಂಭಿಸಬೇಕು ಅಂದ್ರೆ, ಸ್ಥಳೀಯರೊಂದಿಗೆ ಪಾಲುದಾರಿಕೆ ಮಾಡಿಕೊಳ್ಳಬೇಕಾಗುತ್ತದೆ! ಹೀಗಾಗಿ, ನಿಮಿಷಾ ಪ್ರಿಯಾ ತಲಾಲ್ ಮಹ್ದಿ ಜೊತೆ ಸ್ನೇಹ ಬೆಳೆಸಿ, ಆತನ ಸಹಾಯ ಪಡೆದುಕೊಂಡು, ಜೊತೆಗೆ ಒಡನಾಟ ಬೆಳೆಸಿಕೊಂಡು ಇಸವಿ 2015 ರಲ್ಲಿ 'ಸನಾ'ದಲ್ಲಿ ತನ್ನ ಕ್ಲಿನಿಕ್ ಪ್ರಾರಂಭಿಸಿದ್ದರು. ಮೊದಲಿಗೆ ಎಲ್ಲವೂ ಚೆನ್ನಾಗಿಯೇ ಇತ್ತು. ಕಾಲ ಕ್ರಮೇಣ ಹಣ ಕಾಸಿನ ವಿಚಾರದಲ್ಲಿ ಕಿತ್ತಾಟವಾಗಿ ಸ್ವಲ್ಪ ದಿನದಲ್ಲೇ ಅವರ ನಡುವೆ ಭಿನ್ನಾಭಿಪ್ರಾಯಗಳು ಹುಟ್ಟಿಕೊಂಡವು.



ಲೋಕಲ್ ಪ್ರಜೆ ಆಗಿದ್ದ ತಲಾಲ್ ಮೆಹ್ದಿ ನಿಮಿಷಾ ಪ್ರಿಯಾ ದೇಶ ಬಿಟ್ಟು ಹೋಗದಂತೆ ಅವಳ ವೀಸಾ ಪಾಸ್‌ಪೋರ್ಟ್ ಕಿತ್ತುಕೊಂಡಿದ್ದ ಎನ್ನಲಾಗಿದೆ! ಹೇಗಾದ್ರು ಮಾಡಿ ಆತನಿಂದ ತನ್ನ ವೀಸಾ ಪಾಸ್‌ಪೋರ್ಟ್ ಅನ್ನು ಪಡೆದುಕೊಂಡು ಭಾರತಕ್ಕೆ ಹಿಂತಿರುಗಲು ಸಾಕಷ್ಟು ಕಸರತ್ತು ನಡೆಸಿದ್ದಳು ಪ್ರಿಯಾ. ಆದರೆ, ತಲಾಲ್ ಜಗ್ಗಲಿಲ್ಲ, ನೊಂದು ಬೆಂದ ನಿಮಿಷಾ ಅಲ್ಲಿಂದ ತಪ್ಪಿಸಿಕೊಂಡು ಬರುವ ಭರದಲ್ಲಿ ಆತನಿಗೆ ಅಮಲಿನ ಡ್ರಗ್ ಚುಚ್ಚಿದ್ದಳು! ಅದು ಓವರ್ ಡೋಸ್ ಆಗಿ ಆತ ಸಾವನ್ನಪ್ಪಿದ್ದ!! ಈ ಪ್ರಕರಣ ಅಲ್ಲಿ ದೊಡ್ಡ ಇಶ್ಯೂ ಆಗಿ ಅಲ್ಲಿನ ಪೊಲೀಸರು ಕೊಲೆ ಕೇಸ್ ದಾಖಲಿಸಿಕೊಂಡು, ಏರ್‌ಪೋರ್ಟ್‌ನಲ್ಲಿ ನಿಮಿಷಾ ಪ್ರಿಯಾಳನ್ನು ಬಂಧಿಸಿದ್ದರು. ವಿಚಾರಣೆ ನಡೆಸಿದ್ದ ಯಮೆನ್ ಕೋರ್ಟ್ ಆಕೆಗೆ ಗಲ್ಲು ಶಿಕ್ಷೆ ವಿಧಿಸಿತ್ತು. ನತದೃಷ್ಟೆ ನಿಮಿಷಾ ಪ್ರಿಯಾ ಯಮೆನ್ ಜೈಲಿನಲ್ಲಿ ಕಳೆದ 8 ವರ್ಷಗಳಿಂದಲೂ ಕೊಳೆಯುತ್ತಿದ್ದಾಳೆ!

ಜುಲೈ 16ರಂದು ಅವಳಿಗೆ ಗಲ್ಲುಶಿಕ್ಷೆ ಇತ್ತು. ಭಾರತೀಯರ ಪ್ರಾರ್ಥನೆ ಯಿಂದ ಬಚಾವ್ ಆಗಿದ್ದಾಳೆ! ಇಲ್ಲಿ ಕೇರಳದಲ್ಲಿ ಅವಳ ತಂದೆ ತಾಯಿ ಬಂಧು ಬಳಗದವರು ಕಣ್ಣೀರು ಹಾಕುತ್ತಿದ್ದಾರೆ. ಇಷ್ಟು ವರ್ಷದಲ್ಲಿ ಪ್ರಿಯಾಳನ್ನು ಒಮ್ಮೆ ಮಾತ್ರ ನೋಡಿಕೊಂಡು ಬರುವ ಅದೃಷ್ಟ ಆಕೆಯ ತಾಯಿಗೆ ಮಾತ್ರ ದೊರಕಿತ್ತು! ಅದೂ ಕೇಂದ್ರ ಸರ್ಕಾರ ರಿಸ್ಕ್ ತೆಗೆದುಕೊಂಡು ವೀಸಾ ಪಾಸ್‌ಪೋರ್ಟ್ ಕೊಡಿಸಿ ಸಹಾಯ ಮಾಡಿದ್ದರಿಂದ ಇದು ಸಾಧ್ಯವಾಗಿತ್ತು.

ಅದರೀಗ, ಭಾರತ ಸರ್ಕಾರ ತಾನು ಮಾಡುವಷ್ಟು ಸಹಾಯ ಮಾಡಿದ್ದೇವೆ, ಇನ್ನೂ ಏನೂ ಮಾಡಲಿಕ್ಕೆ ಸಾಧ್ಯವಿಲ್ಲ... ಎನ್ನುತ್ತಿದೆ... ಭಾರತೀಯ ಮುಸ್ಲಿಂ ಸಂಘಟನೆಗಳು, ಶ್ರೀಮಂತರು, ಪ್ರಿಯಾಳನ್ನು ಉಳಿಸಿಕೊಳ್ಳುವ ಸಲುವಾಗಿ 'ಕಿಸ್ವಾಸ್' ನೀಡಲು ಮುಂದೆ ಬಂದಿದ್ದಾರೆ. ಆದರೆ, ಮೃತ ತಲಾಲ್ ಮೆಹ್ದಿ ಕುಟುಂಬದವರು ಪರಿಹಾರ ಬೇಡವೇ ಬೇಡ ಎನ್ನುತ್ತಿದ್ದಾರೆ! ಏಕೆಂದರೆ, ಸೇಡು ಒಂದೇ ಅವರ ಪರಮ ಗುರಿ....!!

ಸದ್ಯ, ನೇಣು ಶಿಕ್ಷೆ ರದ್ದಾಗಿದೆ ಎಂಬ ಸುದ್ದಿ ಮೊಳಗುತ್ತಿದೆ. ಆದರೆ, ಭಾರತವಾಗಲಿ, ಯೆಮೆನ್ ಆಗಲಿ, ಈ ಬಗ್ಗೆ ಇನ್ನೂ ಅಧಿಕೃತ ಸರ್ಕಾರಿ ದಾಖಲೆಯನ್ನು ಬಿಡುಗಡೆ ಮಾಡಿಲ್ಲ, ಅದೊಂದಾಗಿ ಬಿಟ್ಟರೆ ನಿಮಿಷಾ ಪ್ರಾಣ ಉಳಿದುಕೊಂಡಂತೆಯೇ. ಆಕೆಯ ಪ್ರಾಣಕ್ಕಾಗಿ ಭಾರತೀಯರಾದ ನಾವೆಲ್ಲ ಭಗವಂತನಲ್ಲಿ ಪ್ರಾರ್ಥಿಸೋಣ...

## ನಿಮ್ಮ ಸುತ್ತಮುತ್ತಲಿನ ಸುದ್ದಿ ಹಾಗೂ ಅನ್ಯಾಯ-ಭ್ರಷ್ಟಾಚಾರಗಳನ್ನು ತಿಳಿಸಿ!

ಕರ್ನಾಟಕ ರಾಜ್ಯದ ಮಹಾಜನತೆಗೆ ಇದೋ ಒಂದು ಸುವರ್ಣಾವಕಾಶ. ನಿಮ್ಮ ಸುತ್ತಮುತ್ತ ನಡೆಯುವ ಅನ್ಯಾಯ, ಅಕ್ರಮ, ಅನಾಚಾರ, ಭ್ರಷ್ಟಾಚಾರಗಳನ್ನು ಸಂಕಟ ಪಡುತ್ತಿದ್ದೀರಾ? ಹಾಗಾದರೆ; ಈ ಕೂಡಲೇ ಸವಿವರ ಸಮೇತ ಅವುಗಳನ್ನು ನಮ್ಮ ಕಛೇರಿಗೆ ಕಳುಹಿಸಿ! ನಿಮ್ಮ ಹೆಸರು, ವಿಳಾಸ, ಮೊಬೈಲ್ ನಂಬರ್ ಇತ್ಯಾದಿ ವಿವರಗಳನ್ನು ನಾವು ಅತ್ಯಂತ ಗೌಪ್ಯವಾಗಿಡುತ್ತೇವೆ. ಯಾವುದೇ ಕಾರಣಕ್ಕೂ ಅದನ್ನು ಬಹಿರಂಗಪಡಿಸುವುದಿಲ್ಲ. 'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಸುದ್ದಿ ಪ್ರಕಟಿಸುವ ಮೂಲಕ ಸಂಬಂಧಪಟ್ಟ ಇಲಾಖೆಗೆ ತಿಳಿಸಿ ಸೂಕ್ತ ಕಾನೂನು ಕ್ರಮ ಜರುಗಿಸಲು ಸೂಚಿಸುವ ಕೆಲಸ ಮಾಡುವ ಹೊಣೆ ನಮ್ಮದು.

ವಿಳಾಸ : ಪೊಲೀಸ್ ನ್ಯೂಸ್, ವಾರಪತ್ರಿಕೆ

ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ, ಬೆಂಗಳೂರು-560 079.

ದೂರವಾಣಿ : 080-23588510, ಮೊಬೈಲ್ : 9513892666

# ಬರಡಾಗಿದ್ದ ಕನ್ನಡ ಚಿತ್ರರಂಗಕ್ಕೆ ಭೋರ್ಗರೆದ ಮಳೆಯೇ 'ಸು ಫ್ರಮ್ ಸೋ'

ಹೌದು, ನನ್ನ ಶ್ರೀಮಂತ ಕನ್ನಡ ಚಿತ್ರರಂಗ ಇಂದು ಅಕ್ಷರಶಃ ಬಡವಾಗಿದೆ. ಕ್ಷಮಿಸಿ ನಾವೇ ಅದನ್ನು ಬಡವಾಗಿಸಿದ್ದೇವೆ. ನಟ, ನಟಿ, ನಿರ್ದೇಶಕ, ತಂತ್ರಜ್ಞರು ಮಾತ್ರವಲ್ಲ, ಈ ಸ್ಥಿತಿಗೆ ಪ್ರೇಕ್ಷಕ ಪ್ರಭುಗಳು, ಅಭಿಮಾನಿ ದೇವರುಗಳಾದ ನಾವು ಸಹಾ ಕಾರಣ ಎಂದರೇ ಖಡಾ ಖಂಡಿತವಾಗಿ ತಪ್ಪಾಗಲಾರದು. ಇತ್ತೀಚಿನ ಬೆಳವಣಿಗೆಗಳು, ಸ್ಟಾರ್ ನಟರ ನಡವಳಿಕೆಗಳು, ಚಿತ್ರರಂಗದಲ್ಲಿ ಅಂಬೆಗಾಲಿಡುತ್ತಿರುವವರ ವರ್ತನೆಗಳು, ನಟರ ಕೆಲ ಅಂಧಾಭಿಮಾನಿಗಳ ನಡೆದುಕೊಳ್ಳುತ್ತಿರುವ ರೀತಿ ಅಬ್ಬಬ್ಬಾ ಒಂದಾ, ಎರಡಾ...!!! ಸದ್ಯ ಕನ್ನಡ ಸಿನಿಮಾ ರಂಗದಲ್ಲಿ ಸಿನಿಮಾ ಒಂದು ಬಿಟ್ಟು ಮತ್ತೆಲ್ಲವೂ ಸದ್ದು ಮಾಡುತ್ತಿದೆ. ವರನಟ ಡಾ. ರಾಜ್


ವೈಶಾಲಿ ಮೇಡಂ




ಕುಮಾಮಾರ್, ಸಾಹಸಸಿಂಹ ವಿಷ್ಣುವರ್ಧನ್, ರೆಬೆಲ್ ಸ್ಟಾರ್ ಅಂಬರೀಶ್, ಕರಾಟೆ ಕಿಂಗ್ ಶಂಕರ್‌ನಾಗ್, ಟೈಗರ್ ಪ್ರಭಾಕರ್, ಪ್ರಣಯ ರಾಜ ಶ್ರೀನಾಥ್, ಕ್ರೇಜಿಸ್ಟಾರ್ ರವಿಚಂದ್ರನ್, ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್, ಪವರ್ ಸ್ಟಾರ್ ಪುನೀತ್, ಪುಟ್ಟಣ್ಣ ಕಣಗಾಲ್, ಚಿ. ಉದಯಶಂಕರ್, ಕಲ್ಪನಾ, ಆರತಿ, ಲೀಲಾವತಿ, ಅಶ್ವಥ್, ನಟ ಭಯಂಕರ ವಜ್ರಮುನಿ, ತೂಗದೀಪ ಶ್ರೀನಿವಾಸ್, ಸುಧೀರ್, ನರಸಿಂಹರಾಜು, ದ್ವಾರಕೀಶ್ ಅಬ್ಬಬ್ಬಾ ಒಬ್ಬರ, ಇಬ್ಬರ ಇಡೀ ಭಾರತೀಯ ಚಿತ್ರರಂಗವೇ ನಮ್ಮತ್ತ ಮುಖ ಮಾಡಿದ್ದ ಕಾಲಘಟ್ಟವೊಂದಿತ್ತು ಕನ್ನಡ ಸಿನಿರಂಗದ ಸುವರ್ಣಯುಗ. ಆದ್ರೆ ಇದೀಗ ವಾದ, ವಿವಾದಗಳೇ ಕನ್ನಡ ಚಿತ್ರರಂಗ ಅನ್ನುವಂತಾಗಿದೆ. ಬಹುಮುಖ್ಯವಾಗಿ ಇಲ್ಲಿ ಮನೆ ಯಜಮಾನನ ಕೊರತೆ ಎದ್ದು ಕಾಣುತ್ತಿದೆ. ಹೇಳುವವರು, ಕೇಳುವವರು ಇಲ್ಲದಂತಾಗಿದೆ. ಒಟ್ಟಿನಲ್ಲಿ ಕನ್ನಡ ಸಿನಿರಂಗ ಮೇಟಿ ಇಲ್ಲದೆ ಬರಡಾಗಿದೆ.

ಸದ್ಯ ಹೀಗೆ ಬರಡಾದ ಭೂಮಿಗೆ ತಂಪೆರೆದಿರುವುದು ಸು ಫ್ರಮ್ ಸೋ ಸಿನಿಮಾ. ಹೌದು ಯಾವುದೇ ಪ್ರಚಾರವಿಲ್ಲದೆ ಜನರ ಮನೆ, ಮನ ತಲುಪಿದ ಚಿತ್ರ ಸು ಫ್ರಮ್ ಸೋ. ನಾನು ಇಷ್ಟು ತಡವಾಗಿ ಇದರ ಬಗ್ಗೆ ಬರೆಯಲು ಕಾರಣ ಟಿಕೆಟ್ ಸಿಗದೇ ಇರುವುದು. ಬಹುತೇಕ ಕನ್ನಡದ ಎಲ್ಲಾ ಸಿನಿಮಾವನ್ನು ಥಿಯೇಟರ್ ನಲ್ಲೇ ನೋಡುತ್ತೇನೆ. ಆದ್ರೆ ಇತ್ತೀಚೆಗೆ ನಾನು ಥಿಯೇಟರ್ ಕಡೆ ಮುಖ ಮಾಡಿ ವರ್ಷಗಳೇ ಕಳೆದಿತ್ತು. ಇತ್ತೀಚೆಗೆ ನೂರಕ್ಕೆ ನೂರು ಸಿನಿಮಾ ನೋಡುವುದು ನನ್ನ ಮೆಚ್ಚಿನ ಡಿಆರ್‌ಸಿ ಮಲ್ಟಿಪ್ಲೆಕ್ಸ್‌ನಲ್ಲಿ ಮಾತ್ರ! ಇದಕ್ಕೆ ಕಾರಣ ಅದರ ಮಾಲೀಕರಾದ ವೈಶಾಲಿ ಮೇಡಂ ಹಾಗೂ ಹನುಮಂತು ಸರ್ ಅವರ ಪ್ರೀತಿ. ತುಂಬಿದ ಕೊಡ ತುಳುಕುವುದಿಲ್ಲ ಅನ್ನೋದಕ್ಕೆ ಇವರಿಬ್ಬರು ಜೀವಂತ ಉದಾಹರಣೆ. ಸಿನಿಮಾವನ್ನೇ **Passion** ಆಗಿಸಿಕೊಂಡ ಕುಟುಂಬವಿದು. ನಮ್ಮ ಮೈಸೂರಿನಲ್ಲಿ ದಶಕಗಳ ಕಾಲ ಮೈಸೂರಿಗರಿಗೆ ಸಿನಿ ರಸದೌತಣ ಉಣಬಡಿಸಿದ ಹಾಗೂ ಇತಿಹಾಸದಲ್ಲಿ ಒಂದೇ ಒಂದು ಬ್ಲ್ಯಾಕ್ ಟಿಕೆಟ್ ಮಾರಲು ಅವಕಾಶ ನೀಡದ ನಮ್ಮ ಹೆಮ್ಮೆಯ ಶಾಂತಲ ಚಿತ್ರಮಂದಿರವನ್ನು ಕಟ್ಟಿ ಬೆಳಸಿ, ನಡೆಸಿದ ಕುಟುಂಬದವರು ಇವರು. ಅವರ ಪ್ರೀತಿ, ವಿಶ್ವಾಸ ನನ್ನನ್ನು, ನನ್ನ ಕುಟುಂಬದವರನ್ನು ಮಾತ್ರವಲ್ಲ, ನನ್ನ ಸ್ನೇಹಿತರನ್ನು ಸೂಜಿಗಲ್ಲಿನಂತೆ ಡಿಆರ್‌ಸಿಯತ್ತ ಸೆಳೆಯುತ್ತದೆ. ಡಿಆರ್‌ಸಿಯಲ್ಲಿ ಟಿಕೆಟ್‌ಗಳು ಬುಕ್ ಮೈ ಶೋ, ಆನ್‌ಲೈನ್‌ಗಿಂತ ಹೆಚ್ಚು ವೈಶಾಲಿ ಮೇಡಂ ಫೋನ್ ಮೂಲಕ ಬುಕ್ ಆಗುತ್ತೇ. ಯಾರು ಯಾವಾಗ ಫೋನ್ ಮಾಡಿದ್ರು ಬೇಸರಿಸಿಕೊಳ್ಳದೆ ಟಿಕೆಟ್ ಬುಕ್ ಮಾಡಿ ಟಿಕೆಟ್ ಮಾಹಿತಿ ಮೆಸೇಜ್ ಮಾಡ್ತಾರೆ ಮೇಡಂ. ನೀವು ನೆಕ್ಸ್ಟ್ ಡಿಆರ್‌ಸಿಗೆ ಹೋದಾಗ ಗಮನಿಸಿ ಒಬ್ಬರು ನಿಂತು ಅವರ ಸುತ್ತ ಸಾಕಷ್ಟು ಜನ ನಿಂತು ಮಾತಾಡ್ತಾ ಇದ್ರೆ ಅಥವಾ ಅವರ ಬಳಿ ಬಂದು ಅದೇ ಶುಭ ಕಾರ್ಯಕ್ಕೆ ಹೋದಾಗ ಮನೆಯವರನ್ನು ಹುಡುಕಿ ಮಾತನಾಡಿಸುವ ರೀತಿ ಯಾರಾದರೂ ಮಾತನಾಡಿಸ್ತಾ ಇದ್ರೆ ಅದು ಖಂಡಿತಾ ವೈಶಾಲಿ ಮೇಡಂ ಹಾಗೂ ಹನುಮಂತು ಸರ್ ಆಗಿರ್ತಾರೆ. ಅಷ್ಟು ಪ್ರೀತಿ ವಿಶ್ವಾಸ ಅವರದ್ದು. ಇಲ್ಲಿ ಯಾಕೆ ನಾನು ಅವರ ವಿಚಾರ ಹೇಳಿದೆ ಅಂದ್ರೆ ಡಿಆರ್‌ಸಿ ಆರಂಭವಾದ ದಿನದಿದಂದ ಅದು ಯಾವುದೇ ಸಿನಿಮಾ ಆಗಿರಲಿ. ಎಷ್ಟೇ ಹೌಸ್‌ಫುಲ್ ಆಗಿರಲಿ. ಕಡೆಗೆ ಎರಡು ಚೇರ್ ಹಾಕಿಯಾದರೂ ನನಗೆ ಸಿನಿಮಾ ತೋರಿಸಿದವರು ವೈಶಾಲಿ ಮೇಡಂ. ನನ್ನ ಸ್ನೇಹಿತರಿಗೆ, ಪರಿಚಯದವರಿಗೆ ಯಾವುದೇ ಸಂದರ್ಭದಲ್ಲೂ ಟಿಕೆಟ್ ನೀಡಿದವರು. ಆದ್ರೆ, ಇದೇ ಮೊದಲ ಬಾರಿಗೆ ನನ್ನ ಸ್ನೇಹಿತರಿಗೆ ಮಾತ್ರವಲ್ಲ, ನನಗೂ ಸಹಾ ಟಿಕೆಟ್ ಇಲ್ಲ, ಮೂರು ದಿನ ಬಿಟ್ಟು ಒಟ್ಟಿಗೆ ನೋಡೋಣ. ನಾನು ಹನುಮಂತು ಇನ್ನೂ ಸಹಾ ನೋಡಿಲ್ಲ ಅಂದು ಬಿಟ್ರು. ಅಷ್ಟು ಡಿಮ್ಯಾಂಡ್ ಸಿನಿಮಾಗೆ ಇತ್ತು. ಈಗಲೂ ಇದೆ.


ನಿರ್ದೇಶಕ ಜೆ.ಪಿ. ತುಮಿನಾಡು


ನಾಯಕ ಶನಿಲ್ ಗೌತಮ್

ಸಿನಿಮಾ ಇಷ್ಟೆಲ್ಲಾ ಬುಲ್ಡ್ ಅಪ್ ತೆಗೆದುಕೊಂಡ ಮೇಲೆ ನೋಡದೆ ಇರಲು ಆಗುತ್ತಾ. ಸರಿ ಒಂದು ಕೈ ನೋಡಿಯೇ ಬಿಡೋಣ ಅಂತಾ ಹೊರಟೆ. ಇನ್ನು ಪುಣ್ಯಕ್ಕೆ ಸಿನಿಮಾ ಆರಂಭದಿಂದ ಅಂತ್ಯದವರೆಗೂ ನನ್ನ ಬಾಳ ಸಂಗಾತಿ ಜಂಗಮವಾಣಿ ಹೆಚ್ಚು ತೊಂದರೆ ಕೊಡಲಿಲ್ಲ. ಹೀಗಾಗಿ 100% ಪೈಸಾ ವಸೂಲ್. ಈ ಸಿನಿಮಾ ಪ್ರತಿಕ್ರಿಯೆ ನೋಡಿದ ಮೇಲೆ ಜನರಿಗೆ ಸಿನಿಮಾದಿಂದ ಬೇಕಾಗಿರುವುದು ಮೂರು ಗಂಟೆಗಳ ಕಾಲದ ಒಂದು ಅದ್ಭುತ ಅನುಭವವೇ ಹೊರತು ಬೇರೆ ಏನು ಅಲ್ಲ ಅನ್ನೋದು ಮತ್ತೊಮ್ಮೆ ಸಾಬೀತಾಗಿದೆ. ತಮ್ಮ ದಿನ ನಿತ್ಯದ ಯಾಂತ್ರಿಕ ಬದುಕಿನಿಂದ ಕೊಂಚ ಬ್ರೇಕ್ ಬಯಸಿ ಬಂದವರಿಗೆ ಈ ಚಿತ್ರ ಅದ್ಭುತ ಮನರಂಜನೆ ನೀಡುತ್ತಿದೆ. ನಿಮಗೆ ಅಚ್ಚರಿಯಾಗಬಹುದು. ಸಿನಿಮಾದಲ್ಲಿ ಯಾವುದೇ ಸ್ಟಾರ್‌ಗಳಿಲ್ಲ, ಸುರ ಸುಂದರ ಹೀರೋ, ಸೆಕ್ಸಿ ಹೀರೋಯಿನ್ ಇಲ್ಲ, ಅದ್ಭುತ ಆ್ಯಕ್ಷನ್‌ಗಳಿಲ್ಲ, ಡ್ಯುಯೆಟ್ ಸಾಂಗ್, ಡಬಲ್ ಮೀನಿಂಗ್ ಡೈಲಾಗ್‌ಗಳಿಲ್ಲ, ಐಟಂ ಸಾಂಗ್‌ಗಳಿಲ್ಲ, ವಿದೇಶದಲ್ಲಿ ಶೂಟ್ ಮಾಡಿಲ್ಲ, ಸಿನಿಮಾ ಪೂರ್ತಿ ಇರುವುದು ಕರಾವಳಿಯ ಒಂದೆರೆಡು ಗ್ರಾಮಗಳು, ಅಲ್ಲಿನ ಮನೆಗಳು, ಅಂಗಡಿಗಳು, ಒಂದೆರಡು ದೇಗುಲಗಳು ಅಷ್ಟೇ. ಅದನ್ನೇ ಅಚ್ಚುಕಟ್ಟಾಗಿ ಅದ್ಭುತವಾಗಿ ಕಟ್ಟಿಕೊಡುವಲ್ಲಿ ಸು ಫ್ರಮ್ ಸೋ ತಂಡ ಯಶಸ್ವಿಯಾಗಿದೆ.

ಸಿನಿಮಾದಲ್ಲಿ ಎಲ್ಲವೂ ಇದೆ. ಜೊತೆಗೆ ಅದ್ಭುತವಾದ ಸಾಮಾಜಿಕ ಕಳಕಳಿ ಹಾಗೂ ಸಾಮಾಜಿಕ ಸಂದೇಶವಿದೆ. ಈ ರಾಕೆಟ್ ಯುಗದಲ್ಲಿ, ಚಂದ್ರನ ಅಂಗಳ, ಮಂಗಳನ ತೆಕ್ಕೆಗೆ ತಲುಪುವ ಕಾಲಘಟ್ಟದಲ್ಲೂ ನಮ್ಮ ನಂಬಿಕೆಗಳು ಗಟ್ಟಿಯಾಗಿವೆ ಅಂದರೆ ಅದಕ್ಕೆ ಕಾರಣ ಒಂದು ಅಗೋಚರ ಶಕ್ತಿ. ನಮ್ಮ ಎಲ್ಲಾ ಆಚರಣೆಗಳ ಹಿಂದೆ ವೈಜ್ಞಾನಿಕ ಕಾರಣವಿದೆ. ಜೊತೆಗೆ ಏನನ್ನೇ ಮಾಡಿ ನಂಬಿಕೆ, ಶ್ರದ್ಧೆ, ವಿಶ್ವಾಸದಿಂದ, ಮಾಡಿದರೆ ಅದರ ಫಲಿತಾಂಶ ಖಂಡಿತವಾಗಿ ಒಳ್ಳೆಯದೇ ಆಗಿರುತ್ತದೆ ಅನ್ನೋದಕ್ಕೆ ಬೆಸ್ಟ್ ಎಕ್ಸಾಂಪಲ್ ಸು ಫ್ರಮ್ ಸೋ ಸಿನಿಮಾದ ಕಥೆ. ಸಿನಿಮಾ ಒಂದು ಊರಿನಲ್ಲಿ ನಡೆಯುವ ಕಥೆಯನ್ನೊಳಗೊಂಡಿದೆ. ಊರಿನ ಯುವಕನೊಬ್ಬ ತಾನು ಆಕಸ್ಮಿಕವಾಗಿ ಮಾಡಿದ ತಪ್ಪು ಮುಚ್ಚಿಕೊಳ್ಳಲು ತನ್ನ ಮೇಲೆ ಪ್ರೇತ ಬಂದು ತಪ್ಪು ಮಾಡಿಸಿತು ಅಂತಾ ಹೇಳಿ ತಪ್ಪಿಸಿಕೊಳ್ಳಲು ಯತ್ನಿಸಿ, ತಾನೇ ತನ್ನ ಸುಳ್ಳಿಗೆ ಸಾಕಷ್ಟು ಕಷ್ಟಗಳನ್ನು ಅನುಭವಿಸಿ. ಪಡಬಾರದ ಪಾಡು ಪಟ್ಟು ಕೊನೆಗೆ ಒಂದು ಒಳ್ಳೆಯ ಸಾಮಾಜಿಕ ಕಳಕಳಿಯ ಸಂದೇಶದೊಂದಿಗೆ ಚಿತ್ರ ಕೊನೆಯಾಗುತ್ತದೆ.

ಗ್ರಾಮದಲ್ಲೊಬ್ಬ ಹೀರೋ ಗ್ರಾಮದ ಎಲ್ಲವೂ ಆತನಿಂದಲೇ ಆಗಬೇಕು. ಆತನಿಗೆ ಜೈಕಾರ ಹಾಕುವ ಒಂದಷ್ಟು ಮಂದಿ. ಅವರಿಗೆ ಅವನೇ ಎಲ್ಲಾ. ಇದನ್ನು ನೋಡಿ ಉರಿದುಕೊಳ್ಳುವ ಒಂದಷ್ಟು ಮಂದಿ. ಹೀಗೆ ಸಾಗುವ ಸಿನಿಮಾದಲ್ಲಿ ಪ್ರತಿ ಫ್ರೇಮ್ನಲ್ಲೂ ಹಾಸ್ಯವಿದೆ. ಎಲ್ಲಕ್ಕಿಂತ ನನಗೆ ತುಂಬಾ ಇಷ್ಟವಾಗಿದ್ದು ಇಲ್ಲದ ದೆವ್ವ ಭೂತಗಳ ನಂಬಿಕೆ ಜನರ ಮನಸಲ್ಲಿ ಯಾವ ರೀತಿ ಮೂಡುತ್ತಾ ಹೋಗುತ್ತದೆ ಅನ್ನೋದನ್ನು ಚೆನ್ನಾಗಿ ತೋರಿಸಲಾಗಿದೆ. ಅದಕ್ಕೆ ಬೇಕಾದ ಪರಿಸ್ಥಿತಿಗಳು ನಮ್ಮ ಸುತ್ತ ಮುತ್ತ ಹೇಗೆ ನಡೆಯುತ್ತದೆ. ಇಲ್ಲದನ್ನೂ ಸಹಾ ಇದೆ ಎಂದು ನಂಬವಂತಹ ವಾತಾವರಣಗಳು ಹೇಗೆ ಸೃಷ್ಟಿಯಾಗಿ ಬಿಡುತ್ತವೆ ಅನ್ನೋ ವಿಚಾರವನ್ನು ಎಳೆ ಎಳೆಯಾಗಿ ತೋರಿಸಿ ಮನದಟ್ಟು ಮಾಡಲಾಗಿದೆ. ಸಿನಿಮಾದಲ್ಲಿ ಖಂಡಿತಾ ಲಾಜಿಕ್ ಇದೆ ಅದೇ ಕಾರಣಕ್ಕೆ ಮ್ಯಾಜಿಕ್ ಆಗುತ್ತಿದೆ. ಇನ್ನು ದೆವ್ವ ಬಿಡಿಸಲು ಬರುವ ಸ್ವಾಮೀಜಿಯ ಪಾತ್ರದ ವಾಸ್ತವತೆ ನಿಜಕ್ಕೂ ಅದ್ಭುತ. ಗಲ್ಲಿಗೊಬ್ಬರಂತೆ ಈ ರೀತಿಯವರು ಹೇಗೆ ಜನರನ್ನು ಯಾಮಾರಿಸುತ್ತಾರೆ ಅನ್ನೋದರ ಚಿತ್ರಣ ನಿಮಗೆ ಸಿನಿಮಾದಲ್ಲಿ ಕಾಣ ಸಿಗುತ್ತದೆ.


ನಾಯಕಿ ಸಂಧ್ಯಾ ಅರಕೆರೆ

ಚಿತ್ರದ ಕ್ಲೈಮ್ಯಾಕ್ಸ್ ಖಂಡಿತಾ ಎಲ್ಲರಿಗೂ ಇಷ್ಟವಾಗುತ್ತದೆ. ಹಾಸ್ಯದ ನಡುವೆಯೇ ಒಂದು ಸಾಮಾಜಿಕ ಪಿಡುಗು ಹಾಗೂ ಒಂಟಿಯಾಗಿ ಬದುಕುವ ಒಬ್ಬ ಮಹಿಳೆಯ ಪರಿಸ್ಥಿತಿ, ವೇದನೆ, ರೋಧನೆ, ಮನಸ್ಥಿತಿಯನ್ನು ಜನರಿಗೆ ಮನಮುಟ್ಟುವಂತೆ ತೋರಿಸುವುದು ಮಾತ್ರವಲ್ಲ, ಈ ಬಗ್ಗೆ ಮರುಗುವಂತೆ ಹಾಗೂ ಗಂಭೀರವಾಗಿ ಚಿಂತಿಸುವಂತೆ ಮಾಡಿದೆ. ಛೇ ಅಂತಾ ತಮ್ಮ ಮನೆ ಮಗಳಿಗೆ ಈ ರೀತಿ ಆಗಿದೆಯೇನೋ ಅಂತಾ ಫೀಲ್ ಮಾಡುವಂತೆ ಮಾಡುವಲ್ಲಿ ಸಿನಿಮಾ ಯಶಸ್ವಿಯಾಗಿದೆ.

ಸಿನಿಮಾದ ರವಿಯಣ್ಣನ ಪಾತ್ರದಿಂದ ಹಿಡಿದು ಆತನ ಸ್ನೇಹಿತರು, ಗ್ರಾಮದ ಯುವಕರು, ಮಹಿಳೆಯರು, ಸ್ವಾಮೀಜಿ, ಭಾನು ಎಲ್ಲರೂ ಪಾತ್ರಕ್ಕೆ ಜೀವ ತುಂಬುವಲ್ಲಿ ಯಶಸ್ವಿಯಾಗಿದ್ದಾರೆ. ಕ್ಯಾಮೊ ಕೈ ಚಳಕ, ಸಂಗೀತ ಹಿತವಾಗಿ ಮಿತವಾಗಿದೆ. ಇನ್ನು ಭಾವನ ಪಾತ್ರಧಾರಿಯಂತೂ ಎಕ್ಸ್‌ಟ್ರಾರ್ಡನರಿ. ಖಡಾಖಂಡಿತವಾಗಿ ಪ್ರತಿ ಗ್ರಾಮದಲ್ಲಿ ಆ ರೀತಿಯ ಒಬ್ಬರು ಇದ್ದೇ ಇರುತ್ತಾರೆ. ಭಾವ ಬಂದ ಹಾಡು ಮತ್ತಷ್ಟು ಇರಬೇಕಿತ್ತು ಅನಿಸದ ಇರಲಾರದು. ಸಿನಿಮಾದಲ್ಲಿ ಕರಾವಳಿ ಜನರ ಭಾಷೆ, ಸೊಗಡು, ಪ್ರೀತಿ, ಕೋಪ ಸಿನಿಮಾದ ಕಣ ಕಣದಲ್ಲೂ ಹಾಸುಹೊಕ್ಕಿದೆ. ಸು ಫ್ರಮ್ ಸೋ ಅಂದ್ರೆ ಸುಲೋಚನ ಫ್ರಮ್ ಸೋಮೇಶ್ವರ ಮನರಂಜನೆಯ ಒಂದು ಕಂಪ್ಲೀಟ್ ಪ್ಯಾಕೇಜ್. ಅದಕ್ಕೇ ನಾನು ಮೊದಲೇ ಹೇಳಿದ್ದು ಈ ಚಿತ್ರ ಬರಗಾಲದಲ್ಲಿ ಬರಡಾಗಿದ್ದ ಕನ್ನಡ ಸಿನಿರಂಗಕ್ಕೆ ಭೋರ್ಗರೆಯುವ ಮಳೆಯಾಗಿ ಬಂದಿದೆ. ಒಟ್ಟಾರೆ ಮನೆ ಮಂದಿಯೆಲ್ಲಾ ಯಾವುದೇ ಮುಜುಗರವಿಲ್ಲದೆ ಒಟ್ಟಾಗಿ ಕುಳಿತು ನೋಡಬಹುದಾದ ಒಂದು ಅಚ್ಚುಕಟ್ಟಾದ ಸಿನಿಮಾ. ಇಂತಹ ಸಿನಿಮಾಗಳು ಮತ್ತಷ್ಟು ಬರಲಿ. ಪಾತಾಳಕ್ಕೆ ಸಾಗಿರುವ ಕನ್ನಡ ಚಿತ್ರರಂಗ ಮತ್ತೆ ಮೇಲೇಳಲಿ ಅನ್ನೋ ಆಶಯದೊಂದಿಗೆ.... ☯

## ಎರಡೇ ವಾರಕ್ಕೆ 50 ಕೋಟಿ ಕ್ಲಬ್!

ಚಂದನವನದಲ್ಲಿ ಬಿರುಗಾಳಿ ಬೀಸಲು ಕಾರಣವಾಗಿರುವ, ರಾಜ್ ಬಿ. ಶೆಟ್ಟಿ ನಿರ್ಮಾಣದ ಸು ಫ್ರಮ್ ಸೋ 13ನೇ ದಿನದ ಹೊತ್ತಿಗೆ 50 ಕೋಟಿ ರೂಪಾಯಿ ಕ್ಲಬ್ ಸೇರಿದೆ. ಅವರು ಈ ಚಿತ್ರದಿಂದ ದೊಡ್ಡ ಗೆಲುವು ಕಂಡಿದ್ದಾರೆ. ನಟ,ನಿರ್ದೇಶಕ ಜೆ.ಪಿ. ತುಮಿನಾಡ್ ಮೊದಲ ಪ್ರಯತ್ನದಲ್ಲೇ ಭರ್ಜರಿ ಗೆಲುವು ಸಾಧಿಸಿದ್ದಾರೆ. ನಗೆಗಡಲಿನಲ್ಲಿ ತೇಲಿಸುತ್ತಾ ಸಮಾಜಕ್ಕೆ ಒಂದೊಳ್ಳೆ ಸಂದೇಶ ಕೊಡುವ ಸು ಫ್ರಮ್ ಸೋ ಬಿಡುಗಡೆ ಆದ ಮೊದಲ ದಿನ ಕಲೆಕ್ಷನ್ ಮಾಡಿದ್ದು ಕೇವಲ 78 ಲಕ್ಷ ರೂಪಾಯಿ! ಸಿನಿಮಾ ನೋಡಿದ ಜನ ಸಖತ್ತಾಗಿದೆ ಎಂದು ಮೌತ್ ಪಬ್ಲಿಸಿಟಿ ಮಾಡಿದ ಕೂಡಲೇ ಸಿನಿಮಾಗೆ ಶೋಗಳ ಸಂಖ್ಯೆ ಹೆಚ್ಚಿತು. ಮತ್ತು 150 ಟಾಕೀಸ್‌ನಲ್ಲಿದ್ದ ಸಿನಿಮಾ 350 ಟಾಕೀಸ್‌ನಲ್ಲಿ ಬಿತ್ತು!

ಜುಲೈ 27ರಿಂದ ಆಗಸ್ಟ್ 5ರವರೆಗೆ ಪ್ರತಿದಿನ ನಿರಂತರವಾಗಿ 3 ಕೋಟಿ ರೂಪಾಯಿ ಕಲೆಕ್ಷನ್ ಮಾಡಿರುವುದು ಚಿತ್ರದ ಹೆಚ್ಚುಗಾರಿಕೆ! ಆಗಸ್ಟ್ 6ರ ಭಾನುವಾರ ಆರೂವರೆ ಕೋಟಿ ರೂಪಾಯಿ ಕಲೆಕ್ಷನ್ ಮಾಡಿದೆ! ಈಗಿನ ಕನ್ನಡ ಸಿನಿಮಾ ನೋಡಲು ಪ್ರೇಕ್ಷಕರಿಲ್ಲ ಎಂದು ಬೇಸರ ಪಟ್ಟುಕೊಳ್ಳುತ್ತಿದ್ದವರು, ಈಗ ಟಿಕೆಟ್ ಸಿಗುತ್ತಿಲ್ಲ ಎಂದು ಒದ್ದಾಡುವ ಸ್ಥಿತಿ ನಿರ್ಮಾಣ ಆಗಿದೆ!! ಸು ಫ್ರಮ್ ಸೋ ಸಿನಿಮಾ ಈವರೆಗೆ 55 ಕೋಟಿ ರೂಪಾಯಿಗೂ ಅಧಿಕ ಕಲೆಕ್ಷನ್ ಮಾಡಿದೆ ಎಂದು **sacnilk** ವರದಿ ಹೇಳಿದೆ. ಕನ್ನಡ ಒಂದರಿಂದಲೇ ಚಿತ್ರಕ್ಕೆ ಸರಿ ಸುಮಾರು 50 ಕೋಟಿ ರೂಪಾಯಿ ಗ್ರಾಸ್ ಕಲೆಕ್ಷನ್ ಆಗಿದೆ. ವಿದೇಶದಿಂದ ಸಿನಿಮಾಗೆ 4 ಕೋಟಿ ರೂಪಾಯಿ ಹರಿದು ಬಂದಿದೆ. ಮಲಯಾಳಂ ಭಾಷೆಯಿಂದ 1.35 ಕೋಟಿ ರೂಪಾಯಿ ಗಳಿಕೆ ಆಗಿದೆ. ಸಿನಿಮಾದ ಒಟ್ಟಾರೆ ಕಲೆಕ್ಷನ್ ಎಷ್ಟಾಗುತ್ತದೆ ಎಂಬ ಕುತೂಹಲ ಮೂಡಿದೆ. ಸು ಫ್ರಮ್ ಸೋ ಸಿನಿಮಾ ನೋಡಿದ ಅನೇಕರು ಮೆಚ್ಚಿಕೊಂಡಿದ್ದಾರೆ. ಹಲವರು ಎರಡರಿಂದ ಮೂರು ಬಾರಿ ಸಿನಿಮಾ ವೀಕ್ಷಿಸಿ ಬಂದಿದ್ದಾರೆ. ಈ ಚಿತ್ರದಿಂದ ನಿರ್ಮಾಪಕರು ಜಾಕ್ ಪಾಟ್ ಹೊಡೆದ್ದಾರೆ! ಸದ್ಯ, 'ಸು ಫ್ರಂ ಸೋ' 100 ಕೋಟಿ ಕ್ಲಬ್‌ನತ್ತ ಸಾಗುತ್ತಿದೆ! ☯

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 10.8.2025

# ಫಿಲ್ಮ್ ಚೇಂಬರ್ ಅಧ್ಯಕ್ಷರ ಚಿತ್ರಮಂದಿರಗಳಲ್ಲೇ 'ಕೂಲಿ' ಲೂಟಿ!


ತಮಿಳ್ ಸೂಪರ್ ಸ್ಟಾರ್ ರಜನಿಕಾಂತ್ – ಲೋಕೇಶ್ ಕನಗರಾಜ್ ಜುಗಲ್ಬಂದಿಯ ಮೊದಲ ಚಿತ್ರ 'ಕೂಲಿ' ನಾಳೆ ಆಗಸ್ಟ್ 14 ನೇ ತಾರೀಖು ರಿಲೀಸ್ ಆಗುತ್ತಿದೆ. ಈ ಸಿನಿಮಾಗಾಗಿ ವಿಶ್ವದಾದ್ಯಂತ ಇರುವ ರಜನಿ ಫ್ಯಾನ್ಸ್ ಕಾದು ನಿಂತಿದ್ದಾರೆ. ವಾರದ ಮೊದಲೇ ಅಡ್ವಾನ್ಸ್ ಬುಕಿಂಗ್ ಓಪನಿಂಗ್ ಆಗಿದೆ! ಆದರೆ ಟಿಕೆಟ್ ಬೆಲೆ ಗಗನ ಮುಟ್ಟಿದ್ದು, ಬಡ ಅಭಿಮಾನಿಗಳಿಗೆ ಶಾಕ್ ಹೊಡೆಸಿದೆ!! ನಾರ್ಮಲ್ ಶೋ ರೂ. 400, 500 ಇದ್ದರೆ, ಮಧ್ಯರಾತ್ರಿ ಮತ್ತು ಬೆಳಗಿನ ಜಾವ ಇಟ್ಟಿರೋ ಫ್ಯಾನ್ಸ್ ಶೋ ರೂ. 2000 ಫಿಕ್ಸ್ ಆಗಿದೆ!!!



ಕೆಲವು ದಿನಗಳ ಹಿಂದಷ್ಟೇ ಕರ್ನಾಟಕ ಸರ್ಕಾರ ರಾಜ್ಯದಲ್ಲಿ ಏಕ ರೀತಿಯ ಟಿಕೆಟ್ ದರ ವಿಧಿಸುವುದಾಗಿ ಆದೇಶ ಹೊರಡಿಸಿತ್ತು. ಯಾರದ್ದಾದರೂ ಆಕ್ಷೇಪ ಇದ್ದರೆ 15 ದಿನಗಳ ಒಳಗೆ ಸಲ್ಲಿಸಿ ಅಂತಲೂ ಹೇಳಿತ್ತು. ಯಾರು ಏನು ಆಕ್ಷೇಪ ಸಲ್ಲಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ದಿ. ಜಯಲಲಿತ ಅವರಿಗಿದ್ದ 'ಗಂಡೆದೆ' ಈಗಿನ ಗಂಡಸರಿಗೂ ಇದ್ದಂತಿಲ್ಲ! ಪ್ರಸ್ತುತ ತಮಿಳುನಾಡು ಆಂಧ್ರದಲ್ಲೂ ಕೂಡ ಟಿಕೆಟ್ ದರ ರೂ. 200 ದಾಟಿಲ್ಲ! ಇಲ್ಲಿ ನೋಡಿದ್ರೆ ಪರ ಭಾಷಾ ಸಿನಿಮಾಗಳಿಗೆ ರೂ. 2000 ವಸೂಲಿ ಮಾಡುತ್ತಾರೆ! ಇಲ್ಲಿ ಸುಲಿಗೆಕೋರರು ಯಾರು? ನಮ್ಮವರೇ!! ಇವರು ನೆಟ್ಟಗಿದ್ರೆ ನೆರೆ ಹೊರೆ ಮಂದಿ ಏನು ಮಾಡ್ತಾರೆ ಹೇಳಿ?!

ಇಲ್ಲಿ ಟಿಕೆಟ್ ಬೆಲೆ ಕಡಿಮೆ ಮಾಡಬೇಕು ಅಂತ ಹೋರಾಟ ಮಾಡುತ್ತಿದ್ದವರೇ ತಮ್ಮ ಥಿಯೇಟರ್‌ಗಳಲ್ಲಿ ಬೆಲೆಯನ್ನು ಏರಿಕೆ ಮಾಡಿದ್ದಾರೆ. ಅದರಲ್ಲಿಯೂ ಕರ್ನಾಟಕ ಫಿಲ್ಮ್ ಚೇಂಬರ್‌ನ ಹಾಲಿ ಅಧ್ಯಕ್ಷ ನರಸಿಂಹಲು ಅವರ ಚಿತ್ರಮಂದಿರಗಳಲ್ಲಿ ರೂ. 500, 1000 ಲೆಕ್ಕಕ್ಕೆ ಇಲ್ಲಾ!

ಇದು ಚಿತ್ರರಂಗದ ಹಲವು ಮಂದಿಯ ಕಣ್ಣುಗಳನ್ನು ಕೆಂಪಾಗಿಸಿವೆ. ಇಷ್ಟಕ್ಕೂ ಫಿಲ್ಮ್ ಚೇಂಬರ್ ಅಧ್ಯಕ್ಷರ ಒಡೆತನ ಚಿತ್ರಮಂದಿರಗಳು ಯಾವುವು ಗೊತ್ತೇ? ಬೆಂಗಳೂರಿನ ಉತ್ತರಹಳ್ಳಿಯಲ್ಲಿರುವ ವೈಭವಿ, ವೈಷ್ಣವಿ ಹಾಗೂ ಸಿಂಗಾಪುರದಲ್ಲಿರೋ ವೈನಿಧಿ. ಈ ಮೂರು ಚಿತ್ರಮಂದಿರಗಳಿಗೆ ನರಸಿಂಹಲು ಅವರೇ ಮಾಲೀಕರು. ಈ ಮೂರೂ ಚಿತ್ರಮಂದಿರಗಳಲ್ಲಿ 'ಕೂಲಿ' ಸಿನಿಮಾದ ಟಿಕೆಟ್ ಬೆಲೆಯನ್ನು ಗಗನಕ್ಕೇರಿಸಲಾಗಿದೆ. ವೈಭವಿ-ವೈಷ್ಣವಿ ರೂ. 800, 500 (ಫ್ಯಾನ್ಸ್ ಶೋ) ರೂ. 300, 250 (ನಾರ್ಮಲ್ ಶೋ) ವೈನಿಧಿ ರೂ. 500, 400 (ಫ್ಯಾನ್ಸ್ ಶೋ) ರೂ. 250, 200 (ನಾರ್ಮಲ್ ಶೋ) ದರವಿದೆ.




ಬೆಂಗಳೂರಿನಲ್ಲಿ ಇದುವರೆಗೂ ದುಬಾರಿ ಚಿತ್ರಮಂದಿರ ಎನಿಸಿಕೊಂಡಿರೋದು ಎಂ.ಜಿ. ರೋಡ್‌ನಲ್ಲಿರೋ ಸಿಂಫೋನಿ (ಸ್ವಾಗತ್ ಶಂಕರ್‌ನಾಗ್).

ಈ ಸಿನಿಮಾದ ಫ್ಯಾನ್ ಶೋ ಬೆಳಗ್ಗೆ 6.30ಕ್ಕೆ ಆರಂಭ ವಾಗಲಿದೆ. ಈ ಶೋನ ಗೋಲ್ಡನ್ ರಿಕ್ಲೈನರ್ ಬೆಲೆ 2000, ಗೋಲ್ಡ್ ಕ್ಲಾಸ್ 1500, ಸಿಲ್ವರ್ ಕ್ಲಾಸ್ 1000, ಲಾಂಜರ್‌ಗೆ 1000 ರೂಪಾಯಿಯನ್ನು ನಿಗಧಿ ಮಾಡಲಾಗಿದೆ! ಇಷ್ಟು ದುಬಾರಿಯಾಗಿದ್ದರೂ ಈ ಎಲ್ಲಾ ಶೋಗಳು ಹೌಸ್‌ಫುಲ್ ಆಗಿದೆ!! ಹಾಗೇ ಇನ್ನೂ ಎರಡು ನಾರ್ಮಲ್ ಶೋಗಳು ಕೂಡ ಫುಲ್ ಆಗಿದ್ದು, ಅವುಗಳ ಟಿಕೆಟ್ ದರ 800, 550 ಮತ್ತು 400 ಇದೆ.

ಕರ್ನಾಟಕ ಸರ್ಕಾರ ಕನ್ನಡ ಹಾಗೂ ಇತರೆ ಎಲ್ಲಾ ಭಾಷೆಗಳಿಗೆ ಏಕ ರೂಪದ ದರ ನಿಗಧಿ ಪಡಿಸಿ, ಟಿಕೆಟ್ ದರವನ್ನು 200 ರೂಪಾಯಿಗೆ ನಿಗಧಿಪಡಿಸಿ, ಈ ಹಿನ್ನಲೆಯಲ್ಲಿ ನೋಟಿಫಿಕೆಷನ್ ಕೂಡ ಹೊರಡಿಸಿದೆ ಆದರೆ, ಈ ಬಗ್ಗೆ ವಿತರಕರಿಂದ ಮತ್ತು ಚಿತ್ರಮಂದಿರದ ಮಾಲೀಕರಿಂದ ಇನ್ನೂ ಕ್ಲಾರಿಟಿ ಬಂದಿಲ್ಲ! ಮಲ್ಟಿಪ್ಲೆಕ್ಸ್ ಹಾಗೂ ಸಿಂಗಲ್ ಸ್ಕ್ರೀನ್ ಎರಡರಲ್ಲೂ ಟಿಕೆಟ್ ಬೆಲೆ 200ಇರುತ್ತಾ? ಅನ್ನೋದಕ್ಕೆ ಸ್ಪಷ್ಟತೆಯೇ ಸಿಕ್ಕಿಲ್ಲ! ಬಿಜೆಪಿ ವಿಚಾರದಲ್ಲಿ, ಮೋದಿ ವಿಚಾರದಲ್ಲಿ ಅಷ್ಟು ಸ್ಟ್ರಾಂಗ್ ಆಗಿರುವ ಸಿಎಂ ಸಿದ್ದರಾಮಯ್ಯ ಈ ವಿಚಾರದಲ್ಲಿ ಇನ್ನೂ ಯಾಕೆ ಸ್ಟ್ರಾಂಗ್ ಡಿಸಿಶನ್ ತೆಗೆದುಕೊಳ್ತಾ ಇಲ್ವೋ ಗೊತ್ತಾಗ್ತಾ ಇಲ್ಲಾ!! ☯

# ನಟಿ ರನ್ಯಾ ರಾವ್‌ಗೆ ಕಾಫಿಪೋಸಾ ಕಾಟ!

ಚಿನ್ನದ ಕಳ್ಳಸಾಗಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನ ಕ್ಕೊಳಗಾಗಿ ಜೈಲಿನಲ್ಲಿರುವ 'ರನ್ನ' ನಟಿ ರನ್ಯಾರಾವ್‌ಗೆ ಕಾಫಿಪೋಸಾ ಕಾಯ್ದೆ ಅಡಿಯಲ್ಲಿ ಒಂದು ವರ್ಷ ಜೈಲು ಶಿಕ್ಷೆ ವಿಧಿಸಲಾಗಿದ್ದು, ಜಾಮೀನು ಪಡೆಯುವ ಅವಕಾಶವೇ ಇಲ್ಲದಂತಾಗಿದೆ! ರನ್ಯಾ ರಾವ್ ವಿರುದ್ಧ ವಿದೇಶಿ ವಿನಿಮಯ ನಿಯಂತ್ರಣ ಮತ್ತು ಕಳ್ಳಸಾಗಣೆ ಚಟುವಟಿಕೆಗಳ ತಡೆ ಕಾಯ್ದೆಯನ್ನು (ಕಾಫಿಪೋಸಾ) ಜಾರಿ ಮಾಡಲಾಗಿದ್ದು, ಈ ವಿಷಯವನ್ನು ನಿರ್ವಹಿಸುವ ಸಲಹಾ ಮಂಡಳಿಯು ಇತ್ತೀಚೆಗೆ ರನ್ಯಾ ರಾವ್ ಅವರಿಗೆ ಅವರ ಬಂಧನದ ಸಂಪೂರ್ಣ ಅವಧಿಯಲ್ಲಿ ಜಾಮೀನು ನೀಡಲಾಗುವುದಿಲ್ಲ ಎಂದು ತೀರ್ಪು ನೀಡಿದೆ.

ಕಾಫಿಪೋಸಾ ಕಾಯ್ದೆಯ ಅಡಿಯಲ್ಲಿ ರನ್ಯಾ ರಾವ್ ಹಾಗೂ ಇತರ ಆರೋಪಿಗಳು ಒಂದು ವರ್ಷ ಜೈಲಿನಿಂದ ಹೊರಬರುವ ಹಾಗಿಲ್ಲ. ಈ ಕುರಿತು ಕಾಫಿಪೋಸಾ ಸಲಹಾ ಮಂಡಳಿಯು ಕಂದಾಯ ಗುಪ್ತಚರ ನಿರ್ದೇಶನಾಲಯಕ್ಕೆ ಮಾಹಿತಿ ನೀಡಿದೆ. ಅದರಂತೆ ಜೈಲು ಅಧೀಕ್ಷಕರಿಗೂ ಮಾಹಿತಿ ರವಾನೆ ಮಾಡ ಲಾಗಿದೆ. ಕಂದಾಯ ಗುಪ್ತಚರ ನಿರ್ದೇಶನಾಲಯ (DRI) ಅಧಿಕಾರಿಗಳು ನಿಗಧಿತ ಸಮಯದೊಳಗೆ ಆರೋಪಪಟ್ಟಿ ಸಲ್ಲಿಸದ ಕಾರಣಕ್ಕೆ, ಮೇ 20ರಂದು ನಗರದ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯವು ರನ್ಯಾ ಮತ್ತು ಸಹ-ಆರೋಪಿ ತರುಣ್ ರಾಜು ಅವರಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು.

2 ಲಕ್ಷ ರೂ. ಮೊತ್ತದ ಬಾಂಡ್ ಮತ್ತು ಎರಡು ಶ್ಯೂರಿಟಿ ಗಳನ್ನು ಒಳಗೊಂಡ ಷರತ್ತುಗಳ ಮೇಲೆ ಜಾಮೀನು ನೀಡಲಾಗಿ ದ್ದರೂ, ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ರನ್ಯಾ ರಾವ್ ಅವರ ವಿರುದ್ಧ ಕೇಂದ್ರೀಯ ಆರ್ಥಿಕ ಗುಪ್ತಚರ ಬ್ಯೂರೋ (ಸಿಇಐಬಿ) 'ಕಾಫಿಪೋಸಾ' ಕಾಯ್ದೆ ಅಡಿ ಬಂಧನದ ಆದೇಶ ಹೊರಡಿಸಿರುವ ಕಾರಣಕ್ಕೆ ಒಂದು ವರ್ಷದವರೆಗೆ ಬಿಡುಗಡೆಗೆ ಅವಕಾಶ ಇಲ್ಲದಂತಾಗಿದೆ!

ದುಬೈನಿಂದ 14.2 ಕೆಜಿ ಚಿನ್ನವನ್ನು ಕಳ್ಳಸಾಗಣೆ ಮಾಡಿದ ಆರೋಪದ ಮೇಲೆ ಮಾರ್ಚ್ 3ರಂದು ಡಿಆರ್‌ಐ ಅಧಿಕಾರಿ ಗಳು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಟಿ ರನ್ಯಾಳನ್ನ, ಆಕೆಗೆ ನೆರವು ನೀಡಿದ್ದ ತರುಣ್ ರಾಜು ಹಾಗೂ ಸಾಹಿಲ್ ಜೈನ್ ಇಬ್ಬರನ್ನೂ ಬಂಧಿಸಲಾಗಿತ್ತು.

ರನ್ಯಾ ಅವರು ಸಲ್ಲಿಸಿದ್ದ ಜಾಮೀನು ಅರ್ಜಿಗಳನ್ನು ಈ ಹಿಂದೆ ಸ್ಥಳೀಯ ನ್ಯಾಯಾಲಯಗಳು ಮತ್ತು ನಂತರ ಕರ್ನಾಟಕ ಹೈಕೋರ್ಟ್ ಎರಡು ಬಾರಿ ತಿರಸ್ಕರಿಸಿದ್ದವು. ಅಂದಹಾಗೆ, ಕಾಫಿಪೋಸಾ ಅಡಿಯಲ್ಲಿ ಬಂಧನಕ್ಕೊಳಗಾದ ವ್ಯಕ್ತಿಗಳನ್ನು ಕನಿಷ್ಠ 3 ತಿಂಗಳಿಂದ 1 ವರ್ಷದವರೆಗೆ ಜೈಲಿನಲ್ಲಿ ಇರಿಸಬಹುದು. ತೀರಾ ಗಂಭೀರ ಪ್ರಕರಣಗಳಲ್ಲಿ ಇದನ್ನು ಎರಡು ಮೂರು ವರ್ಷದವರೆಗೂ ವಿಸ್ತರಿಸ ಬಹುದು. ಈ ಕಾಯ್ದೆಯಡಿಯಲ್ಲಿ ಆರೋಪಿಗಳಿಗೆ ಜಾಮೀನು ಪಡೆಯಲು ಅವಕಾಶ ಇರುವುದಿಲ್ಲ! ಜಾಮೀನು ಪಡೆದರೂ ಈ ಅವಧಿಯಲ್ಲಿ ಅವರನ್ನು ಜೈಲಿನಿಂದ ಬಿಡುಗಡೆ ಮಾಡಲಾಗುವುದಿಲ್ಲ!! ☯




# ಪೊಲೀಸ್, ಕೋರ್ಟ್ ಹಾಗೂ ಮಾಧ್ಯಮ ಸಹಾಯವಾಣಿ

- ಗಂಡನಿಂದ ತೊಂದರೆಯೇ? ಪತ್ನಿಯಿಂದ ಕಿರುಕುಳವೇ?
- ಪ್ರೇಮಿಯಿಂದ ಬ್ಲ್ಯಾಕ್‌ಮೇಲ್ ಆಗುತ್ತಿದೆಯೇ?
- ಹೊಸದಾಗಿ ಮದುವೆಯಾಗಿ ಪತಿ ಪತ್ನಿ ಹೊಂದಾಣಿಕೆ ಇಲ್ಲದೆ ನಿಮಗೆ ಕೌನ್ಸಿಲಿಂಗ್ ಅಗತ್ಯವಿದೆಯೇ?
- ಅಣ್ಣ ತಮ್ಮಂದಿರ ನಡುವೆ, ಅಕ್ಕ ತಂಗಿಯರ ನಡುವೆ ಅಥವಾ ದಾಯದಿಗಳ ನಡುವೆ ಜಮೀನು-ಕೋರ್ಟ್ ವ್ಯಾಜ್ಯಗಳಿವೆಯೇ? ಪೊಲೀಸರು ನಿಮ್ಮ ದೂರರ್ಜಿ ತೆಗೆದುಕೊಳ್ಳುತ್ತಿಲ್ಲವೇ? ಅಥವಾ ಅರ್ಜಿಗೆ ಸರಿಯಾಗಿ ಸ್ಪಂಧಿಸುತ್ತಿಲ್ಲವೇ?
- ಪೋಷಕರೇ, ನಿಮ್ಮ ಮಕ್ಕಳು ನಿಮ್ಮ ಆಸ್ತಿ ಪಾಸ್ತಿ ಹೊಡೆದುಕೊಂಡು ಊಟ ಹಾಕದೆ ಮನೆಯಿಂದ ಹೊರ ಹಾಕಿದ್ದಾರೆಯೇ?
- ಅಪರಿಚಿತ ಪುರುಷ/ಮಹಿಳೆ ಯಿಂದ ತೊಂದರೆ (ಬ್ಲ್ಯಾಕ್ ಮೇಲ್) ಆಗುತ್ತಿದೆಯೇ?
- ಮಹಿಳೆಯರೇ/ ಪುರುಷರೇ ಮಹಿಳಾ ಪೊಲೀಸ್ ಠಾಣೆ ಹಾಗೂ ಮಹಿಳಾ ಆಯೋಗದಿಂದ ನಿಮಗೇನಾದರೂ ಸಹಾಯ ಆಗಬೇಕೇ?
- ಹಣ ಕಾಸು ವ್ಯವಹಾರದಲ್ಲಿ ಮೋಸವಾಗಿ ವಸೂಲಿ ಮಾಡಲಾಗದೆ ಪರದಾಡುತ್ತಿದ್ದೀರಾ? ಅಥವಾ ಯಾರಾದರೂ ಸಾಲ ಕೊಟ್ಟು ಬಡ್ಡಿ ಚಕ್ರಬಡ್ಡಿ ವಿಧಿಸಿ ನಿಮ್ಮ ನೆಮ್ಮದಿ ಹಾಳುಗೆಡವಿದ್ದಾರ? ತಾಲೂಕು ಕಚೇರಿ, ನಾಡ ಕಚೇರಿ, ಸಬ್-ರಿಜಿಸ್ಟ್ರಾರ್ ಕಚೇರಿಯಲ್ಲಿ ನಿಮ್ಮ ಜಮೀನಿಗೆ ಸಂಬಂಧಪಟ್ಟ ಕೆಲಸವಾಗಬೇಕೆ?
- ಯಾರಾದರೂ ಪುಂಡ ಪೋಕರಿಗಳಿಂದ, ರೌಡಿಗಳಿಂದ, ರಾಜಕಾರಣಿಗಳಿಂದ ನಿಮಗೆ ತೊಂದರೆ ಇದೆಯೇ?

ಚಿಂತಿಸಬೇಡಿ – ಹೆದರಬೇಡಿ! ಯಾವುದೇ ಸಮಸ್ಯೆ ಇರಲಿ, ಈ ಎಲ್ಲಾ ಸಮಸ್ಯೆಗಳಿಗೆ 'ಕಾನೂನು' ಪರಿಧಿಯೊಳಗೆ ಹೋರಾಡಲು ಮತ್ತು ಗೆಲ್ಲಲು ನಿಮಗೆ ಸಲಹೆ ನೀಡಲು **'ಪೊಲೀಸ್ ನ್ಯೂಸ್ ಸಹಾಯವಾಣಿ'** ಸಿದ್ಧವಿದೆ. ಸಂಬಂಧಪಟ್ಟ ಅಧಿಕಾರಿಗಳು/ ವಕೀಲರು/ ವ್ಯಕ್ತಿಗಳು/ಇಲಾಖೆಯೊಂದಿಗೆ ಮಾತನಾಡಿ ನಿಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಕಾನೂನು ಹೋರಾಟ ಮಾಡಲು ಬೇಕಾದ ಅತ್ಯುತ್ತಮ ಸಲಹೆ ಸೂಚನೆಗಳನ್ನು ಇಲ್ಲಿ ಕೊಡಲಾಗುತ್ತದೆ.

ಸಂಪರ್ಕಕ್ಕಾಗಿ

☎ 080-23588510 9513892666, 8884452699 policenewsreporter@gmail.com


Vol. 41 No. 10 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com